ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



ಮೊದಲ ವಿಶ್ವ ಜ್ಯೂನಿಯರ್ ಅಥ್ಲೆಟಿಕ್ ಚಿನ್ನ ಗೆದ್ದ

ಹಿಮಾ ದಾಸ್

ಸಂಪುಟ 12 | ಸಂಚಿಕೆ 31 | ಜುಲೈ 30–ಆಗಸ್ಟ್ 5, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಇಂಡಿಯಾ 'ಲಿಂಚಿಸ್ತಾನ' ಆಗಬಾರದು

ಮೋದಿಕೇರ್ ಗೋರಖಪುರ ಸಾವಿಗೆ ಮದ್ದೆ?



ಆಗಸ್ಟ 9 ಜೈಲ್ ಭರೋಗೆ ತಯಾರಿ



ಬಂಗಾಳ-ತ್ರಿಪುರಾ ದಾಳಿ: ಪ್ರತಿಭಟನೆ



ಶಿರೂರು ಸ್ವಾಮಿ ಕೊಲೆ? ಸಮಗ್ರ ತನಿಖೆಯಾಗಲಿ



ಇಮ್ರಾನ್ ಪಾಕಿಸ್ತಾನದ ಕ್ಯಾಪ್ಟನ್?





ಜುಲೈ 24: ಬಿಜೆಪಿ–ಐಪಿಎಫ್‌ಟಿ ಮತ್ತು ಟಿಎಂಸಿ ಭಯೋತ್ಪಾದನೆಯ ವಿರುದ್ಧ ರಾಷ್ಟ್ರೀಯ ಪ್ರತಿಭಟನೆ

ಎಡಪಕ್ಷಗಳ ಕರೆಯ ಮೇರೆಗೆ ಜುಲೈ 24ರಂದು ತ್ರಿಪುರಾದಲ್ಲಿ ಬಿಜೆಪಿ–ಐಪಿಎಫ್‌ಟಿ ಮತ್ತು ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ನಡೆಸುತ್ತಿರುವ ಭಯೋತ್ಪಾದನೆಯ ವಿರುದ್ಧ ರಾಷ್ಟ್ರೀಯ ಪ್ರತಿಭಟನೆ ನಡೆದಿದೆ.

ನವದೆಹಲಿಯಲ್ಲಿ ಸಂಸದ್ ಮಾರ್ಗದಲ್ಲಿ ನಡೆದ ಪ್ರತಿಭನಟೆಯಲ್ಲಿ ಸಿಪಿಯ(ಎಂ), ಸಿಪಿಐ, ಸಿಪಿಐ(ಎಂ–ಎಲ್)–ಲಿಬರೇಷನ್, ಫಾರ್ವರ್ಡ್ ಬ್ಲಾಕ್ ಮತ್ತು ಆರ್‌ಎಸ್‌ಪಿಯ ಕೇಂದ್ರೀಯ ಮುಖಂಡರು ಭಾಗವಹಿಸಿದರು. ದಿಲ್ಲಿ ಮತ್ತು ಸುತ್ತಮುತ್ತಲಿನ ಹರ್ಯಾಣ ಮತ್ತು ಉತ್ತರಪ್ರದೇಶದ ಜಿಲ್ಲೆಗಳ ಎಡಪಕ್ಷಗಳ ಕಾರ್ಯಕರ್ತರು ಮತ್ತು ಇತರ ಪ್ರತಿಭಟನಾಕಾರರನ್ನು ಉದ್ದೇಶಿಸಿ ಅವರು ಮಾತನಾಡಿದರು.

ತ್ರಿಪುರಾ ಮತ್ತು ಪಶ್ಚಿಮ ಬಂಗಾಲದ ಪ್ರಮುಖ ಕಾರ್ಯಕರ್ತರು ಮತ್ತು ಎಡಪಕ್ಷಗಳ ಸಂಸತ್ ಸದಸ್ಯರೂ ದಿಲ್ಲಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಇದಕ್ಕೆ ಮೊದಲು ಈ ಸಂಸತ್‌ಸದಸ್ಯರು ಸಂಸತ್ತಿನ ಎದುರು ಪ್ರತಿಭಟನೆ ನಡೆಸಿದರು. ಲೋಕಸಭೆಯಲ್ಲಿ ಜಿತೇಂದ್ರ ಚೌಧುರಿ ಮತ್ತು ಮಹಮ್ಮದ್ ಸಲೀಂ ಈ ವಿಷಯವನ್ನು ಎತ್ತಿದರು.

ಸಿಪಿಐ(ಎಂ)ನ ಸೀತಾರಾಮ್ ಯೆಚುರಿ ಮತ್ತು ಪ್ರಕಾಶ ಕಾರಟ್ , ಸಿಪಿಐ ನ ಎಸ್,ಸುಧಾಕರ ರೆಡ್ಡಿ, ಸಿಪಿಐ(ಎಂ–ಎಲ್)–ಲಿಬರೇಷನ್‌ನ ದೀಪಂಕರ್ ಭಟ್ಟಾಚಾರ್ಯ, ಫಾರ್ವರ್ಡ್ ಬ್ಲಾಕ್‌ನ ದೇಬಬ್ರತ ಬಿಸ್ವಾಸ್, ಮತ್ತು ಆರ್‌ಎಸ್‌ಪಿಯ ಅಶೋಕ ಘೋಷ್ ಭಾಗವಹಿಸಿದ್ದರು.

ಸೀತಾರಾಮ್ ಯೆಚುರಿ ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ಹರಿಯಬಿಟ್ಟಿರುವ ಭಯೋತ್ಪಾದನೆಯ ಆಳವನ್ನು ಬಿಂಬಿಸುತ್ತ ಟಿಎಂಸಿ ರಾಜ್ಯಭಾರದಲ್ಲಿ 200ಕ್ಕೂ ಹೆಚ್ಚು ಎಡ ಕಾರ್ಯಕರ್ತರ ಹತ್ಯೆಯಾಗಿದೆ ಎಂದು ನೆನಪಿಸಿದರು. ಬಿಜೆಪಿ ಮತ್ತು ಟಿಎಂಸಿ ಇಬ್ಬರೂ ಕೋಮುವಾದದ ಸ್ಪರ್ಧೆಗಿಳಿದಿದ್ದಾರೆ. ಅವರಿಬ್ಬರ ನಡುವಿನ ಮೈತ್ರಿ ಈಗ ಗುಪ್ತವಾಗಿ ಉಳಿದಿಲ್ಲ. ಪ್ರಜಾಪ್ರಭುತ್ವ ಮೌಲ್ಯಗಳನ್ನು ಭದ್ರಗೊಳಿಸುವ ಮತ್ತು ಸಂವಿಧಾನದ ಆಶಯಗಳನ್ನು ರಕ್ಷಿಸಿಕೊಳ್ಳುವ ಎಡಶಕ್ತಿಗಳ ಹೋರಾಟ ತ್ರಿಪುರಾದಂತಹ ಎಡ ನೆಲೆಗಳಲ್ಲಿನ ಹಲ್ಲೆಗಳಿಂದಾಗಿ ದುರ್ಬಲಗೊಂಡಿದೆ. ಸಮಾಜದ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಇದನ್ನೆದುರಿಸಿ ಹೋರಾಡಬೇಕಾಗಿದೆ ಎಂದರು.

ಸಿಪಿಐ ನ ಎಸ್..ಸುಧಾಕರ ರೆಡ್ಡಿ ಈ ಎರಡೂ ರಾಜ್ಯಗಳ ಆಡಳಿತಗಳನ್ನು ಎಡ ಕಾರ್ಯಕರ್ತರನ್ನು ಬೆದರಿಸಲು ಮತ್ತು ಭಯೋತ್ಪಾದನೆ ಹರಡಲು ಬಳಸಿಕೊಳ್ಳಲಾಗುತ್ತಿದೆ ಎಂದರು. ಈ ಎರಡೂ ರಾಜ್ಯಗಳಲ್ಲಿ ಹಿಂದೆ ಎಡಪಕ್ಷಗಳ ಆಡಳಿತವಿತ್ತು, ಅದರ ವಿರುದ್ಧ ಜನಗಳು ವಿರುದ್ಧ ತಿರುಗಿ ಬಿದ್ದಿದ್ದಾರೆ ಎಂಬ ಮಾಧ್ಯಮಗಳ ಒಂದು ವಿಭಾಗದ ಮೂಲಕ ಹರಡಲಾಗುತ್ತಿರುವ ಸುಳ್ಳುಗಳನ್ನು ಬಯಲಿಗೆಳೆಯುಬೇಕಾಗಿದೆ ಎಂದು ಸಿಪಿಐ(ಎಂ–ಎಲ್)–ಲಿಬರೇಷನ್‌ನ ದೀಪಂಕರ್ ಭಟ್ಟಾಚಾರ್ಯ ಹೇಳಿದರು.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ತ್ರಿಪುರಾದ ಮಾಜಿ ಮುಖ್ಯಮಂತ್ರಿ ಮಾಣಿಕ್ ಸರಕಾರ್ ಹಾಗೂ ಪಶ್ಚಿಮ ಬಂಗಾಲ ಎಡರಂಗದ ಸಂಯೋಜಕರಾದ ಬಿಮನ್ ಬಸು ಕೂಡ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ತ್ರಿಪುರಾ ಮತ್ತು ಪಶ್ಚಿಮಬಂಗಾಲ ಸೇರಿದಂತೆ ದೇಶದ ಎಲ್ಲೆಡೆಗಳಲ್ಲಿ ಬಿಜೆಪಿ–ಐಪಿಎಫ್‌ಟಿ ಮತ್ತು ಟಿಎಂಸಿಯ ಭಯೋತ್ಪಾದಕ ಕೃತ್ಯಗಳ ವಿರುದ್ಧ ಪ್ರತಿಭಟನೆಗಳು ನಡೆದಿವೆ.


ಸಂಸತ್ತಿನ ಎದುರು ಎಡಪಕ್ಷಗಳ ಎಂಪಿಗಳ ಪ್ರತಿಭಟನೆ

ಅಲ್ವಾರ್ ಲಿಂಚಿಂಗ್: ಬಲಿಯಾದವರ ಮನೆಗೆ ಸಿಪಿಐ(ಎಂ) ನಿಯೋಗದ ಭೇಟಿ

ಅಕ್ಬರ್‌ಖಾನ್ ಅಲಿಯಾಸ್ ರಕ್ಬರ್ ಖಾನ್ ಹರ್ಯಾಣದ ಕೊಲ್‌ಗಾಂವ್‌ನಲ್ಲಿ ಹೈನುಗಾರಿಕೆಯಲ್ಲಿ ತೊಡಗಿದ್ದ ಒಬ್ಬ ಬಡವ ರೈತ. ಆತ ತನ್ನ ಮಿತ್ರ ಅಸ್ಲಾಂನೊಂದಿಗೆ ಸಮೀಪದ ಅಲ್ವಾರ್‌ನಿಂದ ಹಾಲು ಉತ್ಪಾದನೆಗೆ ಎರಡು ಹಸುಗಳು ಮತ್ತು ಕರುಗಳನ್ನು ಖರೀದಿಸಿ ಮನೆಗೆ ಮರಳುತ್ತಿದ್ದ.

ಆತನಿಗೆ 1 ವರ್ಷದಿಂದ 14 ವರ್ಷ ವಯಸ್ಸಿನ ಏಳು ಮಕ್ಕಳ ತಂದೆ. ಆತನ ದುಡಿಮೆಯಿಂದಲೇ ಬದುಕು ಸಾಗಿಸುತ್ತಿದ್ದ ಕಡುಬಡತನದಲ್ಲಿರುವ ಆತನ ಕುಟುಂಬಕ್ಕೆ ಆತನ ಸಾವಿನಿಂದ ದಿಕ್ಕೇ ತೋಚದಂತಾಗಿದೆ. ಇದು ಸಿಪಿಐ(ಎಂ) ನಿಯೋಗ ಆತನ ದುಃಖತಪ್ತ ಕುಟುಂಬವನ್ನು ಭೇಟಿ ಮಾಡಲು ಹೋದಾಗ ಕಣ್ಣಾರೆ ಕಂಡ ಅಂಶ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ನೀಲೋತ್ಪಲ ಬಸು ಮತ್ತು ಹರ್ಯಾಣ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸುರಿಂದರ್ ಸಿಂಗ್ ಈ ನಿಯೋಗದಲ್ಲಿದ್ದರು.

ದೇಶದ ಸರ್ವೋಚ್ಚ ನ್ಯಾಯಾಲಯ ಗುಂಪುಗೂಡಿ ಸಾಯಬಡಿಯುವುದನ್ನು ಬಲವಾಗಿ ಖಂಡಿಸಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಇದನ್ನು ಅತ್ಯಂತ ಗಂಭೀರವಾಗಿ ಕಾಣಬೇಕು ಎಂದು ತಾಕೀತು ಮಾಡಿದ ಕೆಲವೇ ದಿನಗಳಲ್ಲಿ ಜುಲೈ20–21ರ ನಡುರಾತ್ರಿ

ಪುಟ 7 ಕ್ಕೆ



ಯುಜಿಸಿ ರದ್ದತಿ ಮಸೂದೆ ದೇಶದ ಉನ್ನತ ಶಿಕ್ಷಣಕ್ಕೆ ಮಾರಕ – ಪ್ರಧಾನಿಗಳಿಗೆ ಸಿಪಿಐ(ಎಂ) ಪತ್ರ



ಎನ್‌ಡಿಎ–2 ಸರಕಾರದ ಅಡಿಯಲ್ಲಿ ಉನ್ನತ ಶಿಕ್ಷಣದ ಸುಧಾರಣೆ ಎಂಬುದರಲ್ಲಿ ಇರುವುದು ಒಂದು ಅವಳಿ ಹುನ್ನಾರ. ಇದು ಸ್ವತಂತ್ರ ಭಾರತದಲ್ಲಿ ಶಿಕ್ಷಣದ ಬುನಾದಿಗಳನ್ನು ಧ್ವಂಸ ಮಾಡುತ್ತದೆ ಮತ್ತು ಜನಸಾಮಾನ್ಯರನ್ನು ಕಲಿಕೆ, ಉದ್ಯೋಗ ಮತ್ತು ಸಾಮಾಜಿಕ ವಿಶ್ವಾಸದ ಮೂಲಕ ಸಬಲೀಕರಿಸುವುದರಲ್ಲಿ ವಹಿಸಿದ್ದ ಅದರ ಹಿತಕಾರಕ ಪಾತ್ರಕ್ಕೆ ಸಂಚಕಾರ ತರುತ್ತದೆ. ಈ ಅವಳಿ ಉದ್ದೇಶಗಳೆಂದರೆ (1)ಖಾಸಗೀಕರಣ, (2)ಸಾಮಾಜಿಕ ಬಹಿಷ್ಕರಣ. ಮಾನವ ಸಂಪನ್ಮೂಲ ಮಂತ್ರಾಲಯ ಮಳೆಗಾಲದ ಅಧಿವೇಶನದಲ್ಲಿ ಮಂಡಿಸಬೇಕೆಂದಿರುವ ಹೆಚ್‌ಇಸಿಐ(ಯುಜಿಸಿ ಕಾಯ್ದೆ ರದ್ದತಿ) ಮಸೂದೆ 2018ರಲ್ಲಿ ಇದು ಬಲವಾಗಿ ಬಿಂಬಿತಗೊಂಡಿದೆ ಎಂದು ಈ ಮಸೂದೆಯ ಕುರಿತು ಸಿಪಿಐ(ಎಂ)ನ ಅಭಿಪ್ರಾಯವನ್ನು ವಿಷದಪಡಿಸುತ್ತ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಪ್ರಧಾನ ಮಂತ್ರಿಗಳಿಗೆ ಜುಲೈ 26ರಂದು ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ಒಂದು ದೇಶವನ್ನು ಧ್ವಂಸ ಮಾಡಲು ಹೊರಗಿನ ಸೇನೆ ಬೇಕಾಗಿಲ್ಲ, ಆ ದೇಶದ ಶಿಕ್ಷಣ ವ್ಯವಸ್ಥೆಯನ್ನು ಧ್ವಂಸಪಡಿಸಿದರೆ ಸಾಕು ಎಂಬ ಉಕ್ತಿ ಇದೆ. ಹಾಗಾಗದೆ ಇರಬೇಕಾದರೆ ಈ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು, ಏಕೆಂದರೆ ಇದನ್ನು ಅಂಗೀಕರಿಸಿದರೆ ಇದು ದೇಶದಲ್ಲಿ ಒಟ್ಟಾರೆಯಾಗಿ ಉನ್ನತ ಶಿಕ್ಷಣದ ಮೇಲೆ, ನಿರ್ದಿಷ್ಟವಾಗಿ ಸಾರ್ವಜನಿಕ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಯೆಚುರಿ ತಮ್ಮ ಪತ್ರದಲ್ಲಿ ಎಚ್ಚರಿಸಿದ್ದಾರೆ.

ಈ ಪತ್ರವನ್ನು ಒಂದು ಪತ್ರಿಕಾ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಾಯಿತು. ಇದನ್ನು ಉದ್ದೇಶಿಸಿ ಯೆಚುರಿ ಮತ್ತು ಇನ್ನೊಬ್ಬ ಪೊಲಿಟ್‌ಬ್ಯುರೊ ಸದಸ್ಯರಾದ ನೀಲೋತ್ಪಲ ಬಸು ಮಾತನಾಡಿದರು.

1956 ರಲ್ಲಿ ಯುಜಿಸಿ ಸ್ಥಾಪಿಸಿದಾಗ 27 ವಿಶ್ವದ್ಯಾಲಯಗಳಿದ್ದವು, ಈಗ 850 ಇವೆ, ಆದ್ದರಿಂದ ಅದನ್ನು ರದ್ದು ಮಾಡಲಾಗುತ್ತಿದೆ ಎಂಬ ಸರಕಾರದ ಸಮರ್ಥನೆ ವಿಚಿತ್ರವಾಗಿದೆ. ವಾಸ್ತವವಾಗಿ ಇದರ ಕೀರ್ತಿ ಯುಜಿಸಿಗೆ ಸಲ್ಲಬೇಕು ಎಂದ ಯೆಚುರಿಯವರು ಮೋದಿ ಸರಕಾರ ಶಿಕ್ಷಣದ ಖಾಸಗೀಕರಣ, ಕೋಮುವಾದೀಕರಣ ಮತ್ತು ಕೆಂದ್ರೀಕರಣದ ತನ್ನ ಧೋರಣೆಯ ಭಾಗವಾಗಿ ಇದನ್ನು ತರುತ್ತಿದೆ ಎಂದರು. ಪ್ರಮಾಣ, ಗುಣಮಟ್ಟ ಮತ್ತು ಸಮತ್ವ–ಉನ್ನತ ಶಿಕ್ಷಣದ ಈ ಮೂರೂ ಆಯಾಮಗಳ ಮೇಲೆ ಈ ಮಸೂದೆ ದಾಳಿ ಮಾಡುತ್ತಿದೆ.

ಇದನ್ನು ಸಾಕಷ್ಟು ವ್ಯಾಪಕ ಸಮಾಲೋಚನೆ ಇಲ್ಲದೆ ತರಬಾರದು ಎಂದು ಸರಕಾರವನ್ನು ಆಗ್ರಹಿಸಿದ ಯೆಚುರಿಯುವರು, ಸಿಪಿಐ(ಎಂ) **ಎಲ್ಲ ಜಾತ್ಯತೀತ, ಪ್ರಜಾಪ್ರಭುತ್ವವಾದಿ ಪಕ್ಷಗಳು, ಶಿಕ್ಷಣವೇತ್ತರು, ಬುದ್ಧಿಜೀವಿಗಳು, ಬೋಧಕ ವರ್ಗ, ಮತ್ತು ವಿದ್ಯಾರ್ಥಿಗಳು ಹಾಗೂ ಈ ಬಗ್ಗೆ ಕಾಳಜಿ ಇರುವ ಎಲ್ಲ ವ್ಯಕ್ತಿಗಳು ಮತ್ತು ಸಂಘಟನೆಗಳ ಬಳಿ ಹೋಗಿ ಒಂದು ವಿಶಾಲ ವೇದಿಕೆಯಿಂದ ಇದಕ್ಕೆ ಪ್ರತಿರೋಧವನ್ನು ಕಟ್ಟುತ್ತದೆ ಎಂದರು.**

ಸಂಪಾದಕೀಯ

ಶಿರೂರು ಸ್ವಾಮಿ ಕೊಲೆ ? – ಸಮಗ್ರ ತನಿಖೆಯಾಗಲಿ

ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಶಿರೂರು ಮಠದ ಸ್ವಾಮಿಜಿ ಅವರ ಅನುಮಾನಾಸ್ಪದ ಸಾವು ಹಲವು ಪ್ರಶ್ನೆಗಳನ್ನು ಎಬ್ಬಿಸಿದೆ. ಈಗಾಗಲೇ ಹಲವು ಕಾರಣಗಳಿಗೆ ಸುದ್ದಿಯಲ್ಲಿದ್ದ ಶಿರೂರು ಸ್ವಾಮಿಜಿ ಹಠಾತ್ ಸಾವು ಮತ್ತು ಸಾವು ವಿಷಪ್ರಾಶನದಿಂದ ಆಗಿರುವ ಸಾಧ್ಯತೆ ಬಗ್ಗೆ ಮಣಿಪಾಲದ ವೈದ್ಯಾಧಿಕಾರಿ ಹೇಳಿಕೆ ಉಡುಪಿ ಮಾತ್ರವಲ್ಲ, ಇಡೀ ರಾಜ್ಯಕ್ಕೆ ಶಾಕಿಂಗ್ ಸುದ್ದಿಯಾಗಿತ್ತು. ಇದರ ಬೆನ್ನಲ್ಲೇ ಊಹಾಪೋಹಗಳು ಆರಂಭವಾಗುವ ಮೊದಲೇ, ಪೇಜಾವರ ಮಠದ ಸ್ವಾಮಿಜಿ ಪತ್ರಿಕಾ ಗೋಷ್ಟಿ ಕರೆದು ಹೆಚ್ಚಿನ ಮದ್ಯ ಸೇವನೆ ಅಥವಾ ಮಹಿಳೆಯೊಬ್ಬಳ ಪ್ರಕರಣಕ್ಕೆ ಸಾವು ಸಂಬಂಧಿಸಿದೆ. ಅಷ್ಟಮಠಗಳಿಗೂ ಇದಕ್ಕೂ ಏನು ಸಂಬಂಧವಿಲ್ಲ ಎಂದು ಹೇಳಿಕೆ ನೀಡಿರುವುದು ಸಹಜವಾಗಿಯೇ ಹುಬ್ಬೇರಿಸುವಂತೆ ಮಾಡಿದೆ. ವಿಷದಿಂದ ಸಾವು ಆಗಿರುವುದು ಹೆಚ್ಚು ಕಡಿಮೆ ಖಚಿತವಾಗಿದ್ದು, ಅದು ಆಕಸ್ಮಿಕವಾಗಿ ಆಹಾರ ಮತ್ತು ಪಾತ್ರೆಯಿಂದ ಬಂದಿದ್ದೋ, ಕೊಲೆ ಮಾಡಲು ಯಾರಾದರೂ ವಿಷ ಬೆರೆಸಿದ್ದಾರೋ ಎಂಬುದಷ್ಟೇ ತನಿಖೆಯ ವಿಷಯವಾಗಿರುವಂತಿದೆ.

ಶಿರೂರು ಮಠದ ಸ್ವಾಮಿಜಿ ಮತ್ತು ಇತರ ಮಠಗಳ ಅದರಲ್ಲೂ ಪೇಜಾವರ ಸ್ವಾಮಿಜಿಯ ನಡುವೆ ತೀವ್ರ ಭಿನ್ನಾಭಿಪ್ರಾಯಗಳು ಇದ್ದು, ಅದು ಕೋರ್ಟನ್ನೂ ಮುಟ್ಟಿತ್ತು. ತಮ್ಮ ಜೀವಕ್ಕೆ ಅಪಾಯವಿದೆ, ಗನ್ ಮ್ಯಾನ್ ಇಟ್ಟುಕೊಳ್ಳಬೇಕಾದೀತು ಎಂದೂ ಅವರು ಇತ್ತೀಚೆಗೆ ಹೇಳಿಕೆ ನೀಡಿದ್ದರು. ತಾನೂ ಎಲ್ಲಾ ಮಠದ ಸ್ವಾಮಿಜಿಗಳೂ ಸನ್ಯಾಸತ್ವ ಪಾಲಿಸುತ್ತಿಲ್ಲ. ಅನೈತಿಕ ಸಂಬಂಧಗಳನ್ನು ಹೊಂದಿದ್ದಾರೆ ಎಂಬ ಅವರ ತಥಾಕಥಿತ ಹೇಳಿಕೆಯ ಆಡಿಯೋ ವೈರಲ್ ಆಗಿ ಟಿವಿ ವಾಹಿನಿಗಳಲ್ಲಿ ಪ್ರಸಾರವಾಗಿತ್ತು. ಅದರ ವಿರುದ್ಧ ಸೋದೆ ಮಠದ ಸ್ವಾಮಿಜಿಯಿಂದ ಕೋರ್ಟು ನೋಟಿಸ್ ಜಾರಿಯಾಗಿತ್ತು. ಪ್ರವಾಸ ಹೋಗುವಾಗ ಕೊಟ್ಟು ಹೋದ ಶಿರೂರು ಮಠದ ಪಟ್ಟದ ದೇವರಾದ ವಿಠ್ಠಲನ ವಿಗ್ರಹವನ್ನು ಶಿಷ್ಯನನ್ನು ಇನ್ನೂ ಸ್ವೀಕಾರ ಮಾಡಿಲ್ಲ ಎಂಬ ಕಾರಣಕ್ಕೆ ಮರಳಿಸಲಿಲ್ಲ ಎಂಬ ವಿಷಯದಲ್ಲಿ ಇತರ ಮಠಗಳ ಸ್ವಾಮಿಜಿಗಳ ಬಗ್ಗೆ ಅವರ ಆಕ್ರೋಶ ತೀವ್ರವಾಗಿತ್ತು. ಅದರ ಬಗ್ಗೆ ಕರೆದ ಮಠಾಧೀಶರ ಸಭೆಗೆ ಹಾಜರಾಗಲು ನಿರಾಕರಿಸಿದ ಶಿರೂರು ಸ್ವಾಮಿಜಿ ಕೋರ್ಟಿನಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡುವ ಬಗ್ಗೆ ಎಚ್ಚರಿಕೆ ಕೊಟ್ಟಿದ್ದರು. ಉಡುಪಿ ಕ್ಷೇತ್ರದಿಂದ ಪಕ್ಷೇತರರಾಗಿ ಶಿರೂರು ಸ್ವಾಮಿಜಿ ನಾಮಪತ್ರ ಸಲ್ಲಿಸಿದ್ದರ ಬಗೆಗೂ ಇತರ ಮಠಾಧೀಶರ ತೀವ್ರ ವಿರೋಧವಿತ್ತು. ಆದ್ದರಿಂದ ಈ ಪ್ರಕರಣಕ್ಕೆ ರಾಜಕೀಯ ಆಯಾಮವೂ ಇದೆ.



ಈ ಸರಣಿ ವಿವಾದಗಳ ಮತ್ತು ಪೇಜಾವರ ಸ್ವಾಮಿಜಿ ಹೇಳಿಕೆಯ ಹಿನ್ನೆಲೆಯಲ್ಲಿ ಈ ಪ್ರಕರಣ ಹೈ-ಪ್ರೊಫೈಲ್ ಆಗಿದ್ದು, ಪ್ರಭಾವಿ ವ್ಯಕ್ತಿಗಳು ಇದರಲ್ಲಿ ಇರುವ ಸಾಧ್ಯತೆಯಿದ್ದು, ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ಆಗುವಂತೆ ಸರಕಾರ ಮುತುವರ್ಜಿ ವಹಿಸಬೇಕಾಗಿದೆ. ಮಾಧ್ಯಮಗಳಲ್ಲಿ ಪ್ರಭಾವಿ ವ್ಯಕ್ತಿಗಳು ಇರುವ ಯಾವುದೇ ಹೈ-ಪ್ರೊಫೈಲ್ ಪ್ರಕರಣಗಳಲ್ಲಿ ಆಗುವಂತೆ ಊಹಾಪೋಹಗಳು, ವಿವರವಾದ 'ತನಿಖಾ ವರದಿ'ಗಳು ಆರಂಭವಾಗಿವೆ. ಸ್ವಾಮಿಜಿಗೆ ನಿಕಟವರ್ತಿಯಾಗಿದ್ದ ಮಹಿಳೆ, ಮಠದ ರೀಯಲ್ ಎಸ್ಟೇಟ್ ಪ್ರಾಜೆಕ್ಟ್ ಒಂದರಲ್ಲಿ ವಿವಾದ ಇರುವ ಇಬ್ಬರು ಮುಂಬಯಿ ಮೂಲದ ಉದ್ಯಮಿಗಳ ಪಾತ್ರದ ಸುತ್ತ ಮಾಧ್ಯಮಗಳು ಗಿರಕಿ ಹೊಡೆಯುತ್ತಿವೆ. ಪೋಲಿಸರು ನಿರಾಕರಿಸಿದ್ದರೂ ಮಹಿಳೆಯನ್ನು ಬಂಧಿಸಲಾಗಿದೆ ಎಂಬ ಸುದ್ದಿ ಹರಡಿದೆ. ಈ ಕೊಲೆಯ ನಿಜವಾದ ಅಪರಾಧಿಗಳು ಇಂತಹ ಊಹಾಪೋಹಗಳು ವರದಿಗಳನ್ನು ಮಾಧ್ಯಮಗಳಲ್ಲಿ ಬಿತ್ತುತ್ತಿರುವ ಪೊಲೀಸ್ ತನಿಖೆಯನ್ನು ಪ್ರಭಾವಿಸುವ ಸಾಧ್ಯತೆಯಿದೆ. ಗೌರಿ ಲಂಕೇಶ್ ಕೊಲೆ ಪ್ರಕರಣದಲ್ಲಿ ಎಡಪಂಥೀಯ ಉಗ್ರರ ಪಾತ್ರವಿರಬಹುದು ಎಂದು ಮಾಧ್ಯಮಗಳಲ್ಲಿ ಊಹಾಪೋಹಗಳು ನಡೆದದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದೇ ರೀತಿಯಲ್ಲಿ ಕೊಲೆಯಾಗಿದ್ದರೆ ಆ ಕೃತ್ಯ ಎಸಗಿದವರನ್ನು ಮಾತ್ರವಲ್ಲ, ಅದರ ಹಿಂದಿರುವ ಪಿತೂರಿಗಾರರನ್ನೂ ಬಂಧಿಸಿ ಶಿಕ್ಷಿಸಲು ಕಟುವಾದ ನಿಷ್ಪಕ್ಷಪಾತ ಕ್ರಮ ಕೈಗೊಳ್ಳಬೇಕು. ಪಿತೂರಿಗಾರ ವ್ಯಕ್ತಿ ಅಥವಾ ವ್ಯಕ್ತಿಗಳು ಎಷ್ಟೇ 'ಗೌರವಾನ್ವಿತ ಸ್ಥಾನ'ದಲ್ಲಿರಲಿ, ಇದು ಆಗಬೇಕಾದ್ದು.

ಉಡುಪಿಯ ಅಷ್ಟಮಠಗಳಲ್ಲಿ ಇರಹುದಾದ ಅನೈತಿಕ ವ್ಯವಹಾರಗಳು, ರೀಯಲ್ ಎಸ್ಟೇಟ್ ದಂಧೆಗಳು, ಹಣದ ದುರುಪಯೋಗ, ವೈಷಮ್ಯ ಸಂಘರ್ಷಗಳು, ಇವುಗಳು ಬಯಲಾಗದಂತೆ ನಡೆಸುವ ಕ್ರಿಮಿನಲ್ ಕೃತ್ಯಗಳು ಹೊರ ಬರುತ್ತಿರುವುದು ಈ ಪ್ರಕರಣದ ಇನ್ನೊಂದು ಆಯಾಮ. ಸಾರ್ವಜನಿಕರ ಸಂಪನ್ಮೂಲಗಳಿಂದ ನಡೆಯುವ ಈ ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ನಡೆಯುತ್ತಿರುವ ಈ ಕಾನೂನುಬಾಹಿರ ಅವ್ಯವಹಾರಗಳ ಬಗೆಗೂ ತನಿಖೆಯಾಗಬೇಕು. ಇವುಗಳಲ್ಲಿ ಹಲವು ಸಾರ್ವಜನಿಕ ಗುಟ್ಟು. ಆದರೂ ಈ ಮಠಗಳ ಮೇಲೆ ನಂಬಿಕೆ ಭಕ್ತಿ ಇಟ್ಟುಕೊಂಡಿರುವ ಜನ ಇವು ಧಾರ್ಮಿಕ ಶ್ರದ್ಧಾ ಕೇಂದ್ರಗಳಾ ಅಥವಾ ನೈತಿಕ ಅವ್ಯವಹಾರಗಳ, ಹಣಕಾಸು ಹಗರಣಗಳ, ಕ್ರಿಮಿನಲ್ ಪಿತೂರಿಗಳ ಗೂಡಾ ಎಂದು ತಾವಾಗಿ ನಿರ್ಧರಿಸಬೇಕು. ಇವುಗಳನ್ನು ನಿಜವಾದ ಧಾರ್ಮಿಕ ಶ್ರದ್ಧಾ ಕೇಂದ್ರಗಳಾಗಿ ನಡೆಸಲು ಬೇಕಾದ ಸುಧಾರಣೆಗಳ ಬಗೆಗೂ ಭಕ್ತಾದಿಗಳು ಸಾರ್ವಜನಿಕರು ಯೋಚಿಸಬೇಕಾಗಿದೆ. ಇಂತಹ ಸುಧಾರಣೆಗಳಲ್ಲಿ ಈಗಾಗಲೇ ಚರ್ಚೆಯಾಗುತ್ತಿರುವಂತೆ, ಬಾಲ್ಯದಲ್ಲಿಯೇ ಸನ್ಯಾಸ ವಿಧಿಸಿ ಸ್ವಾಮಿಜಿಯ ಶಿಷ್ಯನಾಗಿಸುವ ಪದ್ಧತಿ ಹಾಗೂ ಮಠದ ಸ್ವಾಮಿಯೊಬ್ಬ ಸನ್ಯಾಸಿಯಾಗಿರಬೇಕೆ ಎಂಬುದೂ ಸೇರಿರಬೇಕು.

ನಾಳಿನ ಕಾರ್ಯಕ್ರಮಗಳು

ಮಾರ್ಕ್ಸ್200-ಕ್ಯಾಪಿಟಲ್150 ಪುಸ್ತಕ ಬಿಡುಗಡೆ ಮತ್ತು ವಿಚಾರ ಸಂಕಿರಣ
ನವಕರ್ನಾಟಕ ಮತ್ತು ಕ್ರಿಯಾ, ಧಾರವಾಡ, ಜುಲೈ 29

ಬಿಬಿಎಂಪಿ ಪುನರ್ರಚನೆ-ಬಿ.ಎಸ್. ಪಾಟೀಲ ವರದಿ – ಚರ್ಚೆ
ಜ್ಯೋತಿ ಬಸು ಭವನ, ಜುಲೈ 31, ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ

ಸಿಐಟಿಯು ಜಿಲ್ಲಾ ಜಾಥಾಗಳು
(ಜುಲೈ 2ನೇ ವಾರ – ಅಗಸ್ಟ 1ನೇ ವಾರ)

ರೈತರ ಜೈಲು ಭರೋ ಅಗಸ್ಟ 9
ದೇಶವ್ಯಾಪಿ, ರೈತ ಕೃಷಿಕೂಲಿಕಾರ ಸಂಘಟನೆಗಳು

ಅಹೋರಾತ್ರಿ ಸಾಮೂಹಿಕ ಜಾಗರಣೆ ಅಗಸ್ಟ 14
ಸಿಐಟಿಯು, ತಾಲೂಕು/ಜಿಲ್ಲಾ ಕೇಂದ್ರಗಳಲ್ಲಿ

ಮಜದೂರ್ ಕಿಸಾನ್ ಸಂಘರ್ಷ ರ್‍ಯಾಲಿ ಸೆಪ್ಟೆಂಬರ್ 5
ನವದೆಹಲಿಗೆ ಪಾರ್ಲಿಮೆಂಟ್ ಚಲೋ, ಕಾರ್ಮಿಕ ರೈತ ಕೃಷಿಕೂಲಿ ಸಂಘಟನೆಗಳಿಂದ ಜಂಟಿ ಕರೆ

ಅಗಸ್ಟ್ 23 : ಹಾಲು ಉತ್ಪಾದಕರ ದಿನಾಚರಣೆಗೆ ಕೆ.ಪಿ.ಆರ್.ಎಸ್. ಕರೆ

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕೇಂದ್ರದ ಸಭೆಯು ಬೆಂಗಳೂರಿನಲ್ಲಿ ದಿನಾಂಕ 25.06.2018 ರಂದು ನಡೆದಿದ್ದು, ಕೆಳಗಿನ ಎರಡು ವಿಶೇಷ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ತನ್ನ ಘಟಕಗಳಿಗೆ ಕರೆ ನೀಡಿದೆ

1) ಹಾಲು ಉತ್ಪಾದಕರ ದಿನಾಚರಣೆ:

ಅಖಿಲ ಭಾರತ ಕಿಸಾನ್ ಸಭಾವು ಹಾಲು ಉತ್ಪಾದಕರ ಹಕ್ಕೊತ್ತಾಯಗಳ ದಿನಾಚರಣೆಯನ್ನು ದಿನಾಂಕ 23.08.2018 ರಂದು ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಯುನಿಯನ್‌ಗಳ ಮುಂದೆ ದೇಶದಾದ್ಯಂತ ಹಾಲು ಉತ್ಪಾದಕರನ್ನು ಅಣಿ ನೆರೆಸಿ ಆಚರಿಸಲು ಕರೆ ನೀಡಿದೆ. ರಾಜ್ಯದಲ್ಲಿ ಸದರಿ ಕಾರ್ಯಕ್ರಮವನ್ನು ಮುಖ್ಯವಾಗಿ ಬೆಂಗಳೂರು. ಮಂಡ್ಯ, ತುಮುಕೂರು, ಚಿಕ್ಕಬಳ್ಳಾಪುರ, ಕೋಲಾರ, ಹಾಸನ, ಕಲಬುರಗಿ, ಬಳ್ಳಾರಿ, ದಕ್ಷಿಣ ಕನ್ನಡ ಮುಂತಾದ ಜಿಲ್ಲೆಗಳಲ್ಲಿ ಸಂಘಟಿಸಬೇಕು, ಎಂದು ಕರೆ ನೀಡಿದೆ.

2) ಕಾಫಿ ಬೆಳೆಗಾರರ ಅಖಿಲ ಭಾರತ ಸಮಾವೇಶ :

ಅಖಿಲ ಭಾರತ ಕಿಸಾನ್ ಸಭಾವು ಕಾಫಿ ಬೆಳೆಗಾರರ ಒಂದು ದಿನದ ಅಖಿಲ ಭಾರತ ಸಮಾವೇಶವನ್ನು ಬೆಂಗಳೂರಿನಲ್ಲಿ ಅಕ್ಟೋಬರ್ 05, 2018 ರಂದು ಕನಿಷ್ಠ 100 ಪ್ರತಿನಿಧಿಗಳಿಂದ ಸಂಘಟಿಸಲು ನಿರ್ಧರಿಸಿದೆ. ಮೊದಲ ಅರ್ಧ ದಿನ ವಿಚಾರ ಸಂಕಿರಣವನ್ನು ಸಂಘಟಿಸಲು ನಿರ್ಧರಿಸಲಾಗಿದೆ. ದಕ್ಷಿಣ ಕನ್ನಡ, ಹಾಸನ, ಚಿಕ್ಕಮಗಳೂರು, ಕೊಡಗು ಜಿಲ್ಲಾ ಸಮಿತಿಗಳು ಸಮಾವೇಶದ ಯಶಸ್ವಿಗೆ ವಿಶೇಷವಾಗಿ ಶ್ರಮಿಸಬೇಕು, ಎಂದು ಕರೆ ನೀಡಿದೆ.

ಮಾತೆಂದರೆ ಇದು

ಕನ್ನಡದ ಮಕ್ಕಳಿಗೆ ಸಂಸ್ಕೃತ, ಹಿಂದಿಗಳ ರೂಢಿಯಿಲ್ಲ, ಹಾಗಾಗಿ ಅವರಿಗೆ 'ಭಾರತ ಮಾತೆ' ಎಟುಕದ ವ್ಯಕ್ತಿ. ಅವಳ ಸಲುವಾಗಿ ಮಕ್ಕಳ ಬಾಯಿಯಿಂದ 'ಭರತ್ ಮತಾ ಕೀ ಜೈ' ಅನ್ನಿಸುವಾಗ ನಗು ಬರುತ್ತದೆ. 'ತಾಯಿಯೇ ನಿನಗೆ ನಮಸ್ಕಾರ' ಎಂಬ ಅರ್ಥದ ಮಾತುಗಳನ್ನು 'ವಂದೇ ಮಾತರಮ್' ಎಂದು ವಿನಯ ರಹಿತವಾಗಿ 'ಜೋ ಹುಷಾರ್' ಎಂಬಂತೆ ಸಾಮೂಹಿಕವಾಗಿ ಒದರಿಸುವುದನ್ನು ಕೇಳಿದಾಗ ದುಃಖವಾಗುತ್ತದೆ.

– ಡಾ. ಶಿವರಾಮ ಕಾರಂತ

ಕನಿಷ್ಟ ಕೂಲಿ-ತುಟ್ಟಿಭತ್ಯ ಜಾರಿಗೆ, ವಾರದಲ್ಲಿ 6 ದಿನಗಳ ಕೆಲಸಕ್ಕೆ ಒತ್ತಾಯಿಸಿ

ಅಗಸ್ಟ್ 7 ರಿಂದ ಬೀಡಿ ಕಾರ್ಮಿಕರಿಂದ ರಾಜ್ಯಾದ್ಯಂತ ಅನಿರ್ದಿಷ್ಟ ಪ್ರತಿಭಟನೆ

ಕರ್ನಾಟಕ ರಾಜ್ಯದಲ್ಲಿರುವ ಸರಿಸುಮಾರು 10 ಲಕ್ಷ ಬೀಡಿ ಕಾರ್ಮಿರು ಸೇರಿದಂತೆ ಬೀಡಿ ಉದ್ಯಮದಲ್ಲಿ ದುಡಿಯುತ್ತಿರುವ ಇತರೆ ಕಾರ್ಮಿಕರ ಕನಿಷ್ಠ ವೇತನವನ್ನು ದಿನಾಂಕ 01-04-2018ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ರಾಜ್ಯ ಸರ್ಕಾರದ ಅಧಿಸೂಚನೆ ಹೊರಡಿಸಿದೆ. ಇದರ ಅನ್ವಯ ಒಂದು ಸಾವಿರ ಬೀಡಿ ಸುತ್ತಲು ರೂ.210. ಕನಿಷ್ಟ ಕೂಲಿ, ಹಾಗು ಬೆಲೆ ಏರಿಕೆ ಸೂಚ್ಯಂಕದ 6843 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶ ಒಂದಕ್ಕೆ 4. ಪೈಸೆ ತುಟ್ಟಿಭತ್ಯೆ ಹಾಗು ಸೇವಾಹಿರಿತನ ಪರಿಗಣನೆಯನ್ನು ಹತ್ತು ವರ್ಷಗಳ ಮೇಲ್ಪಟ್ಟ ಸೇವೆಗೆ ಪತ್ರಿ ಒಂದು ವರ್ಷದ ಸೇವೆಗೆ ಮೂಲ ವೇತನದ 1% ರಷ್ಟು ಹೆಚ್ಚಳವನ್ನು ಆಯಾ ಕಾರ್ಮಿಕರ ಸೇವೆಗಳಿಗೆ ಅನುಗುಣವಾಗಿ ನೀಡುವಂತೆ ಸಹ ಅಧಿ ಸೂಚನೆಯಲ್ಲಿ ಅದೇಶಿಸಲಾಗಿದೆ.

ಈ ಅಂಶವನ್ನು ಪರಿಗಣಿಸಿ ದಿನಾಂಕ 01-04-2018ರಿಂದ ಮೂಲ ವೇತನ ರೂ, 210. ಹಾಗು ತುಟ್ಟಿಭತ್ಯೆ ರೂ. 10.52 ಒಳಗೊಂಡು ರೂ.220.52 ಹಾಗು ಆಯಾ ಕಾರ್ಮಿಕರ ಸೇವಾ ಹಿರಿತನವನ್ನು ಒಳಗೊಂಡ ಕೂಲಿಯನ್ನು ಜಾರಿಗೊಳಿಸಲು ಒತ್ತಾಯಿಸಿ, 2015ರಿಂದ ಬಾಕಿ ಇರುವ ತುಟ್ಟಿಭತ್ಯೆ ಒಂದು ಸಾವಿರ ಬೀಡಿಗೆ ರೂ 12.75 ರಂತೆ ಬೀಡಿ ಕಾರ್ಮಿಕರತು ಕಟ್ಟಿರುವ ಬೀಡಿಗಳ ಅಧಾರದಲ್ಲಿ ಪ್ರತಿ ಕಾರ್ಮಿಕರಿಗೆ ರೂ. 8000-12000 ತನಕ ನೀಡಬೇಕಾಗಿದೆ. ಎಲ್ಲಾ ಬೀಡಿ ಕಾರ್ಮಿಕರಿಗೆ ವಾರದಲ್ಲಿ 6 ದಿನದ ಕೆಲಸ ನೀಡಬೇಕು ತಪ್ಪಿದಲ್ಲಿ ಗ್ಯಾರೆಂಟಿಡ್ ವೇತನ ನೀಡಬೇಕು. ಬೀಡಿ ಕಾಮಿಕರಿಗೆ ಬಿಪಿಎಲ್ ಕಾರ್ಡ್ ನೀಡಬೆಕು, ಉಚಿತ ವಸತಿ ಯೋಜನೆರೂಪಿಸಿ ಮನೆ ನೀಡಬೇಕು. ಇವೇ ಮೊದಲಾದ ಬೇಡಿಕೆಗಳ ಆಧಾರದಲ್ಲಿ ಬೀಡಿ ಕಾರ್ಮಿಕರು ರಾಜ್ಯಾದ್ಯಂತ ಕಾರ್ಮಿಕ ಇಲಾಖೆಗಳ ಮುಂದೆ ಅಗಸ್ಟ್ 7, 2018 ರಿಂದ ಅನಿರ್ದಿಷ್ಟ ಕಾಲದ ಪ್ರತಿಭಟನೆಯನ್ನು ನಡೆಸಲು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ [ಸಿಐಟಿಯು] ರಾಜ್ಯ ಸಮಿತಿ ಕರೆ ನೀಡಿದೆ.

ತುಟ್ಟಿಭತ್ಯೆ

ಬೀಡಿ ಕಾರ್ಮಿಕರಿಗೆ 2015 ರಿಂದ ನೀಡಬೇಕಾದ ತುಟ್ಟಿಭತ್ಯೆ 1000 ಬೀಡಿಗೆ 12.75 ರೂ. ಹಾಗೆ ಬಾಕಿ ಉಳಿದಿದೆ. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸರ್ಕಾರವು ತಾನು ಹಿಂದೆ ನೀಡಿದ್ದ ತುಟ್ಟಿಭತ್ಯೆ ಪಾವತಿಗೆ ವಿನಾಯಿತಿ ನೀಡಿದ ಅಧಿಸೂಚನೆಯನ್ನು ಹೈಕೋರ್ಟ್‌ನ ತೀರ್ಪಿನ ನಂತರ ಹಿಂದಕ್ಕೆ ಪಡೆದಿರುತ್ತದೆ. ಈ ಹಿನ್ನೆಲೆಯಲ್ಲಿ ಹೊಸ ವಿಶೇಷ ರಾಜ್ಯಪತ್ರವನ್ನು ಹೊರಡಿಸಿರುವ ಸರ್ಕಾರ ತುಟ್ಟಿಭತ್ಯೆಯನ್ನು ಪಾವತಿಸುವಂತೆ ಸ್ಪಷ್ಟ ನಿರ್ದೇಶನಗಳನ್ನು ನೀಡಿದೆ. ಹಾಗಾಗಿ ಬೀಡಿ ಕಾರ್ಮಿಕರು ಬಾಕಿ ಇರುವ ತುಟ್ಟಿಭತ್ಯೆಗೆ ಕಾನೂನುಬದ್ದ ಹಕ್ಕುದಾರಿಕೆಯನ್ನು ಹೊಂದಿರುತ್ತಾರೆ. ಈ ಕುರಿತು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ ಎಂಬ ಮಾಲಿಕರು ವಾದಿಸುತ್ತಿದ್ದಾರೆ. ಆದರೆ ಎಲ್ಲಿಯೂ ಸಹ ಅದರ ಅಧಿಕೃತ ಪ್ರತಿಗಳನ್ನು ಹಾಜರುಪಡಿಸದೆ ಇರುವ ಕಾರಣ ನಾವು ಈ ಪ್ರಶ್ನೆಯನ್ನು ನಮ್ಮ ಹೋರಾಟದ ಪ್ರಶ್ನೆಯಾಗಿಸಿ ಕಾರ್ಮಿಕರಿಗೆ ನ್ಯಾಯ ಒದಗಿಸಲು ಮುಂದಾಗಬೇಕಿದೆ. ಈ ಕುರಿತು ರಾಜ್ಯ ಕಾರ್ಮಿಕ ಇಲಾಖೆ ತಕ್ಷಣ ಕಾನೂನು ಬದ್ದ ತುಟ್ಟಿಭತ್ಯೆಯನ್ನು ಕಾಮಿಕರಿಗೆ ಸಿಗುವಂತೆ, ನೀಡದೆ ಇರುವ ಮಾಲಕರ ಮೇಲೆ ಕಾನೂನು ಕ್ರಮವನ್ನು ಕೈಗೊಂಡ ಬೀಡಿ ಕಾರ್ಮಿಕರಿಗೆ ನ್ಯಾಯ ಒದಗಿಸುವಂತೆ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್(ಸಿಐಟಿಯು) ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ಅಗಸ್ಟ್ 1 ರಿಂದ 7 ತನಕ ವ್ಯಾಪಕ ಪ್ರಚಾರಾಂದೋಲನ

ತಂಬಾಕು ನಿಷೇದದಿಂದ ಬೀಡಿ ಕಾರ್ಮಿಕರು ಉದ್ಯೋಗವನ್ನು ಕಳೆದುಕೊಳ್ಳುವ ಪರಿಸ್ಥಿತಿ ಎಲ್ಲೆಡೆ ನಿರ್ಮಾಣವಾಗುತ್ತಿದೆ. ದೇಶದಲ್ಲಿ ಬೀಡಿಕಾರ್ಮಿಕರನ್ನು ಒಳಗೊಂಡು ತಂಬಾಕು ಆಧಾರಿತ ಸರಿ ಸುಮಾರು ಒಂದು ಕೋಟಿ ಜನ ಕಾರ್ಮಿಕರ ಉದ್ಯೋಗ ನಷ್ಟವಾಗಲಿದೆ. ಅಂದರೆ ಅವರ ಅನ್ನದ ಮಾರ್ಗವು ಬಂದ್ ಆಗಲಿದೆ. ಅದರೆ ಸರ್ಕಾರಗಳು ಈ ಕಾರ್ಮಿಕರಿಗೆ ಪರ್ಯಾಯ ಉದ್ಯೋಗವಾಗಲಿ, ಪರಿಹಾರವಾಗಲಿ ನೀಡದೆ ಇರುವ ಕ್ರಮ ಸರಿಯಲ್ಲ, ಹಾಲಿ ಕೇಂದ್ರ-ರಾಜ್ಯ ಸರ್ಕಾರಗಳ ಬಳಿಯಲ್ಲಿ ಎಷ್ಟು ಜನ ಬೀಡಿ ಕಾರ್ಮಿಕರಿದ್ದರೆ ಎಂಬ ಅಂಕಿಸಂಖ್ಯೆಗಳೇ ಇಲ್ಲ ಎಂದು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ (ಸಿಐಟಿಯು) ಅಪಾದಿಸಿದೆ. ಬೀಡಿ ಕಾರ್ಮಿಕರಿಗೆ ಉದ್ಯೋಗ ನಷ್ಟ ಪರಿಹಾರ 5 ಲಕ್ಷ ರೂಪಾಯಿಗಳು ಹಾಗು ಮಾಸಿಕ 3000 ರೂ. ಪಿಂಚಣಿ ನೀಡಬೇಕು, ರಾಷ್ಟ್ರೀಯ ಸಮಾನ ಕನಿಷ್ಟ ಕೂಲಿ ಒಂದು ಸಾವಿರ ಬೀಡಿಗೆ ರೂ 300, ತುಟ್ಟಿಭತ್ಯೆ ಅಂಶ ಒಂದಕ್ಕೆ 5 ಪೈಸೆ ನಿಗದಿ ಮಾಡಬೇಕು. ಎಲ್ಲಾ ಬೀಡಿ ಕಾರ್ಮಿಕರಿ ಲಾಗ್ ಪುಸ್ತಕ್, ಗುರುತಿನ ಚೀಟಿ, ಫಿ.ಎಪ್, ಬೋನಸ್ ನೀಡಬೇಕು, ಗುತ್ತಿಗೆ-ಉಪ ಗುತ್ತಿಗೆ ಪದ್ದತಿಯನ್ನು ರದ್ದುಗೊಳಿಸಬೇಕು, ಉತ್ತಮ ಗುಣಮಟ್ಟದ ಬೀಡಿ ಎಲೆ ನೀಡಬೆಕು ಹಾಗು ಎಲೆ ಅವರೇಜ್ ಹೆಸರಲ್ಲಿ ನಡೆಯುವ ಶೋಷಣೆ ನಿಲ್ಲಿಸಲು ಒತ್ತಾಯಿಸಿದೆ. ಜಿ.ಎಸ್.ಟಿ ಯಿಂದ ಬೀಡಿ ಕಾರ್ಮಿಕಕಲ್ಯಾಣ ನಿಧಿಗೆ ಸಂಗ್ರಹವಾಗುತ್ತಿದ್ದ ಸೇಸ್ (ಅಬ್ಕಾರಿ ಇಲಾಖೆ ಸಂಗ್ರಹಿಸುತ್ತಿದ್ದ ಸುಂಕ) ನಿಲ್ಲಿಸಿರುವ ಕಾರಣ ಬೀಡಿ ಕಾಮಿಕರ ಕಲ್ಯಾಣ ಯೋಜನೆಗಳಿಗೆ ಅಗತ್ಯ ಹಣಕಾಸನ್ನು ಕೆಂದ್ರ ಸರ್ಕಾರ ತನ್ನ ಅನುಧಾನದ ನೀಡಬೇಕು. ಬೀಡಿ ಮತ್ತು ಸಿಗಾರ್ ಕಾರ್ಮಿಕರ ಸೇವಾ ಶರತ್ತು ಕಾಯಿದ್ದೆಗೆ ಅಗತ್ಯ ತಿದ್ದುಪಡಿಗಳನ್ನು ಮಾಡಬೇಕು. ಪಿ.ಎಪ್. ಪಿಂಚಣಿದಾರರಿಗೆ ಕನಿಷ್ಟ ಮಾಸಿಕ ಪಿಂಚಣಿ 3000ರೂ ನಿಗದಿಗೊಳಿಬೇಕು, ಎಂದು ಒತ್ತಾಯಿಸಿ ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟದ ಕರೆಯಂತೆ ರಾಜ್ಯದಲ್ಲಿಯೂ ಅಗಸ್ಟ್ 1ರಿಂದ 7 ತನಕ ವ್ಯಾಪಕ ಪ್ರಚಾರಾಂದೊಲನವನ್ನು ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್(ಸಿಐಟಿಯು) ರಾಜ್ಯ ಸಮಿತಿ ತಿಳಿಸಿದೆ. ●

ಗೊರವನಹಳ್ಳಿ ಪಾಲಿಟೆಕ್ನಿಕ್ ಕಾಲೇಜು ಮುಚ್ಚುವ ಹುನ್ನಾರ :

ಕಾಲೇಜು ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳೆ ಹೆಚ್ಚಾಗಿ ವಿದ್ಯಾಭ್ಯಾಸಕ್ಕಾಗಿ ಬರುವ ಗೊರವನಹಳ್ಳಿ ಶ್ರೀ ಮಹಾಲಕ್ಷ್ಮೀ ಪಾಲಿಟೆಕ್ನಿಕ್ ಕಾಲೇಜನ್ನು ಮುಚ್ಚುವ ಹುನ್ನಾರಗಳು ನಡೆಯುತ್ತಿದ್ದು ಇದು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಮೇಲೆ ನೇರ ಪರಿಣಾಮ ಬೀರಲಿದ್ದು ಉಪಮುಖ್ಯಮಂತ್ರಿಗಳು ಆಗಿರುವ ಡಾ. ಈ. ಪರಮೇಶ್ವರ್‌ರವರು ಮಧ್ಯಪ್ರವೇಶಿಸಿ ಕಾಲೇಜನ್ನು ಆರಂಬಿಸಲು ಕ್ರಮ ಕೈಗೊಳ್ಳಬೇಕು ಎಂದು ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ ಮತ್ತು ವಿದ್ಯಾರ್ಥಿಗಳು ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ನಡೆಸಿ ಒತ್ತಾಯಿಸಿದರು.



2009 ರಿಂದ ಆರಂಭವಾದ ತಾಲ್ಲೂಕಿನ ಏಕೈಕ ಪಾಲಿಟೆಕ್ನಿಕ್ ಕಾಲೇಜು ಯಾವುದೇ ಸಮಸ್ಯೆಗಳಿಲ್ಲದೆ ಸುಗಮವಾಗಿ ನಡೆಯುತ್ತಿತ್ತು. ಫಲಿತಾಂಶವು ಸಹ ಉತ್ತಮವಾಗಿತ್ತು. ಆದರೆ ನಂತರ 2015ರಲ್ಲಿ ಜಿಲ್ಲಾಡಳಿತದ ವಶದಲ್ಲಿ ನಡೆಯುತ್ತಿತ್ತು ಮೂಲಭೂತ ಸೌಲಭ್ಯದ ನೆಪವೊಡ್ಡಿ ದಿನಾಂಕ 26-07-2018ರಂದು ಏಕಾಏಕಿ ಕಾಲೇಜನ್ನು ಮುಚ್ಚುವಂತೆ ಹೇಳಿರುವುದನ್ನು ಖಂಡಿಸಿರುವ ಸಂಘಟನೆಗಳು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕಾದ ಸಂಬಂಧಪಟ್ಟ ಇಲಾಖೆಗಳ ಕಾರ್ಯವೈಖರಿಯನ್ನು ತೀವ್ರವಾಗಿ ಖಂಡಿಸಿವೆ.

ಕಾಲೇಜಿಗೆ ಯಾವುದೇ ಮಾಹಿತಿಯನ್ನು ನೀಡದೆ ಏಕಾಏಕಿ 2018-19ನೇ ಸಾಲಿಗೆ ಮೂಲಭೂತ ಸೌಕರ್ಯದ ನೆಪವೊಡ್ಡಿ ಫಲಿತಾಂಶ ಬಂದ ನಂತರ ದಾಖಲಾತಿಗಳನ್ನು ಮಾಡಿಕೊಳ್ಳದಂತೆ ಆದೇಶಿಸಿರುವುದು ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಮೇಲೆ ಪರಿಣಾಮ ಬೀರಲಿದ್ದು ಉಪಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ್‌ರವರು ವಿದ್ಯಾರ್ಥಿಗಳ ಮತ್ತು ಉಪನ್ಯಾಕರನ್ನು ಗಮನದಲ್ಲಿಟ್ಟುಕೊಂಡು ತಕ್ಷಣದಿಂದ ಜಾರಿಗೆ ಬರುವಂತೆ ಕಾಲೇಜನ್ನು ಆರಂಬಿಸಲು ಕ್ರಮವಹಿಸಬೇಕು ಎಂದು ಸಂಘಟನೆಗಳು ಒತ್ತಾಯಿಸಿವೆ.

ಜಿಲ್ಲಾಧಿಕಾರಿಗೆ ಮನವಿ :

ಬೆಳಿಗ್ಗೆಯಿಂದ ಸಂಜೆಯವರೆಗೂ ಜಿಲ್ಲಾಧಿಕಾರಿ ಗಳಿಗಾಗಿ ಕಾದು ಮನವಿ ನೀಡಿದ ವಿದ್ಯಾರ್ಥಿಗಳ ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿಗಳು ಕಾಲೇಜಿನ ಸಿಬ್ಬಂದ್ದಿಗೆ ವೇತನ ನೀಡಲು ಹಣವಿಲ್ಲ, ಮೇಲ್ವಿಚಾರಣೆ ಮಾತ್ರ ನಮ್ಮ ಕೈಯಲ್ಲಿದ್ದು ಸರ್ಕಾರದ ಹಂತದಲ್ಲಿ ಯಾವ ರೀತಿಯ ತೀರ್ಮಾನವಾಗುತ್ತದೊ ಅದಕ್ಕೆ ನಾನು ಬದ್ದನಾಗಿದ್ದೇನೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು ತಾಲ್ಲೂಕು ಅಧ್ಯಕ್ಷ ನೌಷಾದ್ ಸೆಹಗನ್, ವಿದ್ಯಾರ್ಥಿಗಳಾದ ಅವಿತಾರಾಧ್ಯ, ಮುತ್ತು, ಕಿರಣ್, ಚೇತನ್‌ಕುಮಾರ್, ಸುರೇಶ್, ಟಿ.ಡಿ, ಹರೀಶ್ ಎಲ್.ಡಿ. ಶಿವಕುಮಾರ್, ಕೃಷ್ಣಮೂರ್ತಿ, ಮಂಜುನಾಥ್ ಎ.ವಿ. ಲಕ್ಷ್ಮೀ, ಸತೀಶ್‌ಕುಮಾರ್ ಆರ್.ಎಲ್, ಎಸ್.ಎಫ್.ಐ ಜಿಲ್ಲಾಧ್ಯಕ್ಷ ಇ. ಶಿವಣ್ಣ, ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷ ಎಸ್. ರಾಘವೇಂದ್ರ ಉಪಸ್ಥಿತರಿದ್ದರು. ●

ಬ್ರಿಟಿಷರಿಗೆ ಇದ್ದಷ್ಟು ಕಾಳಜಿ ಈಗಿನ ಸರಕಾರಗಳಿಗಿಲ್ಲ : ಇಮ್ತಿಯಾಜ್

ದ.ಕ ಜಿಲ್ಲೆ ಸೇರಿದಂತೆ ಹತ್ತಿರದ ಆರೇಳು ಜಿಲ್ಲೆಯ ಬಡವರ ಎರಡು ಕಣ್ಣುಗಳಂತಿರುವ ಸರಕಾರಿ ಆಸ್ಪತ್ರೆ ವೆನ್ಲಾಕ್ ಮತ್ತು ಲೇಡಿಗೋಶನ್ ಆಸ್ಪತ್ರೆಯ ಸ್ಥಿತಿ ಚಿಂತಾಜನಕವಾಗಿದೆ. ಈ ಆಸ್ಪತ್ರೆಗೆ ಚಿಕಿತ್ಸೆಗೆಂದು ಬರುವ ರೋಗಿಗಳು ಹಲವು ರೀತಿಯ ಸಮಸ್ಯೆಗಳಿಗೆ ತುತ್ತಾಗಿದ್ದಾರೆ. ಆಸ್ಪತ್ರೆಯನ್ನು ಸ್ಥಾಪಿಸಿದಂತಹ ಸಂದರ್ಭದಲ್ಲಿ ಈ ಜಿಲ್ಲೆಯ ಬಡವರ ಬಗ್ಗೆ ಬ್ರಿಟಿಷರಿಗೆ ಇದ್ದಷ್ಟು ಕಾಳಜಿ ನಮ್ಮನ್ನಾಳುವ ರಾಜ್ಯ, ಕೇಂದ್ರ ಸರಕಾರಗಳಿಗಿಲ್ಲ ಅನ್ನೋದೆ ಬಹಳ ವಿಷಾದನೀಯ ಎಂದು ಡಿವೈಎಫ್‌ಐ ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಹೇಳಿದರು. ಇಂದು ಡಿವೈಎಫ್‌ಐ ದ.ಕ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಸರಕಾರಿ ಲೇಡಿಗೋಶನ್ ಆಸ್ಪತ್ರೆಯ ಮುಂಭಾಗ ಆಸ್ಪತ್ರೆಯ ಅವ್ಯವಸ್ಥೆ ಹಾಗೂ ನೂತನ ಕಟ್ಟಡದ ವಿಳಂಬ ನೀತಿಯನ್ನು ಖಂಡಿಸಿ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು.

ನಂತರ ಮಾತನಾಡಿದ ಡಿವೈಎಫ್‌ಐ ದ.ಕ. ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ 1848ರಲ್ಲಿ ಆಗಿನ ವೈಸರಾಯ್ ತನ್ನ ಹೆಂಡತಿಯ ಹೆಸರಲ್ಲಿ ಪ್ರಾರಂಭಿಸಿದ ಆಸ್ಪತ್ರೆಗೆ 170 ವರುಷ ಸಂದರೂ ನಮ್ಮನ್ನಾಳುವ ಸರಕಾರಗಳಿಗೆ ಕನಿಷ್ಟ ಈ ಆಸ್ಪತ್ರೆಯನ್ನು ಅಭಿವೃದ್ಧಿ ಪಡಿಸಲು ಈವರೆಗೂ ಸಾದ್ಯವಾಗಿಲ್ಲ. ಈಗಾಗಲೇ ನೂತನ ಕಟ್ಟಡದ ಉದ್ಘಾಟನೆಗೆ ಹಲವು ಗಡುವುಗಳು ಕಳೆದು ಹೋದರೂ, ಆಸ್ಪತ್ರೆಯನ್ನು ಪ್ರಾರಂಭಿಸುವ ಕಾಳಜಿ ಜನಪ್ರತಿನಿಧಿಗಳಿಗಾಗಲಿ, ಜಿಲ್ಲಾಡಳಿತಕ್ಕಾಗಲಿ ಇಲ್ಲ. ಹಿಂದೆ ಆರೋಗ್ಯ ಮಂತ್ರಿಯಾಗಿ ಈ ಆಸ್ಪತ್ರೆಗೆ ಭೇಟಿ ನೀಡಿದ್ದ ರಮೇಶ್ ಕುಮಾರ್ ಸರಕಾರಿ ಆಸ್ಪತ್ರೆಯ ಪರಿಸ್ಥಿತಿ ನೋಡುವಾಗ ಕಣ್ಣಲ್ಲಿ ರಕ್ತ ಸುರಿಯುತ್ತೆ ಅಂತ ಹೇಳಿಕೆಯಷ್ಟೇ ನೀಡಿದರಲ್ಲದೆ ಆನಂತರ ಅವರ ಪತ್ತೆನೇ ಇಲ್ಲ. ಕನಿಷ್ಟ ಸರಕಾರಿ ಆಸ್ಪತ್ರೆ ಬಲಪಡಿಸುವ ಯಾವುದೇ ಯೋಜನೆಯನ್ನು ಕೈಗೊಂಡಿಲ್ಲ. ಒಟ್ಟಾರೆಯಾಗಿ ನಮ್ಮನ್ನಾಳುವ ಸರಕಾರ, ಜನಪ್ರತಿನಿಧಿಗಳು ಖಾಸಗಿ ಆಸ್ಪತ್ರೆಯ ಲಾಭಿಗೆ ಮಣಿದು ಖಾಸಗಿ ಆಸ್ಪತ್ರೆಯ ಧಣಿಗಳ ಹಿತವನ್ನು ಕಾಯುತ್ತಿದ್ದಾರೆ. ಡಿವೈಎಫ್‌ಐ ಈ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಿದೆ. ಸರಕಾರಿ ಆಸ್ಪತ್ರೆಯಲ್ಲಿನ ಅವ್ಯವಸ್ಥೆಯನ್ನು ಕೂಡಲೇ ಸರಿಪಡಿಸಬೇಕು. ಅಲ್ಲದೇ ಖಾಲಿ ಇರುವ ಹುದ್ದೆಗಳನ್ನು ಭರ್ತಿಗೊಳಿಸಬೇಕು ಹಾಗೂ ಹೆಚ್ಚುವರಿ ಸಿಬ್ಬಂದಿ ಹಾಗೂ ವೈದ್ಯರನ್ನು ನೇಮಕ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸಿದರು.

ಈ ವೇಳೆ ಡಿವೈಎಫ್‌ಐ ದ.ಕ ಜಿಲ್ಲಾ ಮುಖಂಡರಾದ ನಿತಿನ್ ಕುತ್ತಾರ್, ಸಾಧಿಕ್ ಕಣ್ಣೂರು, ಆಶಾ ಬೋಳೂರು, ಮಯೂರಿ ಬೋಳಾರ, ಯೋಗೀಶ್ ಜಪ್ಪಿನಮೊಗರು, ನವೀನ್ ಕೊಂಚಾಡಿ, ಮನೋಜ್ ವಾಮಂಜೂರು, ರಫೀಕ್ ಹರೇಕಳ ಮುಂತಾದವರು ಉಪಸ್ಥಿತರಿದ್ದರು.

ಪ್ರತಿಭಟನಾ ನಂತರ ಆಸ್ಪತ್ರೆಯ ಅಧೀಕ್ಷಕರಿಗೆ ಮನವಿಯನ್ನು ಸಲ್ಲಿಸಲಾಯಿತು. ●

ಬಂಗಾಳ-ತ್ರಿಪುರಾ ದಾಳಿಗಳ ವಿರುದ್ಧ ಪ್ರತಿಭಟನೆ

ದೇಶದ ಸಂವಿಧಾನದ ಮೇಲೆ ನಂಬಿಕೆ ಇಲ್ಲದ ಜನರು, ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳು ಪಶ್ಚಿಮ ಬಂಗಾಳ ಹಾಗೂ ತ್ರಿಪುರದಲ್ಲಿ ಸಿಪಿಐ(ಎಂ) ಹಾಗೂ ಎಡಪಕ್ಷಗಳ ಕಾರ್ಯಕರ್ತರ ಮೇಲೆ ನಡೆಸುತ್ತಿರುವ ಮಾರಾಣಾಂತಿಕ ಹಲ್ಲೆ ಮತ್ತು ಪಕ್ಷದ ಕಛೇರಿ, ಕಾರ್ಯಕರ್ತರ ಮನೆಗಳ ಮೇಲಿನ ಧಾಳಿಯನ್ನು ಖಂಡಿಸಿ ಎಡಪಕ್ಷಗಳ ನೇತೃತ್ವದಲ್ಲಿ ಜುಳಯ 24ರಂದು ದೇಶಾದ್ಯಂತ ಪ್ರತಿಭಟನೆ ನಡೆಯಿತು. ಈ ಅಂಗವಾಗಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ವತಿಯಿಂದ ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಸಭೆಯನ್ನು ಉದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಆರ್.ಶ್ರೀನಿವಾಸ್‌ರವರು ಮಾತನಾಡಿ "ಇಂದು ಅಧಿಕಾರವನ್ನು ಹಿಡಿದ ಬಿಜೆಪಿ ಪಕ್ಷ ಮತ್ತು ಪಶ್ಚಿಮ ಬಂಗಳಾದ ಟಿಎಂಸಿ ಸರ್ಕಾರಗಳು ಪ್ರಜಾಪ್ರಭುತ್ವ ಮಾದರಿಯಲ್ಲಿ ಸರ್ಕಾರವನ್ನು ನಡೆಸದೆ ಕೊಲೆ ಮತ್ತು ಹಲ್ಲೆಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಮಾತ್ರವಲ್ಲ, ಸಿಪಿಐ(ಎಂ) ಪಕ್ಷದ ನೂರಾರು ಕಾರ್ಯಕರ್ತರ ಕೊಲೆಗಳು ನಡೆಯುತ್ತಿವೆ. ಪ್ರಜಾಪ್ರಭುತ್ವ ಮಾದರಿಯಲ್ಲಿ ಚುನಾವಣೆಯಲ್ಲಿ ಎದುರಿಸಲು ಮುಂದಾಗದವರು, ಹಿಂಸೆಯ ಮೂಲಕ ಧಾಳಿಗೆ ಮುಂದಾಗುತ್ತಿದ್ದಾರೆ" ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ನೂರಾರು ಕಾರ್ಯಕರ್ತರು ಸುರಿಯುವ ಮಳೆಯನ್ನು ಲೆಕ್ಕಿಸದೇ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಗೋಪಾಲಕೃಷ್ಣ ಅರಳಹಳ್ಳಿ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೌರಮ್ಮ, ಹೆಚ್.ಎನ್. ಗೋಪಾಲಗೌಡ, ಟಿ.ಲೀಲಾವತಿ, ಎನ್.ಪ್ರತಾಪ್‌ಸಿಂಹ, ಸಮಿತಿ ಸದಸ್ಯರಾದ ಎನ್.ನಾಗರಾಜ್ ಮತ್ತು ನಿತಿನ್ ಮಾತನಾಡಿದರು.

ಆಗಸ್ಟ್ 7 ರಂದು ರಾಷ್ಟ್ರವ್ಯಾಪಿ ಮುಷ್ಕರ ಮತ್ತು ಪ್ರತಿಭಟನೆಗೆ ಕರೆ

'ಮೋಟಾರು ವಾಹನ (ತಿದ್ದುಪಡಿ) ಮಸೂದೆ - 2017'ನ್ನು ಹಿಂಪಡೆಯಲು ಒತ್ತಾಯ



ದೇಶದ ರಸ್ತೆ ಸಾರಿಗೆ ಉದ್ದಿಮೆಯಲ್ಲಿರುವ ಆಟೋ ರಿಕ್ಷಾ, ಟ್ಯಾಕ್ಸಿ, ಖಾಸಗಿ ಬಸ್, ಟ್ರಕ್, ರಾಜ್ಯ ರಸ್ತೆ ಸಾರಿಗೆ ನಿಗಮಗಳು, ಡ್ರೈವಿಂಗ್ ಶಾಲೆಗಳು, ವರ್ಕ್‌ಶಾಪ್‌ಗಳು, ಬಿಡಿ ಭಾಗಗಳ ಅಂಗಡಿಗಳು, ಮುಂತಾದ ಎಲ್ಲವೂ ಗಂಭೀರ ಬಿಕ್ಕಟ್ಟಿನಲ್ಲಿವೆ. ಇವುಗಳಲ್ಲಿ ತೊಡಗಿಕೊಂಡಿರುವ ಕಾರ್ಮಿಕರು, ಮಾಲೀಕರು ಕಂ ಚಾಲಕರು, ಸಣ್ಣ ಮಾಲೀಕರು ಮುಂತಾದವರಿಗೆ ಸರ್ಕಾರದಿಂದ ಯಾವುದೇ ಸೌಲಭ್ಯ ಅಥವಾ ಸವಲತ್ತುಗಳಿಲ್ಲದಿದ್ದರೂ ಜನರಿಗೆ ಸೇವೆಯನ್ನು ನೀಡುತ್ತಿದ್ದಾರೆ. ಆದರೆ ಇವರೆಲ್ಲರೂ ಅಧಿಕಾರಿಗಳು ಮತ್ತು ಪೊಲೀಸರಿಂದ ನಿತ್ಯ ಕಿರುಕುಳ ಅನುಭವಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ತಂದು, ಕೋಟ್ಯಾಂತರ ಒಂಟಿ ವಾಹನ ಮಾಲೀಕರನ್ನು ಮತ್ತು ಕಾರ್ಮಿಕರನ್ನು ನಾಶ ಮಾಡಿ, ಇಡೀ ಉದ್ದಿಮೆಯನ್ನು ಭಾರತೀಯ ಮತ್ತು ವಿದೇಶೀ ಕಾರ್ಪೊರೇಟ್ ಕಂಪನಿಗಳಿಗೆ ಒಪ್ಪಿಸಲು ಹೊರಟಿದೆ. ಸಾರಿಗೆ ಉದ್ದಿಮೆಯಲ್ಲಿರುವವರ ಜೀವನಾಧಾರಗಳನ್ನು ರಕ್ಷಿಸಲು ಮತ್ತು ಸಾರಿಗೆ ರಂಗವನ್ನು ಭಾರತೀಯರ ಪರವಾಗಿ ಉಳಿಸಲು ಎಂ.ವಿ.(ತಿದ್ದುಪಡಿ) ಮಸೂದೆ-2017ನ್ನು ಕೈಬಿಡಬೇಕೆಂದು, ರಸ್ತೆ ಸಾರಿಗೆ ರಂಗದಲ್ಲಿರುವ ಕಾರ್ಮಿಕರು ಮತ್ತು ಮಾಲೀಕರ ಸಂಘಟನೆಗಳ ವೇದಿಕೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಖಾಸಗಿ ಫೈನಾನ್ಸ್ ಕಂಪನಿಗಳಿಂದ ಅಥವಾ ಇತರೆ ಮೂಲಗಳಿಂದ ಸಾಲ ಪಡೆದು ಬಹುತೇಕ ಆಟೋ, ಟ್ಯಾಕ್ಸಿ, ಟ್ರಕ್, ಖಾಸಗಿ ಬಸ್‌ಗಳನ್ನು ತಮ್ಮ ಜೀವನ ನಿರ್ವಹಣೆಗಾಗಿ ನಡೆಸುತ್ತಾರೆ. ನಿರಂತರವಾಗಿ ಹೆಚ್ಚುತ್ತಿರುವ ಪೆಟ್ರೋಲ್/ಡೀಸೆಲ್ ದರಗಳು, ವಾಹನಗಳ ನೋಂದಣಿ ಶುಲ್ಕಗಳು, ಫಿಟ್ನೆಸ್, ಲೈಸೆನ್ಸ್, ನವೀಕರಣ ಮುಂತಾದ ಶುಲ್ಕಗಳ ಹೆಚ್ಚಳದಿಂದಾಗಿ ಸಾರಿಗೆ ಉದ್ದಿಮೆಯು ಗಂಭೀರವಾದ ಬಿಕ್ಕಟ್ಟಿಗೆ ಸಿಲುಕುತ್ತಿದೆ. ಖಾಸಗಿ ಸಾಲಗಾರರ ಕಿರುಕುಳ, ಸಾರಿಗೆ ಅಧಿಕಾರಿಗಳು ಮತ್ತು ಪೊಲೀಸರ ಕಿರುಕುಳ ಮತ್ತು ಕ್ಷುಲ್ಲುಕ ಕಾರಣಗಳಿಗೆ ಹಾಕುವ ದಂಡಗಳಿಂದ ಕೆಲಸ ಮಾಡುವುದೇ ಕಷ್ಟವಾಗಿದೆ.

ಕಳೆದ 4 ವರ್ಷಗಳಲ್ಲಿ ಥರ್ಡ್ ಪಾರ್ಟಿ ಇನ್ಸೂರೆನ್ಸ್ ಪ್ರೀಮಿಯಂನ್ನು ಶೇ.100 ರಷ್ಟು ಹೆಚ್ಚಿಸಲಾಗಿದೆ. ಪ್ರೀಮಿಯಂ ರೂಪದಲ್ಲಿ ಸಂಗ್ರಹಿಸಲಾದ ವಿಮಾ ಹಣದ ಮೊತ್ತದ ವಿವರಗಳು ಮತ್ತು ಅಪಘಾತಗಳಿಗೆ ಬಲಿಯಾದವರಿಗೆ ವಿತರಿಸಲಾದ ಮೊತ್ತದ ವಿವರಗಳನ್ನು ಮಾಹಿತಿ ಹಕ್ಕಿನ ಕಾಯ್ದೆಯಡಿಯಲ್ಲಿ ಐಆರ್‌ಡಿಎ(**IRDA**) ಯನ್ನು ಕೇಳಿದಾಗ ತಮ್ಮ ಬಳಿ ಮಾಹಿತಿ ಇಲ್ಲವೆಂದು ಅದು ಹೇಳಿದೆ. ಹಾಗಿದ್ದಲ್ಲಿ, ಈ ಮಾಹಿತಿಗಳೇ ಇಲ್ಲದೆ ಸ್ವತಃ IRDA ಪ್ರತಿ ವರ್ಷ ಪ್ರೀಮಿಯಂ ದರಗಳ ಹೆಚ್ಚಳವನ್ನು ಹೇಗೆ ಮಾಡುತ್ತಿದೆ. ಇದು ವಾಹನ ಮಾಲೀಕರನ್ನು ವಂಚಿಸುವುದಲ್ಲದೆ ಬೇರೇನು?

ರಾಜ್ಯ ರಸ್ತೆ ಸಾರಿಗೆ ನಿಗಮಗಳು (STU) ಜನತೆಗೆ ಅನುಕೂಲ ಕಲ್ಪಿಸಲು ಲಾಭದಾಯಕವಾಗಿಲ್ಲದಿದ್ದರೂ ತೀರಾ ಕುಗ್ರಾಮಗಳಿಗೂ ಸಾರಿಗೆಯನ್ನು ಒದಗಿಸಿವೆ. ರಾಜ್ಯ ಸರ್ಕಾರಗಳು ಸಮಾಜದ ವಿವಿಧ ವಿಭಾಗಗಳಿಗೆ ರಿಯಾಯಿತಿ ಪಾಸುಗಳು ಮತ್ತು ಉಚಿತ ಪಾಸುಗಳನ್ನು ನೀಡುತ್ತಿವೆ. ಜನರಿಗೆ ಕಡಿಮೆ ದರದ ಸಾರಿಗೆಯನ್ನು ಒದಗಿಸಿವೆ. STU ಬಸ್‌ಗಳ ಅಪಘಾತ ಪ್ರಮಾಣವು ದೇಶದಲ್ಲೇ ಎಲ್ಲಕ್ಕಿಂತ ಕಡಿಮೆ ಇವೆ. ಮಹಿಳೆಯರಿಗೆ, ಸಮಾಜದ ದುರ್ಬಲ ದಲಿತ ವರ್ಗಗಳಿಗೆ ಮೀಸಲಾತಿ ಮೂಲಕ ಉದ್ಯೋಗಗಳನ್ನು STUಗಳು ನೀಡಿವೆ. ಆದರೆ ಇವುಗಳನ್ನು ಈಗ ದುರ್ಬಲಗೊಳಿಸಲು ಪ್ರಯತ್ನಗಳು ನಡೆದಿವೆ. ನೂತನ ಪರ್ಮಿಟ್ ವ್ಯವಸ್ಥೆ ಜಾರಿಗೊಂಡಲ್ಲಿ STUಗಳು ಮಾತ್ರವಲ್ಲದೆ, ಸಣ್ಣ ಮತ್ತು ಮಧ್ಯಮ ಸಂಖ್ಯೆಯಲ್ಲಿರುವ ಖಾಸಗಿ ಬಸ್‌ಗಳೂ ಸಹ ಇಲ್ಲವಾಗಲಿವೆ. ಈ ಮಸೂದೆಯಲ್ಲಿ ಖಖಿಗಗಳು ನಷ್ಟದಲ್ಲಿವೆ ಎನ್ನುವ ವಾದವನ್ನು ಮಾಡುತ್ತಾ ಪರೋಕ್ಷವಾಗಿ ಖಾಸಗೀಕರಣಕ್ಕೆ ಒತ್ತು ನೀಡಲಾಗಿದೆ. ಸಾರಿಗೆ ಮೂಲತಃ ಸೇವೆಯಾಗಿದೆ. ಸಹಜವಾಗಿಯೇ ನಷ್ಟದಲ್ಲಿರುತ್ತವೆ. ಆಸ್ಪತ್ರೆಗಳು, ಪೊಲೀಸ್ ಠಾಣೆಗಳು, ಕೋರ್ಟುಗಳು ನಷ್ಟದಲ್ಲಿವೆ ಎಂದು ಖಾಸಗೀಕರಣ ಮಾಡಲಾಗುತ್ತದೆಯೇ?

ಮಸೂದೆ ಅಂಗೀಕಾರವಾದಲ್ಲಿ ರಾಜ್ಯಗಳ ಕಾನೂನು ರೂಪಿಸುವ ಹಕ್ಕುಗಳು ನಾಶವಾಗಲಿವೆ. ಏಕ ಗವಾಕ್ಷಿ, ಏಕ ತೆರಿಗೆ ಮತ್ತು ನಿಯಂತ್ರಣ ಪ್ರಾಧಿಕಾರ ಮುಂತಾದ ಹೆಸರಿನಲ್ಲಿ ಎಲ್ಲವನ್ನೂ ಕೇಂದ್ರ ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಲಿದೆ. ರಾಜ್ಯ ಸರ್ಕಾರಗಳ ಆದಾಯ ತೀವ್ರವಾಗಿ ಕಡಿಮೆಯಾಗಲಿದೆ. ರಾಜ್ಯ ಸರ್ಕಾರಗಳು ಗ್ರಾಮ ಪಂಚಾಯತ್‌ಗಳ ಮಟ್ಟಕ್ಕೆ ಇಳಿಯಲಿವೆ.

ಇಂತಹ ಸಂದರ್ಭದಲ್ಲಿ ಸಂಕಷ್ಟದಲ್ಲಿರುವ ಸಾರಿಗೆ ಉದ್ಯಮವನ್ನು ಸಂರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳುವುದರ ಬದಲು ಕೇಂದ್ರ ಸರ್ಕಾರವು ವಿನಾಶಕಾರಿಯಾದ ಮೋಟಾರು ವಾಹನ ಕಾಯ್ದೆ (ತಿದ್ದುಪಡಿ) ಮಸೂದೆಯನ್ನು ರಾಜ್ಯಸಭೆಯಲ್ಲಿ ಅಂಗೀಕರಿಸಲು ಚರ್ಚೆಗೆ ಮುಂದಾಗಿದೆ. "ಅಗ್ರಿಗೇಟರ್" ಹೆಸರಿನಲ್ಲಿ ಉಬರ್/ಓಲಾದಂತಹ ದೇಶೀಯ ಮತ್ತು ವಿದೇಶೀಯ ಬೃಹತ್ ಕಂಪನಿಗಳಿಗೆ ವಾಹನಗಳನ್ನು ಓಡಿಸುವುದು, ಬಿಡಿಭಾಗಗಳು ಮತ್ತು ನಿರ್ವಹಣೆ/ ರಿಪೇರಿಗಳನ್ನು ನಿಯಂತ್ರಿಸುವುದು ಸೇರಿದಂತೆ ರಸ್ತೆ ಸಾರಿಗೆ ರಂಗದ ಎಲ್ಲಾ ವಿಭಾಗಗಳನ್ನೂ ಒಪ್ಪಿಸಿಬಿಡುವ ದುರುದ್ದೇಶವನ್ನು ಈ ಮಸೂದೆಯು ಹೊಂದಿದೆ. ಪ್ರಸ್ತುತ ಅಸ್ಥಿತ್ವದಲ್ಲಿರುವ ಚಾಲಕರು ಮತ್ತು ನಿರ್ವಾಹಕರನ್ನೇ ಹೊಣೆ ಮಾಡಲಾಗಿದೆ. ಇತಿಮಿತಿಯಿಲ್ಲದ ರೀತಿಯಲ್ಲಿ ದಂಡಗಳ ಪ್ರಮಾಣವನ್ನು ನಿಗದಿಪಡಿಸಲಾಗಿದೆ. ರಸ್ತೆಗಳ ಪರಿಸ್ಥಿತಿ, ರಸ್ತೆಗಳ ವಾಹನಾ ಧಾರಣಾ ಸಾಮರ್ಥ್ಯಕ್ಕಿಂತ ಹೆಚ್ಚಿನ ಪ್ರಮಾಣದ ವಾಹನಗಳು, ಮುಂತಾದ ಅಂಶಗಳನ್ನು ಅಪಘಾತಗಳಿಗೆ ಕಾರಣ ಎಂಬುದನ್ನೇ ಈ ಮಸೂದೆ ಪರಿಗಣಿಸದಿರುವುದು ವಿಚಿತ್ರವಾಗಿದೆ. ಆದರೆ ಕೇಂದ್ರ ಸರ್ಕಾರ ಅಪಘಾತಗಳನ್ನು ಕಡಿಮೆ ಮಾಡಲೆಂದೇ ಈ ಮಸೂದೆಯನ್ನು ತರಲಾಗುತ್ತಿದೆ ಎಂದು ಜನರಿಗೆ ಸುಳ್ಳನ್ನು ಹೇಳುತ್ತಿದೆ. ವಿಷದ ಮಾತ್ರೆಗಳಿಗೆ ಸಿಹಿ ಲೇಪನ ಮಾಡಿದಂತಿದೆ ಈ ಮಸೂದೆ.

ಇದರ ಜೊತೆಗೆ ನಿರಂತರವಾಗಿ ಏರುತ್ತಿರುವ ಪೆಟ್ರೋಲ್ ಮತ್ತು ಡೀಸೆಲ್ ದರಗಳು, ಮನಸ್ಸೋಇಚ್ಛೆ ಹೆಚ್ಚುತ್ತಿರುವ ಟೋಲ್ ದರಗಳು ಸಾರಿಗೆ ರಂಗವನ್ನು ಭಾಧಿಸುತ್ತಿವೆ.

ಈ ಮಸೂದೆಯೇನಾದರೂ ಪಾಸಾದಲ್ಲಿ, ಕಡಿಮೆ ಸಂಖ್ಯೆಯಲ್ಲಿ ವಾಹನಗಳನ್ನು ಹೊಂದಿರುವ ವಾಹನ ಮಾಲೀಕರು, ಮಾಲೀಕರು ಕಂ ಚಾಲಕರು ಈ ಕ್ಷೇತ್ರದಿಂದಲೇ ಹೊರದೂಡಲ್ಪಡುತ್ತಾರೆ. ರಾಜ್ಯ ರಸ್ತೆ ಸಾರಿಗೆ ನಿಗಮಗಳು ಮುಚ್ಚಲ್ಪಡುತ್ತವೆ. ಸಣ್ಣಪುಟ್ಟ ವರ್ಕ್‌ಶಾಪ್‌ಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ತಮ್ಮ ಕೆಲಸಗಳನ್ನು ಕಳೆದುಕೊಳ್ಳುತ್ತಾರೆ. ಅಪಘಾತಗಳು ಹೆಚ್ಚಾಗುತ್ತವೆ. ಟ್ರಾಫಿಕ್ ಜಾಮ್‌ಗಳು ಮತ್ತು ವಾಯು ಮಾಲಿನ್ಯ ಹೆಚ್ಚಾಗುತ್ತದೆ. ಗ್ರಾಮೀಣ ಸಾರಿಗೆಗೆ ಹೊಡೆತ ಬೀಳುತ್ತದೆ ಮತ್ತು ಸಾಮಾನ್ಯ ಜನರು ಸಂಕಷ್ಟ ಎದುರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಜುಲೈ 24ರಂದು ನಗರದ ಬನ್ನಪ್ಪ ಪಾರ್ಕ್ ಬಳಿ ಸಾರಿಗೆ ರಂಗದ ಕಾರ್ಮಿಕರು ಮತ್ತು ಮಾಲೀಕರು ಸಾಂಕೇತಿಕವಾಗಿ ಪ್ರತಿಭಟನೆ ಮಾಡಿದ್ದಾರೆ. ಪ್ರತಿಭಟನೆಯನ್ನು ಉದ್ದೇಶಿಸಿ ಸಿ.ಐ.ಟಿ.ಯು ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್(ರಿ) ನ ರಾಜ್ಯ ಉಪಾಧ್ಯಕ್ಷರಾದ ಡಾ||ಕೆ.ಪ್ರಕಾಶ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್(ರಿ) ನ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಎಸ್. ಮಂಜುನಾಥ್ ರವರುಗಳು ಮಾತನಾಡಿದ್ದರು. ರಾಜ್ಯಾಧ್ಯಕ್ಷರಾದ ಹೆಚ್.ಡಿ.ರೇವಪ್ಪ, ಹಾಗೂ ಆಟೋ ರಿಕ್ಷಾ ಚಾಲಕರು ಸಂಘ (ಎ.ಆರ್.ಡಿ.ಯು), ಓಲಾ ಟ್ಯಾಕ್ಸಿ ಚಾಲಕರ ಸಂಘ, ಕೆ.ಎಸ್.ಟಿ.ಡಿ.ಸಿ ನೌಕರರ ಸಂಘದ ಮುಖಂಡರು ಮತ್ತು ಮುಂತಾದವರು ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು. ಪ್ರತಿಭಟನೆಯ ನಂತರ ನಡೆದ ಸಭೆಯಲ್ಲಿ ಮೋಟಾರು ವಾಹನ (ತಿದ್ದುಪಡಿ) ಮಸೂದೆ - 2017 ನ್ನು ಕೇಂದ್ರ ಸರ್ಕಾರ ವಾಪಸ್ ಪಡೆಯಬೇಕೆಂದು ಒತ್ತಾಯಿಸಿದೆ. ಇಲ್ಲದಿದ್ದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಈಗಾಗಲೇ ತೀರ್ಮಾನಿಸಿರುವಂತೆ ಆಗಸ್ಟ್ 7 ರಂದು ರಾಷ್ಟ್ರವ್ಯಾಪಿ ಮುಷ್ಕರ ಮತ್ತು ಪ್ರತಿಭಟನೆಗಳನ್ನು ನಡೆಸಲಾಗುವುದೆಂದು ಎಚ್ಚರಿಕೆ ನೀಡಿದೆ.

ರೈತರ ಭೂಮಿ ಸಮಸ್ಯೆಗಳ ಇತ್ಯರ್ಥ ಪಡಿಸಬೇಕು, ಭೂ ಸ್ವಾಧೀನ ಪಡಿಸಿಕೊಂಡ ಜಮೀನುಗಳಿಗೆ ಸೂಕ್ತ ಪರಿಹಾರ ನೀಡಬೇಕು

ರೈತರ ಭೂಮಿ ಸಮಸ್ಯೆಗಳು ಆಗಾದವಾಗಿದ್ದು ಅವುಗಳ ಇತ್ಯರ್ಥ ಪಡಿಸುವಲ್ಲಿ ತಾಲೂಕು ಆಡಳಿತ ವಿಫಲವಾಗಿದೆ.ಹಾಗೂ ವಿವಿಧ ಉದ್ದೇಶ ಗಳಿಗೆ ವಶಪಡಿಸಿ ಕೊಂಡಿರುವ ಭೂಮಿಗಳಿಗೆ ಸೂಕ್ತ ಪರಿಹಾರ ನೀಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಅದ್ಯಕ್ಷರಾದ ಎನ್ ಎಲ್ ಭರತ್ ರಾಜ್ ಒತ್ತಾಯಿಸಿದರು

ಅವರು ಮಳವಳ್ಳಿ ತಾಲ್ಲೂಕಿನ ಬಿ.ಜಿ.ಪುರ ಗ್ರಾಮದ ರೈತರ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ತಾಲ್ಲೂಕಿನಲ್ಲಿ ಸಾರ್ವಜನಿಕರ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಭ್ರಷ್ಟಾಚಾರ ಅದಕ್ಷತೆ .ನಿರ್ಲಕ್ಷತೆ. ವ್ಯಾಪಕವಾಗಿದ್ದು ಅವುಗಳನ್ನು ತಡೆಗಟ್ಟಲು ರೈತರು ಬಲಿಷ್ಠ ಚಳುವಳಿ ಕಟ್ಟಲು ಮುಂದಾಗಬೇಕು ಎಂದರು.

ಬಗರ್ ಹುಕುಂ ಸಾಗುವಳಿದಾರರು ನಾಲ್ವತ್ತೈವತ್ತು ವರ್ಷಗಳಿಂದ ಹಕ್ಕು ಪತ್ರಕ್ಕಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಅಧಿಕಾರಿಗಳು ಶಾಸಕರು ಸಬೂಬು ಹೇಳಿಕೊಂಡು ಕಾಲಕಳೆದಿದ್ದಾರೆ. ಅದ್ದರಿಂದ ನೂತನ ಶಾಸಕರು ಶೀಘ್ರವಾಗಿ ಗಮನ ನೀಡಬೇಕೆಂದು ಆಗ್ರಹಿಸಿದರು

ಮುಡಕುತೊರೆ ಏತ ನೀರಾವರಿ. ಸುರ್ಗಿ ಏತ ನೀರಾವರಿ. ಮತ್ತು ಪುರಿಗಾಲಿ ಹನಿ ನೀರಾವರಿ ಯೋಜನೆಗಳಿಗೆ ರೈತರ ಭೂಮಿಗಳನ್ನ ವಶಪಡಿಸಿಕೊಳ್ಳಲಾಗಿದೆ. ಆದರೆ ಅವರಿಗೆ ಸೂಕ್ತ ಪರಿಹಾರವನ್ನು ನೀಡಲು ವಿಳಂಬ ಮಾಡುತ್ತಿದ್ದಾರೆ. ಇಂದಿನ ಮಾರುಕಟ್ಟೆಗೆ ಅನುಗುಣವಾಗಿ ಶೀಘ್ರವಾಗಿ ಪರಿಹಾರ ನೀಡಬೇಕು. ದಾಖಲೆಗಳಿಲ್ಲದ ಐವತ್ತಕ್ಕೂ ಹೆಚ್ಚು ವರ್ಷಗಳಿಗಳಿಂದ ಅನುಭವದಲ್ಲಿರುವ ಬಗರ್ ಹುಕುಂ ಸಾಗುವಳಿದಾರರ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಾಗ ಅವರಿಗೂ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು. ಕೇಂದ್ರ ಸರ್ಕಾರದ ಜನವಿರೋದಿ ನೀತಿಗಳ ವಿರುದ್ದ ಆಗಷ್ಟ್ 9 ರಂದು ಜೈಲ್ ಭರೋ. ಹಾಗೂ ಸೆಪ್ಟೆಂಬರ್ 5 ಪಾರ್ಲಿಮೆಂಟ್ ಚಲೋಗೆ ಮುಂದಾಗ ಬೇಕೆಂದು ಕರೆ ನೀಡಿದರು. ಸಭೆಯಲ್ಲಿ ಪ್ರಾಂತ ರೈತ ಸಂಘದ ಮುಖಂಡರಾದ ಶಂಕರ್, ಷಣ್ಮುಖಸ್ವಾಮಿ, ಮಹೇಶ್ ಸಿದ್ದಶೆಟ್ಟಿ, ಸಿದ್ದಾರಾಜ್, ಶಿವಣ್ಣ ಉಪಸ್ಥಿತರಿದ್ದರು.

ಹಿಮಾ ದಾಸ್ ಮತ್ತು ಜಾತಿ ಹುಡುಕಾಟ

ಅತಿಥಿ ಅಂಕಣ



ಡಾ. ವಿನಯಾ ಒಕ್ಕುಂದ



ಭಾರತದಲ್ಲಿ ಜಾತಿವ್ಯವಸ್ಥೆ ಎನ್ನುವುದು ಸಮಾಜ ಚಲನೆಯ ವೃತ್ತಿಸೂಚಕವಾಗಿತ್ತು ಅಷ್ಟೇ ಎಂದು ವಾದಿಸುವವರು; ಸಾಧನೆಯನ್ನು ಗೌರವಿಸುವಾಗಲೂ ತಮ್ಮ ಚಿಲ್ಲರೆ ಜಾತಿಬುದ್ಧಿಯನ್ನು ತೋರುತ್ತಾರೆ. ಪಿತೃ ಪ್ರಾಧಾನ್ಯತೆಯ ಬಂಡೆಗಲ್ಲನ್ನೊಡೆದು ಮುನ್ನುಗ್ಗಿದವರು ಹೆಣ್ಣಾಗಿದ್ದರಂತೂ ಸಮಾಜದ ಕಣ್ಣೋಟವು ಅವರ ಜಾತಿ–ಧರ್ಮಗಳ ಗುಣಿಲೆ–ಭಾಗಿಲೆಗಳಲ್ಲಿ ತೊಡಗುತ್ತದೆ. ಹೆಣ್ಣಿನ ಸಾಧನೆಯನ್ನು ಹೇಗಾದರೂ ಕೊಂಕಿಸುವ ಪ್ರವೃತ್ತಿ ಕ್ರೀಡಾ ಕ್ಷೇತ್ರಕ್ಕೆ ಮಾತ್ರ ಸೀಮಿತವಾದುದೇನೂ ಅಲ್ಲ. ಇತ್ತೀಚೆಗೆ ಟಿ.ವಿ. ಹಾಡು ಸ್ಪರ್ಧೆಯಲ್ಲಿ ಸುಹಾನಾ ಸಯ್ಯದ್ ಎಂಬ ಮುಸ್ಲಿಂ ಯುವತಿ, ಹಿಂದೂ ದೈವಾರಾಧನೆಯ ಹಾಡು ಹಾಡಿದ್ದಕ್ಕೆ ಅವಳನ್ನು ಅಪಮಾನಿಸಲಾಯಿತು. ಭಾರತದ ಈ ಮನಸ್ಥಿತಿ ನಿಜಕ್ಕೂ ನಾಚಿಕೆ ಅನ್ನಿಸುವಂತಿದೆ. ಭಾರತೀಯ ಮಹಿಳಾ ಸಾಧಕಿಯರು ನಡೆಸಬೇಕಾದ 'ದಂಗಲ್' ತಂತಮ್ಮ ಕ್ಷೇತ್ರಗಳಲ್ಲಿ ಮಾತ್ರವಲ್ಲ, ಹೆಣ್ಣನ್ನು ಸಮಾನ ಗೌರವದಿಂದ ನೋಡಲಾಗದ ಮನಸ್ಥಿತಿಯ ವಿರುದ್ಧವೂ.

ಹಿಮಾದಾಸ್– ಭಾರತದ ಕ್ರೀಡಾ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ವಿಶ್ವ ಜ್ಯೂನಿಯರ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಪಡೆದು ಜಗತ್ತಿನ ಗಮನವನ್ನು ತನ್ನೆಡೆಗೆ ಹೊರಳಿಸಿಕೊಂಡ ಕ್ರೀಡಾಪಟು. ಆಸ್ಸಾಂನ ನಾಗಾಂವ್ ಜಿಲ್ಲೆಯ ಧಿಂಗ್ ಎಂಬ ಹಳ್ಳಿಯ ಬಡರೈತ ಕುಟುಂಬದಲ್ಲಿ ಜನೆವರಿ 9, 2000ದಲ್ಲಿ ಜನಿಸಿದವಳು. ಅವಿಭಕ್ತ ರೈತಾಪಿ ಕುಟುಂಬದ ಜೋನಿಲಾ ಮತ್ತು ರಂಜಿತದಾಸ್ ದಂಪತಿಗಳ ಮಗಳು. ಭತ್ತದ ಗದ್ದೆಯ ವ್ಯವಸಾಯವನ್ನೇ ಮುಖ್ಯ ಆದಾಯವಾಗಿಸಿಕೊಂಡಿದ್ದ ಕುಟುಂಬಕ್ಕೆ ಮಗಳ ಕ್ರೀಡಾ ಕನಸನ್ನು ಈಡೇರಿಸುವ ವ್ಯವಸ್ಥಿತ ಸೌಲಭ್ಯಗಳನ್ನು ಒದಗಿಸುವುದು ಸಾಧ್ಯವಿರಲಿಲ್ಲ. ಊರಿನಲ್ಲಿಯೂ ಕ್ರೀಡಾ ತರಬೇತಿಗೆ ಅಗತ್ಯವಾದ ಅನುಕೂಲಗಳಿರಲಿಲ್ಲ. ಭತ್ತದ ಗದ್ದೆಯ ತೆವರಿನಲ್ಲಿ ಬರಿಗಾಲಿನಲ್ಲಿ ಓಡಾಡಿಕೊಂಡು ಬೆಳೆದ ಹಿಮಾ ಬಾಲ್ಯದಿಂದಲೂ ಫುಟ್ಬಾಲ್ ಆಟದ ಕನಸು ಕಂಡಳು. ವಾರಿಗೆಯ ಹುಡುಗರೊಂದಿಗೆ ಫುಟ್ಬಾಲ್ ಆಡುತ್ತ ಆಟದ ರುಚಿಯನ್ನು ಉಂಡಳು. ಬಡತನವಾಗಲಿ, ಸೌಲಭ್ಯಗಳ ಕೊರತೆಯಾಗಲಿ ಅವಳ ಧೀಃಶಕ್ತಿಯನ್ನು ಕುಂದಿಸಲಿಲ್ಲ. ತನ್ನ ನೆಲದ ಈ ಕುಡಿಗೆ ಗೌಹಾತಿಯ ಯುವಜನ ಕ್ರೀಡಾ ಇಲಾಖೆ ಬೆಂಬಲವಾಗಿ ನಿಂತಿತು. ಈ ಇಲಾಖೆಯಲ್ಲಿ ತರಬೇತುದಾರರಾಗಿದ್ದ ನಿಪೋದಾಸ್ ಎನ್ನುವವರು ತುಂಬ ಮುತುವರ್ಜಿಯಿಂದ ಅವಳೊಳಗಿನ ಅಥ್ಲೀಟ್‌ಳನ್ನು ಪೋಷಿಸಿದರು.

ಹಿಮಾ, ರಾಜ್ಯಮಟ್ಟದಿಂದ ರಾಷ್ಟ್ರಮಟ್ಟದ ಕಡೆ ಮುಂಚಲಿಸಿದಾಗ ರಾಷ್ಟ್ರೀಯ ತಂಡದ ಕೋಚ್ ಬಸಂತ್‌ಸಿಂಗ್ ಹಿಮಾಳ ಹಾದಿಯನ್ನು ಇನ್ನಷ್ಟು ನಿಚ್ಚಳವಾಗಿಸಿದರು. ವಿಶೇಷವೆಂದರೆ, ಹಿಮಾದಾಸ್ ಭಾರತದ ಗೌರವಾನ್ವಿತ ಅಥ್ಲಿಟ ಪಿ.ಟಿ. ಉಷಾರ ಮಮತೆ ಮತ್ತು ಮಾರ್ಗಸೂಚಿಯನ್ನು ಪಡೆದರು. ಜುಲೈ 13, 2018 ರಂದು ಫಿನ್ಲೆಂಡಿನಲ್ಲಿ ನಡೆದ 20 ವರ್ಷದ ಒಳಗಿನವರ ವಿಶ್ವ ಅಥ್ಲೆಟಿಕ್ ಜ್ಯೂನಿಯರ್ಸ್ ಮಹಿಳಾ ವಿಭಾಗದ 400 ಮೀಟರ ಓಟದ ಸ್ಪಧೆಯಲ್ಲಿ ಗುರಿಯನ್ನು ಕೇವಲ 51.46 ಸೆಕೆಂಡುಗಳಲ್ಲಿ ತಲುಪಿ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಳು. ಹಿಮಾಳ ಈ ಸಾಧನೆಗೆ ವಿಶ್ವ ಬೆರಗಾಗಿತ್ತು. ಕ್ರೀಡಾ ಜಗತ್ತು ತನ್ನ ಮಡಿಲಿನ ಈ ಬೆಳಸನ್ನು ಹೆಮ್ಮೆಯಿಂದ ಅವಲೋಕಿಸಿಕೊಂಡಿತ್ತು. ದೇಶದ ಮತ್ತು ರಾಜ್ಯದ ಸರ್ಕಾರಗಳು, ಬೇರೆ ಬೇರೆ ಕ್ಷೇತ್ರದ ದಿಗ್ಗಜರು, ಚಿಂತಕರು, ಸಾಧಕರು ಹಿಮಾಳನ್ನು ಮನಸ್ಸು ತುಂಬಿ ಅಭಿನಂದಿಸಿದರು. ಭಾರತದ ಗಂಡಾಳಿಕೆಯ, ಹೆಣ್ಣಿನ ಕಾಲುಗಳಿಗೆ ಸಂಕೋಲೆಯ ಶೃಂಗಾರ ಮಾಡಿದ ನೆಲದಲ್ಲಿ ಅದೆಲ್ಲವನ್ನು ನಿರಾಕರಿಸಿ ಹಿಮಾ ಮುನ್ನುಗ್ಗಿದಳು– ಇದಿಷ್ಟೆ ಆಗಿದ್ದರೆ, ವಿವಿಧ ಕ್ಷೇತ್ರಗಳಲ್ಲಿ ಅಪರೂಪದ ಸಾಧನೆ ಮಾಡಿ ಹೆಜ್ಜೆ ಮೂಡದ ಹಾದಿಯಲ್ಲಿ ಹೆಜ್ಜೆ ಮೂಡಿಸಿದ ಹೆಣ್ಣುಗಳ ಸಾಧನೆಯ ಪಟ್ಟಿಗೆ ಹಿಮಾಳ ಹೆಸರು ಮತ್ತೊಂದು ಜೋಡಣೆಯಾಗಿರುತ್ತಿತ್ತು.

ಆದರೆ, ಹಿಮಾದಾಸ್ ಕುರಿತ ಇತ್ತೀಚಿನ ಒಂದು ವರದಿ ಭಾರತದ ಪ್ರಜ್ಞಾವಂತಿಕೆಯ ನೆಲೆಬೆಲೆಯನ್ನು ಅನಾವರಣಗೊಳಿಸಿತು. ಆಸ್ಸಾಂನ ಭತ್ತದ ಗದ್ದೆಗಳಲ್ಲಿಂದ ಎದ್ದು ಬಂದ ಹುಡುಗಿಯೊಬ್ಬಳು ವಿಶ್ವ ಚಾಂಪಿಯನ್ ಆದಾಗ; ನಾಗರಿಕರಲ್ಲಿ ಅವಳ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಹುಟ್ಟುವುದು ಸಹಜ. ಅದರಲ್ಲೂ ಕೈಬೆರಳುಗಳಲ್ಲಿ ಮಾಹಿತಿ ಜ್ಞಾನವು ದಕ್ಕುವ ಸುಲಭ ಕಾಲದಲ್ಲಿ ಕುತೂಹಲವನ್ನು ತಣಿಸಿಕೊಳ್ಳುವುದೂ ಕಠಿಣವಲ್ಲ. ಭಾರತೀಯರು ಗೂಗಲ್ ಸರ್ಚನಲ್ಲಿ ಹಿಮಾದಾಸ್ ಕುರಿತ ಪ್ರಶ್ನೆಗಳನ್ನು ತುಂಬಿಸಿದರು. ಅವು, ಅವಳ ಸಾಧನೆಯ ಹಾದಿ, ಭವಿಷ್ಯದ ಮುನ್ನೋಟಗಳನ್ನು ತಿಳಿದುಕೊಳ್ಳುವಂಥವಾಗಿರಲಿಲ್ಲ. ವಿಷಾದನೀಯ ಸತ್ಯವೆಂದರೆ, ಮುಕ್ಕಾಲುಪಾಲು ಪ್ರಶ್ನೆಗಳು ಹಿಮಾದಾಸ್ ಜಾತಿಯನ್ನು ಹುಡುಕಾಡುತ್ತಿದ್ದವು. ಈ ವಿದ್ಯಮಾನ ಜಗತ್ತಿನೆದುರು ಭಾರತೀಯ ಮನಸ್ಥಿತಿಯನ್ನು ತೆರೆದಿಟ್ಟಿತು. ಇದು ಹಿಮಾದಾಸ್ ಕುರಿತು ತಿಳಿದುಕೊಳ್ಳುವ ಸಹಜ ಕುತೂಹಲದ್ದೇ? ವ್ಯಕ್ತಿಯನ್ನು ತಿಳಿಯುವಲ್ಲಿ ಜಾತಿಯನ್ನು ತಿಳಿಯಬೇಕಿರುವುದು ಕಡ್ಡಾಯವೇ? ಜಾತ್ಯಾತೀತ, ಧರ್ಮನಿರಪೇಕ್ಷ ಎಂಬ ಸಂವಿಧಾನಾತ್ಮಕ ಆಶಯಗಳು ವಿಕಟ ವ್ಯಂಗ್ಯಕ್ಕೆ ಈಡಾಗುತ್ತಿವೆ.

ಇದು ಈ ದೇಶದ ಹಳೆಯ ರೋಗ ಎಂದು ಉಪೇಕ್ಷಿಸಲು ಬರುವಂತಿಲ್ಲ. ಯಾಕೆಂದರೆ ಗೂಗಲ್ ಸರ್ಚ ಮಾಡಲು ಹೊರಟವರು ಅಶಿಕ್ಷಿತರಲ್ಲ. ಗ್ರಾಮದ ಜನರಲ್ಲ. ಆಧುನಿಕ ಭಾರತದ ಸೌಲಭ್ಯಗಳ ವಾರಸುದಾರರಾದ ಸುಶಿಕ್ಷಿತ, ಸಭ್ಯ, ಸುಸಂಸ್ಕೃತರು. ಜಾತಿಯ ವಿಷಯದಲ್ಲಿ ಇಂತಹ ಸುಶಿಕ್ಷಿತರು ವಿಚಿತ್ರ ಮೌಢ್ಯಕ್ಕೊಳಗಾದಂತೆ ವರ್ತಿಸುತ್ತಾರೆ. ಕೆಳಜಾತಿಗಳು ಸರ್ಕಾರಗಳಿಂದ ಪಡೆವ ಸವಲತ್ತುಗಳನ್ನು ಹಂಗಿಸುತ್ತಾರೆ. ಪ್ರತಿಭಾವಂತರಿಗೆ ಅನ್ಯಾಯವಾಗುತ್ತಿದೆ ಎಂದು ಹುಯ್ಯಲಿಡುತ್ತಾರೆ. ಆದರೆ, ಒಂದು ಸಾಧನೆಯ ವ್ಯಕ್ತಿತ್ವವನ್ನು ಮೆಚ್ಚಲು ಗೌರವಿಸಲು ಜಾತಿ–ಧರ್ಮಗಳ ಸ್ಪಷ್ಟ ಚಿತ್ರಣ ಅಗತ್ಯವಾಗಿಬಿಡುತ್ತದೆ. ಒಂದೊಮ್ಮೆ ಸಾಧಕರು ತಮ್ಮ ಜಾತಿ–ಧರ್ಮಗಳಿಗೆ ಲಗತ್ತಾಗಿದ್ದರೆ ಅವರನ್ನು ತಮ್ಮ ಐಕಾನ್‌ಗಳಾಗಿಸಿಕೊಳ್ಳುತ್ತಾರೆ. ಹೀಗೆ ಒಂದು ಸಮುದಾಯ ತನ್ನ ಐಕಾನ್‌ಗಳನ್ನು ಒಪ್ಪಿಕೊಂಡಿತು ಎಂದರೆ, ಅವರನ್ನು ಮೀರಿಸುವ ಅಥವಾ ಸಮಾನವಾದ ಸಾಧನೆಯನ್ನು ಒಪ್ಪಿಕೊಳ್ಳಲಾಗದಷ್ಟು ಜಡತೆಯ ರೋಗಕ್ಕೆ ಒಳಗಾಗುತ್ತದೆ ಮಾತ್ರವಲ್ಲ, ತನ್ನ ನಾಯಕರೆಂದು ಪ್ರತಿಷ್ಠಾಪಿಸಿಕೊಂಡವರ ಏನೆಲ್ಲ ನೀಚ ಪ್ರವೃತ್ತಿಯನ್ನೂ ಎಗ್ಗಿಲ್ಲದೆ ಮುಲಾಜಿಲ್ಲದೆ ಸಮರ್ಥಿಸುತ್ತದೆ. ದೇಶದ ರಾಜಕಾರಣದ ದುರಂತ ವಾಸ್ತವದ ಬಹುಪಾಲು ಈ ಜಾತಿನಾಯಕತ್ವದ ದುರ್ನಡತೆಗೆ ಸಂದಾಯವಾಗುತ್ತದೆ. ಈ ಮನಸ್ಥಿತಿಯನ್ನು ಸಾಂಸ್ಕೃತಿಕ ಜಗತ್ತಿಗೂ ವಿಸ್ತರಿಸಿಕೊಳ್ಳಲಾಗುತ್ತಿದೆ. ಇದೇ ಸರಿಯಾದ ಕ್ರಮ ಎಂದು ನಂಬಿಸಲಾಗುತ್ತದೆ.

ನಂಬಿಕೆಗೆ ಹಿಂದೇಟು ಹಾಕಿದರೆ ಒತ್ತಾಯದಿಂದ, ಬಲಾತ್ಕಾರದಿಂದ ಒಪ್ಪಿಸಲಾಗುತ್ತದೆ. ಇತ್ತೀಚಿನ ರಾಜ್ಯದ ವಿಧಾನಸಭೆ ಚುನಾವಣೆಯ ಪ್ರಚಾರಕ್ಕೆ ಭಾಗವಹಿಸಲಿಚ್ಛಿಸಿದ ನಟ–ನಟಿಯರ ಮೇಲೆ ಹೀಗೆ ಜಾತಿಯ ಬೆದರಿಕೆಯನ್ನೋ ಭಾವನಾತ್ಮಕ ಒತ್ತಡವನ್ನೋ ಹಾಕಲಾಯಿತು. ಅವರ ರಾಜಕೀಯ ಆಯ್ಕೆಯನ್ನು ಜಾತಿಯ ಉಪಕರಣದಿಂದ ನಿಯಂತ್ರಿಸಲಾಯಿತು. ಮಠ ಮತ್ತು ಪೀಠಾಧಿಪತಿಗಳ ತಪ್ಪು–ಒಪ್ಪುಗಳನ್ನು ಪರಾಮರ್ಶಿಸುವ ಸಂದರ್ಭದಲ್ಲಿಯೂ ಜಾತಿಯ ಕನ್ನಡಕ ರಕ್ಷಣಾ ಕವಚದಂತೆ ವರ್ತಿಸುತ್ತದೆ. ದಿನದಿಂದ ದಿನಕ್ಕೆ ಭಾರತದಲ್ಲಿ ಜಾತೀಯತೆಯ ಉನ್ಮಾದ ಹೆಚ್ಚುತ್ತಿದೆ. ಇದಕ್ಕೆ ಶಿಕ್ಷಣದ ಕೊರತೆ ಕಾರಣವಲ್ಲ. ಸುಶಿಕ್ಷಿತ ವರ್ಗದಲ್ಲಿಯೇ ಈ ಭೂತ ಮನೆಮಾಡಿದೆ. ನಗರಪ್ರದೇಶಗಳು ಮೇಲ್ನೋಟಕ್ಕೆ ಅತ್ಯಾಧುನಿಕತೆಯನ್ನು ಉಸಿರಾಡುತ್ತಿರುವಂತೆ ಕಾಣುತ್ತಿವೆ. ಆದರೆ ಗ್ರಾಮೀಣ ಪ್ರದೇಶಕ್ಕಿಂತಲೂ ಹೆಚ್ಚು ಗಾಢವಾದ ಜಾತಿಯ ಕಸುರಿನಿಂದ ಕೂಡಿದೆ. ಆಶ್ಚರ್ಯವೆಂದರೆ, ಭಾರತದಲ್ಲಿ ಜಾತಿವ್ಯವಸ್ಥೆ ಎನ್ನುವುದು ಸಮಾಜ ಚಲನೆಯ ವೃತ್ತಿಸೂಚಕವಾಗಿತ್ತು ಅಷ್ಟೇ ಎಂದು ವಾದಿಸುವವರು; ಸಾಧನೆಯನ್ನು ಗೌರವಿಸುವಾಗಲೂ ತಮ್ಮ ಚಿಲ್ಲರೆ ಜಾತಿಬುದ್ಧಿಯನ್ನು ತೋರುತ್ತಾರೆ.

ಪಿತೃ ಪ್ರಾಧಾನ್ಯತೆಯ ಬಂಡೆಗಲ್ಲನ್ನೊಡೆದು ಮುನ್ನುಗ್ಗಿದವರು ಹೆಣ್ಣಾಗಿದ್ದರಂತೂ ಸಮಾಜದ ಕಣ್ಣೋಟವು ಅವರ ಜಾತಿ–ಧರ್ಮಗಳ ಗುಣಿಲೆ–ಭಾಗಿಲೆಗಳಲ್ಲಿ ತೊಡಗುತ್ತದೆ. ಪಿ.ಟಿ. ಉಷಾ ಅಥ್ಲೀಟ್‌ನಿಂದ ನಿವೃತ್ತಿಯಾದ ಇಷ್ಟು ವರ್ಷಗಳ ನಂತರವೂ ಅವರ ಜಾತಿಯ ಹುಡುಕಾಟದ ಕುತೂಹಲ ತಣಿದಿಲ್ಲ. ಓಲಂಪಿಕ್ಸ್‌ನಲ್ಲಿ ಬ್ಯಾಡ್ಮಿಂಟನ್‌ನಲ್ಲಿ ಬೆಳ್ಳಿ ಗಳಿಸಿದ ಪಿ.ವಿ. ಸಿಂಧು ವಿಷಯದಲ್ಲಿಯೂ ಜಾತಿಯ ಬುದ್ಧಿ ಪ್ರಯೋಗವಾಯಿತು. ಭಾರತೀಯ ಟೆನ್ನಿಸ್‌ಗೆ ಹೊಸ ಕಸುವನ್ನು ತಂದ ಸಾನಿಯಾ ಮಿರ್ಜಾ ಮುಸ್ಲಿಂ ಎಂಬ ಕಾರಣಕ್ಕಾಗಿಯೇ ಅವಳ ಮೂಗುತಿ, ಸ್ಕರ್ಟ್‌ನ ಎತ್ತರ, ಊಟ, ಮದುವೆ ಎಲ್ಲವೂ ಹಾಟ್ ಸುದ್ದಿಗಳಾಗಿ ಬಿಕರಿಯಾಗುತ್ತಿದ್ದವು. "ನನ್ನನ್ನು ಭಾರತೀಯಳಾಗಿ ನೋಡಿ. ನನ್ನ ಆಟದ ಬಗ್ಗೆ ಕಮೆಂಟ್ ಮಾಡಿ ಧರ್ಮದ ಬಗ್ಗಲ್ಲ" ಎಂದು ಸಾನಿಯಾ ಮತ್ತೆ ಮತ್ತೆ ಹೇಳಿಕೊಳ್ಳಬೇಕಾಯಿತು. ಸೈನಾ ನೆಹ್ವಾಲ್ ಕಂಚಿನ ಪದಕ ಪಡೆದಾಗ, ಎದುರಾಳಿ ಆಟಗಾರ್ತಿ ಆಟವನ್ನು ಬಿಟ್ಟುಕೊಟ್ಟಿದ್ದೇ ಕಾರಣವೆಂದು ಹೇಳಲಾಯ್ತು. ಸೈನಾ, ಮಾಧ್ಯಮದೆದುರು ಬಂದು ತಮ್ಮ ನಿರಂತರ ಶ್ರಮವನ್ನು ವಿವರಿಸಿಕೊಂಡು– ಆ ಪದಕದ ಮೇಲೆ ನನ್ನ ಹೆಸರು ಎಂದೋ ಬರೆಯಲಾಗಿತ್ತು– ಎಂದು ಭಾವುಕರಾಗಿ ಹೇಳಬೇಕಾಯಿತು. ಹೆಣ್ಣಿನ ಸಾಧನೆಯನ್ನು ಹೇಗಾದರೂ ಕೊಂಕಿಸುವ ಪ್ರವೃತ್ತಿ ಕ್ರೀಡಾ ಕ್ಷೇತ್ರಕ್ಕೆ ಮಾತ್ರ ಸೀಮಿತವಾದುದೇನೂ ಅಲ್ಲ. ಇತ್ತೀಚೆಗೆ ಟಿ.ವಿ. ಹಾಡು ಸ್ಪರ್ಧೆಯಲ್ಲಿ ಸುಹಾನಾ ಸಯ್ಯದ್ ಎಂಬ ಮುಸ್ಲಿಂ ಯುವತಿ, ಹಿಂದೂ ದೈವಾರಾಧನೆಯ ಹಾಡು ಹಾಡಿದ್ದಕ್ಕೆ ಅವಳನ್ನು ಅಪಮಾನಿಸಲಾಯಿತು. ಅದೆಷ್ಟೋ ಮುಸ್ಲಿಂ ಹಾಡುಗಾರರು ಹಿಂದೂ ದೈವವನ್ನು, ಹಿಂದೂ ಹಾಡುಗಾರರು ಮುಸ್ಲಿಂ ದೈವವನ್ನು ಸ್ತುತಿಸಿ ಹಾಡಿದ ಪರಂಪರೆಯೇ ಇದೆ ಎಂಬುದನ್ನೂ ಅಲಕ್ಷಿಸಿ. ಹಿಮಾದಾಸ್ ಸಾಧನೆಯನ್ನು ಮುಕ್ತಕಂಠದಿಂದ ಅಭಿನಂದಿಸಬೇಕಾಗಿದ್ದ ಅಥ್ಲೀಟ್ ಫೆಡರೇಷನ್ ಇಂಡಿಯ ಸಂಸ್ಥೆ "ಇಂಗ್ಲೀಷ ಸರಿಯಾಗಿ ಮಾತನಾಡಲು ಬರದಿದ್ದರೂ ಹಿಮಾ ಉತ್ತಮ ಸಾಧನೆ ಮಾಡಿದ್ದಾರೆ. ಹಿಮಾಗೆ ಅಭಿನಂದನೆಗಳು" ಎಂದು ಟ್ವೀಟ್ ಮಾಡಿತ್ತು. ಏನರ್ಥ ಇದು? ಭಾರತೀಯ ಅಥ್ಲೀಟ್ ಆಗುವ ಅರ್ಹತೆಗಳಲ್ಲಿ ಇಂಗ್ಲೀಷ ಜ್ಞಾನ ಮುಖ್ಯವಾದದ್ದೆಂದೇ? ಅಥವಾ ಅಭಿನಂದನೆಗಳು ಸಲ್ಲಿಕೆಯಾಗುತ್ತಿರುವುದು ಹುಡುಗಿಗಾದ್ದರಿಂದ ವ್ಯಂಗ್ಯದ ಧಾಟಿ ಅನಿವಾರ್ಯವೆಂದೇ? ಭಾರತದ ಈ ಮನಸ್ಥಿತಿ ನಿಜಕ್ಕೂ ನಾಚಿಕೆ ಅನ್ನಿಸುವಂತಿದೆ. ಭಾರತೀಯ ಮಹಿಳಾ ಸಾಧಕಿಯರು ನಡೆಸಬೇಕಾದ 'ದಂಗಲ್' ತಂತಮ್ಮ ಕ್ಷೇತ್ರಗಳಲ್ಲಿ ಮಾತ್ರವಲ್ಲ, ಹೆಣ್ಣನ್ನು ಸಮಾನ ಗೌರವದಿಂದ ನೋಡಲಾಗದ ಮನಸ್ಥಿತಿಯ ವಿರುದ್ಧವೂ. ●

ಮೋದಿ ಸರಕಾರವನ್ನು ಬಯಲಿಗೆಳೆದ ಅವಿಶ್ವಾಸ ಠರಾವು



ಸರಕಾರ ಒಂದು ಸುಸ್ಥಿರ ಬಹುಮತ ಹೊಂದಿದೆ ಎಂದು ಸ್ಪಷ್ಟವಾಗಿರುವಾಗ ಒಂದು ಅವಿಶ್ವಾಸ ಠರಾವನ್ನು ಮಂಡಿಸುವುದು ಎಷ್ಟು ಸರಿ? ಬಿಜೆಪಿ ಮುಖಂಡರು ಈ ಪ್ರಶ್ನೆಯೆತ್ತಲು ಯತ್ನಿಸಿದರು. ಅವಿಶ್ವಾಸ ಠರಾವು ತರುವುದು ಒಂದು ಸರಕಾರವನ್ನು ಮತದಾನದ ಮೂಲಕ ಇಳಿಸಲು ಮಾತ್ರವೇ ಅಲ್ಲ, ಅದು ಸರಕಾರದ ಧೋರಣೆಗಳು ಮತ್ತು ಕೆಲಸ-ಕಾರ್ಯಗಳ ಬಗ್ಗೆ ಅಸಮ್ಮತಿ ಮತ್ತು ವಿರೋಧಕ್ಕೆ ದನಿ ನೀಡುವ ಒಂದು ಉಪಕರಣವೂ ಆಗಿದೆ. ಬಿಜೆಪಿ ಮತ್ತು ಅದರ ಎನ್‌ಡಿಎ ಮಿತ್ರ ಪಕ್ಷಗಳು ಈ ವಿಷಯದಲ್ಲೇ ವಿಫಲವಾದವು,ನರೇಂದ್ರ ಮೋದಿಯವರು ಪ್ರತಿಪಕ್ಷಗಳು ಎತ್ತಿದ ಪ್ರಶ್ನೆಗಳು ಮತ್ತು ವಿಷಯಗಳಿಗೆ ತೀಕ್ಷ್ಣ ಉತ್ತರ ಕೊಡುವಲ್ಲಿ ವಿಫಲರಾಗಿದ್ದಾರೆ ಎಂಬುದೇ ಈ ಚರ್ಚೆಯನ್ನು ವೀಕ್ಷಿಸಿದ, ಮತ್ತು ಯಾವ ಪಕ್ಷಕ್ಕೂ ಬದ್ಧರಾಗಿರದ ಬಹಳಷ್ಟು ಜನಗಳಲ್ಲಿ ಉಂಟಾಗಿರುವ ಅಭಿಪ್ರಾಯ.



ಪ್ರಕಾಶ ಕಾರಟ್

ಜುಲೈ 20 ರಂದು ಲೋಕಸಭೆಯಲ್ಲಿ ಚರ್ಚೆ ಮತ್ತು ಮತದಾನ ನಡೆದ ಅವಿಶ್ವಾಸ ಠರಾವು ಮೋದಿ ಸರಕಾರದ ನಾಲ್ಕು ವರ್ಷಗಳ ದಾಖಲೆಗಳನ್ನು ಬಯಲಿಗೆಳೆಯುವ ಒಂದು ಸಂದರ್ಭವಾಗಿ ಬಿಟ್ಟಿದೆ.

ಠರಾವು ಒಬ್ಬ ತೆಲುಗು ದೇಶಂ ಎಂಪಿಯ ಹೆಸರಿನಲ್ಲಿತ್ತು; ಆಂಧ್ರಪ್ರದೇಶವನ್ನು ಒಂದು ವಿಶೇಷ ವಿಧದ ರಾಜ್ಯ ಎಂದು ಘೋಷಿಸುವುದಾಗಿ ನೀಡಿದ ಆಶ್ವಾಸನೆಗೆ ಮೋದಿ ಸರಕಾರ ಮಾಡಿದ ವಿಶ್ವಾಸಘಾತವನ್ನು ಎತ್ತಿ ತೋರುವುದು ಅದರ ಉದ್ದೇಶವಾಗಿತ್ತು. ಆದರೂ ಇದರ ಮೇಲಿನ ಚರ್ಚೆಗಳಲ್ಲಿ ಪ್ರತಿಪಕ್ಷಗಳಿಗೆ ಹಲವಾರು ಪ್ರಶ್ನೆಗಳಲ್ಲಿ ಮೋದಿ ಸರಕಾರದ ವಿಫಲತೆಗಳ ಮೇಲೆ ಗಮನ ಸೆಳೆಯುವುದು ಸಾಧ್ಯವಾಯಿತು. ರೈತರ ಪಾಡು, ಕೃಷಿ ಬೆಳೆಗಳಿಗೆ ಉತ್ಪಾದನಾ ಖರ್ಚು ಮತ್ತು ಅದರ ಅರ್ಧದಷ್ಟು ಸೇರಿಸಿ ಬೆಲೆ ನಿರ್ಧರಿಸಬೇಕೆಂಬ ಸ್ವಾಮಿನಾಥನ್ ಆಯೋಗದ ಸೂತ್ರವನ್ನು ಸರಕಾರಗಳು ಪಾಲಿಸದಿರುವುದು; ಪ್ರತಿವರ್ಷ ಎರಡು ಕೋಟಿ ಉದ್ಯೋಗಾವಕಾಶಗಳನ್ನು ಒದಗಿಸುವಲ್ಲಿ ಸಂಪೂರ್ಣ ವಿಫಲತೆ; ನೋಟುರದ್ಧತಿಯ ಅಧ್ವಾನ; ವಿದೇಶಗಳಲ್ಲಿ ಪೇರಿಸಿಟ್ಟ ಕಪ್ಪು ಹಣವನ್ನು ವಾಪಾಸು ತರುವ ಟೊಳ್ಳು ಬಡಾಯಿ ಇತ್ಯಾದಿ ಇತ್ಯಾದಿ.

ಇದಕ್ಕೂ ಮಿಗಿಲಾಗಿ, ಮೋದಿ ಸರಕಾರದ ಹೆಗ್ಗುರುತಾಗಿ ಬಿಟ್ಟಿರುವ ದ್ವೇಷ ಮತ್ತು ಅಸಹಿಷ್ಣುತೆಯ ವಾತಾವರಣ ಪರಿಣಾಮಕಾರಿಯಾಗಿ ಬಯಲಿಗೆ ಬಂತು-ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ಹಲ್ಲೆಗಳು ಮತ್ತು ದೇಶಾದ್ಯಂತ ನಡೆಯುತ್ತಿರುವ ಭೀಕರ ಸಾಯಬಡಿಯುವ ಘಟನೆಗಳು-ಇವೆಲ್ಲ ಸರಕಾರವನ್ನು ಕಟಕಟೆಯಲ್ಲಿ ನಿಲ್ಲಿಸಿದವು.

ರಫೇಲ್ ಯುದ್ಧವಿಮಾನಗಳ ಖರೀದಿಯಲ್ಲಿನ ಭ್ರಷ್ಟಾಚಾರದ ಪ್ರಶ್ನೆಯನ್ನು ಬಲವಾಗಿ ಎತ್ತಲಾಯಿತು, ನಿರ್ದಿಷ್ಟವಾಗಿ ರಾಹುಲ್ ಗಾಂಧಿಯವರಿಂದ. ವಿಮಾನದ ಬೆಲೆಯ ಬಗ್ಗೆ ಮಾಹಿತಿ ಅದು ಗುಪ್ತವಾಗಿರಬೇಕೆಂಬ ಎರಡು ದೇಶಗಳ ನಡುವಿನ ಒಪ್ಪಂದಕ್ಕೆ ಒಳಗಾಗಿದೆ ಎಂಬ ರಕ್ಷಣಾ ಮಂತ್ರಿ ನಿರ್ಮಲಾ ಸೀತಾರಾಮನ್ ಅವರ ನೆವ ಟೊಳ್ಳೆಂದು ಸಿದ್ಧವಾಯಿತು. ಇಂತಹ ಒಪ್ಪಂದ ವಿಮಾನದ ತಾಂತ್ರಿಕ ಮತ್ತು ಕಾರ್ಯಾಚರಣೆಯ ವರ್ಗೀಕೃತ ಮಾಹಿತಿಯ ಕುರಿತಾಗಿಯೇ ಹೊರತು ಅದರ ವೆಚ್ಚದ ಕುರಿತಾಗಿ ಅಲ್ಲ.


36 ವಿಮಾನಗಳನ್ನು ಯಾವ ಬೆಲೆಯಲ್ಲಿ ಖರೀದಿಸಲಾಯಿತು ಎಂಬ ಮಾಹಿತಿ ಕೊಡಲು ಮೋದಿ ಸರಕಾರ ಪಟ್ಟು ಹಿಡಿದು ನಿರಾಕರಿಸಿರುವುದು ಈ ವ್ಯವಹಾರದಲ್ಲಿ ಏನೋ ಅಪರಾತಪರಾ ಇರಬೇಕು ಎನ್ನುವ ವ್ಯಾಪಕವಾಗಿರುವ ಸಂದೇಹವನ್ನು ದೃಢಪಡಿಸುತ್ತದೆ.

ಠರಾವಿನ ಚರ್ಚೆಯಲ್ಲಿ ಮಾತನಾಡಿದ ಬಿಜೆಪಿ ಮುಖಂಡರುಗಳು ಸರಕಾರ ಒಂದು ಸುಸ್ಥಿರ ಬಹುಮತ ಹೊಂದಿದೆ ಎಂದು ಸ್ಪಷ್ಟವಾಗಿರುವಾಗ ಒಂದು ಅವಿಶ್ವಾಸ ಠರಾವನ್ನು ಮಂಡಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಲು ಯತ್ನಿಸಿದರು. ಇದಂತೂ ಒಂದು ಹುಸಿ ವಾದ. ಅವಿಶ್ವಾಸ ಠರಾವು ತರುವುದು ಒಂದು ಸರಕಾರವನ್ನು ಮತದಾನದ ಮೂಲಕ ಇಳಿಸಲು ಮಾತ್ರವೇ ಅಲ್ಲ, ಅದು ಸರಕಾರದ ಧೋರಣೆಗಳು ಮತ್ತು ಕೆಲಸ-ಕಾರ್ಯಗಳ ಬಗ್ಗೆ ಅಸಮ್ಮತಿ ಮತ್ತು ವಿರೋಧಕ್ಕೆ ದನಿ ನೀಡುವ ಒಂದು ಉಪಕರಣವೂ ಆಗಿದೆ. ಈ ವಿಷಯದಲ್ಲೇ ಬಿಜೆಪಿ ಮತ್ತು ಅದರ ಎನ್‌ಡಿಎ ಮಿತ್ರ ಪಕ್ಷಗಳು ಪ್ರತಿಪಕ್ಷಗಳ ಆಪಾದನೆಗಳನ್ನು ಎದುರಿಸುವಲ್ಲಿ ಮತ್ತು ಸರಕರದ ದಾಖಲೆಗಳನ್ನು ಸಮರ್ಥಿಸಿಕೊಳ್ಳುವಲ್ಲಿ ವಿಫಲವಾದವು.

ಚರ್ಚೆಗೆ ಉತ್ತರಿಸುತ್ತ ಪ್ರಧಾನ ಮಂತ್ರಿಗಳು ಮಾಡಿದ ಭಾಷಣ ವಿವಿಧ ರಂಗಗಳಲ್ಲಿ ಸರಕಾರದ ಸಾಧನೆಗಳನ್ನು ಕುರಿತ ಈಗಾಗಲೇ ಅವರು ಬಹಳ ಸಲ ಹೇಳಿ ಹಳಸಲಾಗಿರುವ ಅಂಕಿ-ಅಂಶಗಳ ಚರ್ವಿತಚರ್ವಣವಾಗಿತ್ತು. ಅದಲ್ಲದೆ, ನರೇಂದ್ರ ಮೋದಿಯವರು ಕಾಂಗ್ರೆಸ್ ಮತ್ತು ಅದರ ವಂಶಾಡಳಿತದ ತಮ್ಮ ಬತ್ತಳಿಕೆಯ ಎಂದಿನ ವಾಗ್ಬಾಣಗಳ ಪ್ರಯೋಗಕ್ಕೆ ಇಳಿದರು.. ನರೇಂದ್ರ ಮೋದಿಯವರು ಪ್ರತಿಪಕ್ಷಗಳು ಎತ್ತಿದ ಪ್ರಶ್ನೆಗಳು ಮತ್ತು ವಿಷಯಗಳಿಗೆ ತೀಕ್ಷ್ಣ ಉತ್ತರ ಕೊಡುವಲ್ಲಿ ವಿಫಲರಾಗಿದ್ದಾರೆ ಎಂಬುದೇ ಈ ಚರ್ಚೆಯನ್ನು ವೀಕ್ಷಿಸಿದ, ಮತ್ತು ಯಾವ ಪಕ್ಷಕ್ಕೂ ಬದ್ಧರಾಗಿರದ ಬಹಳಷ್ಟು ಜನಗಳಲ್ಲಿ ಉಂಟಾಗಿರುವ ಅಭಿಪ್ರಾಯ.

ಅವಿಶ್ವಾಸ ಠರಾವಿನ ಮೇಲೆ ಮತದಾನ ನಿರೀಕ್ಷಿತ ರೀತಿಯಲ್ಲೇ ಇತ್ತು, ಸರಕಾರ ಸಾಕಷ್ಟು ಬಹುಮತದಿಂದ ಗೆದ್ದಿತು. ಆದರೆ ಒಂದು ಟೆಲಿವಿಶನ್ ಸುದ್ದಿವಾಹಿನಿ ಗಮನಿಸಿದಂತೆ, ಅವಿಶ್ವಾಸ ಠರಾವನ್ನು ತಿರಸ್ಕರಿಸಿದ ಪಕ್ಷಗಳು 2014ರ ಲೋಕಸಭಾ ಚುನಾವಣೆಗಳಲ್ಲಿ 37% ಮತ ಗಳಿಸಿದ್ದರೆ, ಈ ಠರಾವಿನ ಪರವಾಗಿ ಮತನೀಡಿದ ಪಕ್ಷಗಳು ಆ ಚುನಾವಣೆಗಳಲ್ಲಿ 43% ಮತ ಪಡೆದಿದ್ದವು.

ಇದು 2019 ರ ಲೋಕಸಭಾ ಚುನಾವಣೆಗಳ ಸಿದ್ಧತೆಯ ವೇಳೆಯಲ್ಲಿ ಬಿಜೆಪಿ ಮತ್ತು ಮೋದಿ ಸರಕಾರವನ್ನು ಕಾಡಿಸುತ್ತಲೇ ಇರುವ ಒಂದು ಸಂಗತಿ.



ಪ್ರಶ್ನೆಗಳು-ಉತ್ತರಗಳು: ರಫೇಲ್-ಜೈಜವಾನ್; ಉದ್ಯೋಗ-ಗಾಂಧಿ ವಂಶಾಡಳಿತ; ಇಂಧನ-ದೇಶವಿಭಜನೆ; ರೈತರು-ರಾಷ್ಟ್ರೀಯವಾದ; ದ್ವೇಷ-ಪಪ್ಪು; ಫೇಕ್‌ನ್ಯೂಸ್- ಯುಪಿಎ ದೂಷಣೆ ಇತ್ಯಾದಿ...

ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

'ಮೋದೀ ಕಾ ಎಂಎಸ್‌ಪಿ ದೋಖಾ ಹೈ": ಸಂಸತ್ತಿನ ಹೊರಗೆ ರೈತರಿಂದ ಅವಿಶ್ವಾಸ ಸಭೆ

ಜುಲೈ 20ರಂದು ಲೋಕಸಭೆ ಮೋದಿ ಸರಕಾರದ ವಿರುದ್ಧ ಅವಿಶ್ವಾಸ ಠರಾವನ್ನು ಚರ್ಚಿಸುತ್ತಿದ್ದಾಗ ಹೊರಗೆ ಸುರಿವ ಮಳೆಯಲ್ಲಿ ರೈತರ ಪ್ರತಿನಿಧಿಗಳು "ಕಿಸಾನ್ ಅವಿಶ್ವಾಸ ಪ್ರಸ್ತಾವ್ ಸಭಾ' ನಡೆಸಿದರು. ಇತ್ತೀಚೆಗೆ ಪ್ರಕಟಿಸಿರುವ ಎಂಎಸ್‌ಪಿ ಅಂದರೆ ಕನಿಷ್ಟ ಬೆಂಬಲ ಬೆಲೆಗಳು ಒಂದು ಐತಿಹಾಸಿಕ ಕ್ರಮ ಎಂದು ಪ್ರಧಾನಿಗಳು ಒತ್ತೊತ್ತಿ ಹೇಳುತ್ತಿರುವುದರಿಂದ ಇದೊಂದು ಮೋಸ ಮಾತ್ರ ಎಂಬುದನ್ನು ಬಯಲಿಗೆಳೆಯಲು ಈ 'ಮೋದೀ ಕಾ ಎಂಎಸ್‌ಪಿ ದೋಖಾ ಹೈ' ರ‍್ಯಾಲಿ ನಡೆಸಲಾಗುತ್ತಿದೆ ಎಂದು 20 ರಾಜ್ಯಗಳ ಸುಮಾರು 200 ರೈತ ಸಂಘಟನೆಗಳ ವೇದಿಕೆಯಾದ 'ಅಖಿಲ ಭಾರತ ಕಿಸಾನ್ ಸಂಘರ್ಷ ಸಂಯೋಜನಾ ಸಮಿತಿ (ಎಐಕೆಎಸ್‌ಸಿಸಿ) ಮುಖಂಡರು ಹೇಳಿದ್ದಾರೆ. ಈ ಸಭೆಯನ್ನುದ್ದೇಶಿಸಿ ಎಐಕೆಸ್‌ಸಿಸಿ ಮುಖಂಡರಲ್ಲದೆ ಸಿಪಿಐ(ಎಂ) ಸೇರಿದಂತೆ ಎಡಪಕ್ಷಗಳ ಮುಖಂಡರು ಮತ್ತು ಮೇಧಾ ಪಾಟ್ಕರ್ ಮಾತನಾಡಿದರು. ಸಂಸತ್ತಿನಲ್ಲಿ ಪ್ರತಿಪಕ್ಷಗಳಿಗೆ ಸಂಖ್ಯಾಬಲವಿಲ್ಲ. ಆದರೆ ರೈತರ, ಕಾರ್ಮಿಕರ, ದಲಿತರ, ಆದಿವಾಸಿಗಳ ಮತ್ತು ಇತರ ಜನವಿಭಾಗಗಳ ಸಮಸ್ಯೆಗಳನ್ನು ಚರ್ಚೆಯ;ಲ್ಲಿ ಎತ್ತಲಾಗುವುದು. ಸಂಸತ್ತಿನ ಹೊರಗೆ ಜನಗಳನ್ನು ಒಡೆಯುವ ಈ ಸಂಘ ಪರಿವಾರದ ಸರಕಾರದ ವಿರುದ್ಧ ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು ಮತ್ತು ಇತರರನ್ನು ಅಣಿನೆರೆಸಲಾಗುವುದು ಎಂದು ಈ ಪ್ರತಿಭಟನಾ ಸಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದರು.



...........ಸಿಪಿಐ(ಎಂ) ನಿಯೋಗದ ಭೇಟಿ

ಪುಟ 2 ರಿಂದ

ರಾಜಸ್ಥಾನದ ಆಲ್ವಾರ್‌ನಲ್ಲಿ ಒಂದು ಕಾವಲುಕೋರ ಗುಂಪು ಬಡಿದು ಸಾಯಿಸಿರುವ ಈ ಪ್ರಕರಣವನ್ನು ಮತ್ತೊಮ್ಮೆ ಖಂಡಿಸಿರುವ ಸಿಪಿಐ(ಎಂ) ನಿಯೋಗ, ಹರ್‍ಯಾಣ ಸರಕಾರದಿಂದ ಯಾರೊಬ್ಬರೂ ದುಃಖತಪ್ತ ಕುಟುಂಬವನ್ನು ನೋಡಲು ಬರಲಿಲ್ಲ ಎಂಬುದು ನಾಚಿಕೇಗೇಡಿನ ಸಂಗತಿ ಎಂದು ಹೇಳಿದೆ. ಹರ್‍ಯಾಣ ಸರಕಾರವಾಗಲೀ, ಅಕ್ಬರ್ ಖಾನ್‌ನ ಪ್ರಾಣಹರಣವಾದ ರಾಜಸ್ಥಾನದ ಸರಕಾರವಾಗಲೀ ಇದುವರೆಗೆ ಆತನ ದಟ್ಟ ದರಿದ್ರ ಕುಟುಂಬಕ್ಕೆ ಯಾವುದೇ ಪರಿಹಾರವನ್ನು ಪ್ರಕಟಿಸಿಲ್ಲ ಎಂಬ ಬಗ್ಗೆಯೂ ನಿಯೋಗ ಖೇದ ವ್ಯಕ್ತಪಡಿಸಿದೆ.

ಕೋಲ್‌ಗಾಂವ್ ರಾಜಸ್ಥಾನ-ಹರ್‍ಯಾಣ ಗಡಿಪ್ರದೇಶದಲ್ಲಿರುವ ಮೇವಾತ್ ಪ್ರದೇಶದ ಒಂದು ಊರು. ಬೇಸಾಯಕ್ಕೆ ಮಳೆನೀರನ್ನು ಅವಲಂಬಿಸಿರುವ ಈ ಇಡೀ ಪ್ರದೇಶ ಬಹಳ ಹಿಂದುಳಿದಿದೆ. ಪಶುಸಾಕಣೆ ಇಲ್ಲಿಯ ಬಹುಪಾಲು ಮಿಯೊ ಮುಸ್ಲಿಂ ರೈತರ ಮುಖ್ಯ ಕಸಬು. ಇದಕ್ಕಾಗಿ ಈ ರೈತರು ಆಗಾಗ ಸಮೀಪವೇ ಇರುವ ರಾಜಸ್ಥಾನದ ಆಲ್ವಾರ್‌ಗೆ ಹೋಗಿ ಬರುತ್ತಿರುತ್ತಾರೆ. ಅಲ್ಲಿ ಈ ರೀತಿ ಮಿಯೊ ರೈತರನ್ನು ಬಡಿದು ಸಾಯಿಸಿರುವುದು ಮೊದಲ ಬಾರಿಯೇನಲ್ಲ. ತಮಗೆ ಇಲ್ಲಿ ಹಸು ಸಾಕುವ ಹಕ್ಕಿಲ್ಲವೇ, ಹೀಗೆ ಒಬ್ಬೊಬ್ಬರಾಗಿ ಹೊಡೆತಗಳನ್ನು ತಿಂದು ಸಾಯಬೇಕೇ ಎಂದು ಈ ರೈತರು ಆತಂಕದಿಂದ ಕೇಳಿದರು. ಈ ಘಟನೆ ನಡುರಾತ್ರಿ 1.20 ರ ಸುಮಾರಿಗೆ ನಡೆಯಿತು. ತೀವ್ರವಾಗಿ ಗಾಯಗೊಂಡಿದ್ದ ಅಕ್ಬರ್‌ಖಾನ್‌ನನ್ನು ಆಸ್ಪತ್ರೆಗೆ ಸೇರಿಸಲು ಪೋಲೀಸ್ 3 ಗಂಟೆ ತಗೊಂಡರು ಎಂಬ ಬಗ್ಗೆ ಆಕ್ರೋಶವೂ ವ್ಯಕ್ತಗೊಂಡಿತು.



ಅಕ್ಬರ್ ಖಾನ್‌ನ ದುಃಖತಪ್ತ ಕುಟುಂಬ

ಆದರೂ, ಇದರ ನಡುವೆಯೂ ಈ ಪ್ರದೇಶದ ವಿವಿಧ ಸಮುದಾಯಗಳ ನಡುವಿನ ಪಾರಂಪರಿಕ ಸೌಹಾರ್ದ ಗಟ್ಟಿಯಾಗಿ ಉಳಿದಿರುವಂತೆ ಕಾಣುತ್ತಿರುವುದು ಸಮಾಧಾನದ ಸಂಗತಿ ಎಂದು ನಿಯೋಗ ಹೇಳಿದೆ.

ಹೊಡೆದು ಸಾಯಿಸಿರುವವರನ್ನು ಗುರುತಿಸಲಾಗಿದ್ದು, ಅವರೆಲ್ಲರನ್ನೂ ಬಂಧಿಸಿ ಶಿಕ್ಷಿಸಬೇಕು, ಈ ಇಡೀ ಘಟನೆಯಲ್ಲಿ ರಾಜಸ್ಥಾನ ಪೋಲೀಸಿನ ವರ್ತನೆಯ ಬಗ್ಗೆ ತನಿಖೆ ಆಗಬೇಕು, ತಪ್ಪಿತಸ್ಥ ಪೋಲೀಸ್ ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳಬೇಕು, ಅಕ್ಬರ್‌ನ ಕುಟುಂಬಕ್ಕೆ ಅಗತ್ಯ ಪರಿಹಾರವನ್ನು ಕೊಡಬೇಕು ಮತ್ತು ಅಕ್ಬರ್ ಮತ್ತು ಅಸ್ಲಾಂ ಖರೀದಿಸಿದ್ದ ಹಸು-ಕರುಗಳನ್ನು ಅವರ ಕುಟುಂಬಗಳಿಗೆ ಹಿಂದಿರುಗಿಸಬೇಕು ಎಂದು ಸಿಪಿಐ(ಎಂ) ನಿಯೋಗ ಆಗ್ರಹಿಸಿದೆ.

ಈ ಎರಡು ರಾಜ್ಯಗಳ ಮತ್ತು ಈ ಪ್ರದೇಶದ ಪ್ರಮುಖ ಸಾಮಾಜಿಕ ಕಾರ್ಯಕರ್ತರೂ ಸಿಪಿಐ(ಎಂ) ನಿಯೋಗದ ಜೊತೆಗೆ ಬಂದಿದ್ದರು.



ಈ ಮಧ್ಯಯುಗದ ಬರ್ಬರತೆಯನ್ನು ಸೋಲಿಸಿ

ಹಿಂಸಾಚಾರದ ಪಂಥವನ್ನು ಐಕ್ಯತೆಯಿಂದ ತಡೆದು ನಿಲ್ಲಿಸಿ

ತಮ್ಮ ಎಂದಿನ ಇಬ್ಬಂದಿತನದಲ್ಲಿ ತೊಡಗಿರುವ ಹಿಂದುತ್ವ ಪಡೆಗಳಲ್ಲಿ ಒಂದು ವಿಭಾಗ ಈ ಖಾಸಗಿ ಸೇನೆಗಳಿಗೆ ಪೋಷಣೆ ಒದಗಿಸುತ್ತಿದ್ದರೆ, ಕ್ರಿಮಿನಲ್‌ಗಳ ಆರಾದನೆ ನಡೆಸುತ್ತಿದ್ದರೆ, ಈ ಮಂದಿ ಸಿಕ್ಕಿ ಬಿದ್ದು ಅವರ ಭತೋತ್ಪಾದಕ ಕೃತ್ಯಗಳು ಬಯಲಾದಾಗ ಇನ್ನೊಂದು ವಿಭಾಗ ಇಂತಹ ಜನಗಳಿಗೂ ತಮಗೂ ಸಂಬಂಧವಿಲ್ಲ ಎನ್ನುತ್ತಲೇ ಇದೆ. ಈ ಬಗ್ಗೆ ಪ್ರಧಾನ ಮಂತ್ರಿಗಳ ಮೌನವೇ ಅವರ ಮಾತುಗಳಗಿಂತ ಹೆಚ್ಚು ಸ್ಫುಟವಾಗಿ ಎಲ್ಲವನ್ನೂ ಹೇಳುತ್ತದೆ. ಗಾಂಧೀಜಿ ಹತ್ಯೆಯ ವೇಳೆಯಲ್ಲಿ ಸರ್ದಾರ್ ಪಟೇಲ್ ಹೇಳಿದ "ಹಿಂಸಾಚಾರದ ಪಂಥ"ದ ವಾತಾವರಣ ಮತ್ತೆ ಸೃಷ್ಟಿಯಾಗುತ್ತಿದೆ. ಈ ಅಪಾಯವನ್ನು ಐಕ್ಯತೆಯಿಂದ ಎದುರಿಸಿ ಸೋಲಿಸಬೇಕು.

ಸೀತಾರಾಮ್ ಯೆಚುರಿ

ಪ್ರಧಾನ ಮಂತ್ರಿಗಳು ಶುಕ್ರವಾರ ಜೂನ್ 20ರಂದು ಅವಿಶ್ವಾಸ ಠರಾವಿನ ಮೇಲಿನ ಚರ್ಚೆಯ ಕೊನೆಯಲ್ಲಿ ತಮ್ಮ ಒಂದೂವರೆ ಗಂಟೆಗಳ ಭಾಷಣ ನೀಡಲು ಪ್ರಯಾಸ ಪಡುತ್ತಿದ್ದಾಗ, ರಾಜಸ್ಥಾನದ ಅಲ್ವಾರ್ ಜಿಲ್ಲೆಯಲ್ಲಿ ರಕ್ಬರ್‌ಖಾನ್ ಅಲಿಯಾಸ್ ಅಕ್ಬರ್‌ಖಾನ್‌ರವರನ್ನು,' ದನಗಳ ಕಳ್ಳ ಸಾಗಾಣಿಕೆಯ ಆಪಾದನೆಯ ಮೇಲೆ ಬಡಿದು ಸಾಯಿಸಲಾಗುತ್ತಿತ್ತು.

ಇದುವರೆಗೂ, ಪ್ರಧಾನ ಮಂತ್ರಿಗಳು ಒಂದು ಬಾರಿ ಕೂಡ ಈ ಬಗ್ಗೆ ಔಪಚಾರಿಕವಾಗಿಯಾದರೂ ತುಟಿ ಪಿಟಕ್ಕೆಂದಿಲ್ಲ, ಬಿಜೆಪಿ ಸರಕಾರಗಳ ಆಳ್ವಿಕೆಯಲ್ಲಿ ನಾಯಿಕೊಡೆಗಳಂತೆ ಹಬ್ಬಿರುವ ಖಾಸಗಿ ಪಡೆಗಳು ಹೊಡೆದು–ಬಡಿದು ಸಾಯಿಸಿರುವ ಹಲವಾರು ಜೀವಗಳ ಬಗ್ಗೆ ಆತಂಕವನ್ನು ಕೂಡ ವ್ಯಕ್ತಪಡಿಸಿಲ್ಲ. ಈ ಸರಕಾರಗಳು 'ಗೋರಕ್ಷಣೆ'. ' ನೈತಿಕ ಪೋಲೀಸ್', 'ಲವ್‌ಜಿಹಾದ್', 'ಮಕ್ಕಳ ಕಳ್ಳರು' ಇತ್ಯಾದಿ ಹೆಸರುಗಳಲ್ಲಿ ಹಲ್ಲೆ ನಡೆಸುತ್ತಿರುವ ಕಾವಲುಕೋರ ಪಡೆಗಳಿಗೆ ಕೃಪಾಪೋಷಣೆಯನ್ನು ನೀಡುತ್ತಲೇ ಇವೆ. ಇದು ಆಲ್ವಾರ್ ಜಿಲ್ಲೆಯಲ್ಲೇ ಎಪ್ರಿಲ್ 2017ರಿಂದ ನಡೆದಿರುವ ಮೂರನೇ ಸಾಯಬಡಿದ ಘಟನೆ. ಮೊದಲು ಪೆಹ್ಲೂ ಖಾನ್, ನಂತರ ಉಮೆರ್ ಖಾನ್, ಮತ್ತು ಈಗ ಅಕ್ಬರ್ ಖಾನ್. ಪೆಹ್ಲೂ ಖಾನ್ ಮತ್ತು ಅಕ್ಬರ್‌ಖಾನ್ ನಡುವೆ ಭಾರತ ಕನಿಷ್ಟ 46 ಬಡಿದು ಸಾಯಿಸಿದ ಘಟನೆಗಳನ್ನು ಕನಿಷ್ಟ ಒಂದು ಡಝನ್ ರಾಜ್ಯಗಳಲ್ಲಿ ಕಂಡಿದೆ. ಇದರಲ್ಲಿ ಸತ್ತವರು ಮುಖ್ಯವಾಗಿ ಮುಸ್ಲಿಮರು ಮತ್ತು ದಲಿತರು.

ಪ್ರಧಾನ ಮಂತ್ರಿಗಳು ಅವಿಶ್ವಾಸ ಠರಾವಿನ ಮೇಲಿನ ಚರ್ಚೆಗೆ ಉತ್ತರಿಸುವಾಗ, "ಗುಂಪುಕಟ್ಟಿ ಸಾಯಬಡಿಯುವ" ವಿರುದ್ಧ ಹೊಸದೊಂದು ಸಮಗ್ರ ಶಾಸನವನ್ನು, ಸುಪ್ರಿಂ ಕೋರ್ಟಿನ ಟಿಪ್ಪಣಿಗಳಿಗೆ ಅನುಗುಣವಾಗಿ ಈ ಅಧಿವೇಶನದಲ್ಲೇ ತರುವುದಾಗಿ ಪ್ರಕಟಿಸುತ್ತಾರೆ ಎಂದು ಹಲವರು ನಿರೀಕ್ಷಿಸಿದ್ದರು. "ಜಾತ್ಯತೀತ ಹಂದರವನ್ನು ಕಾಪಾಡಿಕೊಳ್ಳಲು ಮತ್ತು ಜನಜಂಗುಳಿಯ ದರ್ಬಾರನ್ನು ತಡೆಯಲು ಕಾನೂನು ಮತ್ತು ಸುವ್ಯವಸ್ಥೆ ಇರುವಂತೆ ಮಾಡುವುದು ಪ್ರಭುತ್ವದ ಕರ್ತವ್ಯ" ಎಂದು ಸರ್ವೋಚ್ಚ ನ್ಯಾಯಾಲಯ ಟಿಪ್ಪಣಿ ಮಾಡಿತ್ತು. ಆದರೆ ಇಂತಹ ಪ್ರಕಟಣೆಯೇನೂ ಬರಲಿಲ್ಲ. ಅದೇ ರೀತಿ, ಝಾರ್ಖಂಡ್‌ನಲ್ಲಿ ಸ್ವಾಮಿ ಅಗ್ನಿವೇಶ್ ಮೇಲೆ ಕ್ರೂರ ಹಲ್ಲೆಯ ಪ್ರಸ್ತಾಪವೂ ಇಲ್ಲ.

ಜುಲೈ 23ರಂದು ಮೋದಿ ಸರಕಾರ, ತನ್ನ ಜಾಯಮಾನದಂತೆ ಒಂದು ಹೊಸ ಕಾನೂನನ್ನು ರೂಪಿಸುವುದನ್ನು ಪರಿಶೀಲಿಸಲು ಒಂದು ಮಂತ್ರಿಗಳ ಗುಂಪನ್ನು(ಜಿಒಎಂ) ರಚಿಸಿದೆ. ಇಂತಹ ಕ್ರಮಗಳು ಸುಪ್ರಿಂ ಕೋರ್ಟಿನ ನಿರ್ದೇಶನವನ್ನು ವಿಳಂಬಗೊಳಿಸಲು ಮತ್ತು ಬುಡಮೇಲು ಮಾಡಲು ಮಾತ್ರ ಎಂಬುದು ಈಗ ಸಾಬೀತಾಗಿರುವ ಸಂಗತಿ.

ಅಸಹ್ಯಕರ ಸಮರ್ಥನೆಗಳು

ರಾಜಸ್ಥಾನದ ಒಬ್ಬ ಕೇಂದ್ರ ಮಂತ್ರಿಗಳು ಇಂತಹ ಸಾಯಬಡಿಯುವ ಕೃತ್ಯಗಳು "ಪ್ರಧಾನ ಮಂತ್ರಿಗಳ ಹೆಚ್ಚುತ್ತಿರುವ ಜನಪ್ರಿಯತೆ"ಯಿಂದಾಗಿ ಹುಟ್ಟಿಕೊಂಡಿರುವ 'ಪಿತೂರಿ' ಎಂದು ಸಿನಿಕತನದಿಂದ ಪ್ರತಿಕ್ರಿಯಿಸಿದ್ದಾರೆ. ಸ್ಥಳೀಯ ಬಿಜೆಪಿ ಶಾಸಕ ಕಳೆದ ಡಿಸೆಂಬರಿನಲ್ಲಿ ಇನ್ನೂ ಮುಂದೆ ಹೋಗಿ, ಯಾರಾದರೂ ಗೋಹತ್ಯೆ ಅಥವ ಹಸುಗಳ ಕಳ್ಳಸಾಗಾಣಿಕೆಯಲ್ಲಿ ತೊಡಗಿದ್ದರೆ ಅವರನ್ನು ಕೊಂದು ಹಾಕಲಾಗುವುದು ಎಂದು 'ಎಚ್ಚರಿಕೆ' ನೀಡಿದ್ದರು. ಇದರ ನಿಜವಾದ ಅರ್ಥ ಆರೆಸ್ಸೆಸ್/ಬಿಜೆಪಿ ಯಾರ ಮೇಲಾದರೂ ಇಂತಹ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಸುಳ್ಳು ಆಪಾದನೆ ಹೊರಿಸಿ ಅವರನ್ನು ಕೊಲ್ಲಲಾಗುವುದು ಎಂದು.

ಈಗ ಅತ್ಯಂತ ಆಕ್ಷೇಪಕಾರಿ ಸಮರ್ಥನೆ ಆರೆಸ್ಸೆಸ್‌ನಿಂದ ಬಂದಿದೆ. ಅದರ ಪ್ರಮುಖ ವಕ್ತಾರ ಇಂದ್ರೇಶ್ ಕುಮಾರ್ ಹೇಳುತ್ತಾರೆ: "ಜನಗಳು ಗೋಮಾಂಸ ತಿನ್ನುವುದನ್ನು ನಿಲ್ಲಿಸಿದರೆ ಸಾಯಬಡಿಯುವುದು ನಿಲ್ಲುತ್ತದೆ"! ಇದು ಜನಗಳ ಸಂವಿಧಾನಿಕ ಹಕ್ಕುಗಳ ಸಂಪೂರ್ಣ ಉಲ್ಲಂಘನೆ ಮಾತ್ರವೇ ಅಲ್ಲ, "ಮಕ್ಕಳ ಕಳ್ಳರು", "ಲವ್‌ಜಿಹಾದ್" ಇತ್ಯಾದಿ ಹೆಸರಲ್ಲಿ ಸಾಯಬಡಿಯುತ್ತಿರುವುದರ ಬಗ್ಗೆ ಏನೆನ್ನುತ್ತಾರೆ?

ಪ್ರಧಾನ ಮಂತ್ರಿಗಳ ಮೌನವೇ ಅವರ ಮಾತುಗಳಿಗಿಂತ ಹೆಚ್ಚು ಸುಟವಾಗಿ ಎಲ್ಲವನ್ನೂ ಹೇಳುತ್ತದೆ. ಪ್ರಧಾನಿಗಳ ಮೌನವು ಅಲ್ಪಸಂಖ್ಯಾತರು ಮತ್ತು ದಲಿತರ ವಿರುದ್ಧ ಇಂತಹ ಹಿಂಸಾಚಾರಕ್ಕೆ ಸರಕಾರದ ಪ್ರತ್ಯಕ್ಷ ಪ್ರೋತ್ಸಾಹ ಎಂದು ಸಹಜವಾಗಿಯೇ ವ್ಯಾಖ್ಯಿಸಲಾಗುತ್ತಿದೆ.

ಎಂದಿನ ಇಬ್ಬಂದಿತನ

ತಮ್ಮ ಎಂದಿನ ಇಬ್ಬಂದಿತನದಲ್ಲಿ ತೊಡಗಿರುವ ಹಿಂದುತ್ವ ಪಡೆಗಳಲ್ಲಿ ಒಂದು ವಿಭಾಗ ಈ ಖಾಸಗಿ ಸೇನೆಗಳಿಗೆ ಪೋಷಣೆ ಒದಗಿಸುತ್ತಿದ್ದರೆ, ಕ್ರಿಮಿನಲ್‌ಗಳ ಆರಾದನೆ ನಡೆಸುತ್ತಿದ್ದರೆ, ಈ ಮಂದಿ ಸಿಕ್ಕಿ ಬಿದ್ದು ಅವರ ಭತೋತ್ಪಾದಕ ಕೃತ್ಯಗಳು ಬಯಲಾದಾಗ ಇನ್ನೊಂದು ವಿಭಾಗ ಇಂತಹ ಜನಗಳಿಗೂ ತಮಗೂ ಸಂಬಂಧವಿಲ್ಲ ಎನ್ನುತ್ತಲೇ ಇದೆ. ಇಂತಹ ನಿರಾಕರಣೆಗಳು ಝಾರ್ಖಂಡ್‌ನಲ್ಲಿ ಒಬ್ಬ ಕೇಂದ್ರ ಮಂತ್ರಿ ಬಹಿರಂಗವಾಗೇ ಇಂತಹ ಕ್ರಿಮಿನಲ್‌ಗಳಿಗೆ ಹೂಹಾರ ಹಾಕಿ ಸನ್ಮಾನಿಸಿದಾಗಲೂ ಬಂದವು. ಆರೆಸ್ಸೆಸ್ ಗೆ ಸಂಯೋಜಿತವಾದ ಸಂಘಟನೆಗಳು ಮತ್ತು ಸಂಘ–ಸಂಸ್ಥೆಗಳು ಇಂತಹ ಕ್ರಿಮಿನಲ್‌ಗಳನ್ನು ರಕ್ಷಿಸುತ್ತವೆ, ಮತ್ತು ಕೆಲವೊಮ್ಮೆ ಕಾನೂನುಪಾಲನೆಯ ಸಿಬ್ಬಂದಿ ಅವರ ವಿರುದ್ಧ ಕ್ರಮಗಳನ್ನು ಕೈಗೊಳ್ಳದಂತೆ ತಡೆಯುತ್ತವೆ. ಜಮ್ಮು ಮತ್ತು ಕಾಶ್ಮೀರದ ಕಥುವಾದಲ್ಲಿ ಭಯಾನಕ, ಅಮಾನವೀಯಗೊಳಿಸುವ ಸಾಮೂಹಿಕ ಅತ್ಯಾಚಾರ ಎಸಗಿದವರನ್ನು ಸ್ಥಳೀಯ ಬಿಜೆಪಿ ಮುಖಂಡರು ರಕ್ಷಿಸಿದ್ದಾರೆ, ವಕೀಲರು ಕ್ರಿಮಿನಲ್‌ಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳದಂತೆ ತಡೆದಿದ್ದಾರೆ. ಪೆಹ್ಲೂ ಖಾನ್ ಕೊಲೆ ಮಾಡಿದವರ ಹೆಸರುಗಳು ಸಾಯುವಾಗಿನ ಹೇಳಿಕೆಯಲ್ಲಿದ್ದರೂ ಅವರನ್ನು ಖುಲಾಸೆ ಮಾಡಲಾಗಿದೆ.

ಈ ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರಕಾರದಡಿಯಲ್ಲಿ ಮಹಾತ್ಮ ಗಾಂಧಿಯವರ ಹಂತಕ 'ನಾಥುರಾಂ ಗೋಡ್ಸೆ'ಯನ್ನು ಪೂಜಿಸಲಾಗುತ್ತಿದೆ, ಕೆಲವೆಡೆಗಳಲ್ಲಿ ವೀರನ ಪಟ್ಟದಲ್ಲಿ ಕೂರಿಸಿ ಆರಾಧಿಸಲಾಗುತ್ತಿದೆ. ಆದರೂ ಆತ ಮಹಾತ್ಮ ಗಾಂಧಿಯವರನ್ನು ಕೊಂದಾಗ ಆರೆಸ್ಸೆಸ್ ಸದಸ್ಯನಾಗಿರಲಿಲ್ಲ ಎಂದು ಸ್ವತಃ ಆರೆಸ್ಸೆಸ್ ಹೇಳಿಕೊಳ್ಳುತ್ತಿದೆ. ಇದನ್ನು ಆತನ ಸೋದರನೇ ಬಲವಾಗಿ ಪ್ರಶ್ನಿಸಿದ್ದಾರೆ. ನಾಥುರಾಮ್ ಸೋದರ ಗೋಪಾಲ ಗೋಡ್ಸೆ ಒಂದು ಮಾಧ್ಯಮ ಸಂದರ್ಶನದಲ್ಲಿ ಹೇಳಿರುವ ಈ ಮಾತುಗಳನ್ನು ನೋಡಿ: "ನಾವೆಲ್ಲ ಸೋದರರು ಆರೆಸ್ಸೆಸ್‌ನಲ್ಲಿದ್ದೆವು. ನಾಥುರಾಮ್, ದತ್ತಾತ್ರೇಯ, ನಾನು ಮತ್ತು ಗೋವಿಂದ. ನಾವು ನಮ್ಮ ಮನೆಯ ಬದಲು ಆರೆಸ್ಸೆಸ್‌ನಲ್ಲೇ ಬೆಳೆದು ದೊಡ್ಡವರಾದೆವು ಎಂದೇ ನೀವು ಹೇಳಬಹುದು. ಅದು ನಮಗೆ ನಮ್ಮ ಕುಟುಂಬವಿದ್ದಂತೆ. ನಾಥುರಾಮ್ ಆರೆಸ್ಸೆಸ್‌ನಲ್ಲಿ ಬೌದ್ಧಿಕ ಕಾರ್ಯವಾಹ ಆದ. ತಾನು ಆರೆಸ್ಸೆಸ್ ಬಿಟ್ಟಿರುವುದಾಗಿ ಆತ ತನ್ನ ಹೇಳಿಕೆಯಲ್ಲಿ ಹೇಳಿದ್ದ. ಏಕೆಂದರೆ ಗಾಂಧಿ ಹತ್ಯೆಯ ನಂತರ ಗೋಲ್ವಾಲ್ಕರ್ ಮತ್ತು ಅರೆಸ್ಸೆಸ್ ಬಹಳಷ್ಟು ತೊಂದರೆಯಲ್ಲಿದ್ದರು. ಆದರೆ ಅವನೇನೂ ಆರೆಸ್ಸೆಸ್ ಬಿಟ್ಟಿರಲಿಲ್ಲ."(ಫ್ರಂಟ್‌ಲೈನ್, ಜನವರಿ 28, 1994).

ಇಲ್ಲಿರುವ ಸಂಗತಿಯೆಂದರೆ, ಒಬ್ಬ ವ್ಯಕ್ತಿ ಸದ್ಯ ಸದಸ್ಯನೇ ಅಲ್ಲವೇ ಎಂಬ ತಾಂತ್ರಿಕ ಅಂಶವಲ್ಲ. ಆರೆಸ್ಸೆಸ್ ಮತ್ತು ಅದರ ಸಹಯೋಗಿ ಸಂಘಟನೆಗಳು ನಡೆಸಿರುವ ವಿಷಪೂರಿತ ಸೈದ್ಧಾಂತಿಕ ಬೋಧನೆ ಇಂತಹ ಹಿಂಸಾತ್ಮಕ ಉಗ್ರತನವನ್ನು ಪೋಷಿಸುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ ಎಂಬುದೇ ಇಲ್ಲಿ ಗಮನಿಸಬೇಕಾದ ಸಂಗತಿ.

ಉಗ್ರತ್ವದ ತರಬೇತಿಯ ಪರಂಪರೆ

ಹಿಂದುಗಳಿಗೆ ಉಗ್ರತ್ವದ ತರಬೇತಿ ನೀಡುವ ವಿಷಯದಲ್ಲಿ ಆರೆಸ್ಸೆಸ್‌ನ ದೀರ್ಘ ಇತಿಹಾಸವೇ ಇದೆ. "ಹಿಂದುತ್ವ" ಎಂಬ ಪದವನ್ನು ಸೃಷ್ಟಿಸಿದವರು ವಿ.ಡಿ.ಸಾವರ್ಕರ್. ಇದರಲ್ಲಿ ಧಾರ್ಮಿಕತೆ ಎಂಬುದೇನೂ ಇಲ್ಲ, ಹಿಂದುಗಳ ಆಳ್ವಿಕೆಯನ್ನು ಸ್ಥಾಪಿಸುವ ಒಂದು ರಾಜಕೀಯ ಯೋಜನೆಯಷ್ಟೇ ಎಂಬುದನ್ನು ಇದು

ಪುಟ 12 ನೋಡಿ

> ಮಕ್ಕಳ ಕಳ್ಳರು, ಲವ್‌ಜಿಹಾದ್ ಇತ್ಯಾದಿ ಹೆಸರಲ್ಲಿ ಸಾಯಬಡಿಯುತ್ತಿರುವುದರ ಬಗ್ಗೆ ಏನೆನ್ನುತ್ತಾರೆ ಇಂದ್ರೇಶ್ ಕುಮಾರ್?



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ



ವ್ಯಂಗ್ಯಚಿತ್ರ:ಪ್ರಕಾಶ್ ಶೆಟ್ಟಿ, ಪ್ರಜಾವಾಣಿ

ಆರೋಗ್ಯ ವಿಮೆ ಬೇಕಾ, ಆರೋಗ್ಯ ರಕ್ಷಣೆ ಬೇಕಾ?

ಈ ವರ್ಷದ ಬಜೆಟಿನಲ್ಲಿ ಭಾರೀ ಸಡಗರದಿಂದ ಘೋಷಿಸಲಾದ 'ಆಯುಷ್ಮನ್ ಭವ ಆರೋಗ್ಯ ರಕ್ಷಣೆ' ಅಥವಾ ಮಾಧ್ಯಮ ಭಟ್ಟಂಗಿಗಳು ಹೆಸರಿಸಿದ 'ಮೋದಿಕೇರ್' ಈ ಅಗಸ್ಟ್ ನಲ್ಲಿ ಆರಂಭವಾಗಲಿದೆ ಎಂದು ಹೇಳಲಾಗಿತ್ತು. ಪ್ರತಿಯೊಂದನ್ನೂ ಚುನಾವಣಾ ಪ್ರಚಾರದ ದೃಷ್ಟಿಯಿಂದ ನೋಡುವ ಮೋದಿ ಸರ್ಕಾರ ಈ ಬಗ್ಗೆ ಇನ್ನೊಂದು ಸುತ್ತಿನ ಅಬ್ಬರದ ಪ್ರಚಾರ ನಡೆಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಆ ಯೋಜನೆಯ ಕಾರ್ಯಸಾಧ್ಯತೆ ಮತ್ತು ಅಪ್ರಯೋಜಕತೆಯ ಬಗ್ಗೆ ಒಂದು ಲೇಖನ.

ಡಾ. ಪ್ರಕಾಶ್ ಸಿ. ರಾವ್

ಈಗಿನ ದಿನಗಳಲ್ಲಿ ಆಸ್ಪತ್ರೆಗೆ ಆಪರೇಶನ್ ಮಾಡಿಸಿಕೊಳ್ಳಲು ಹೋದರೆ, ನಿಮ್ಮ ಸಮಸ್ಯೆ, ನಿಮ್ಮ ಹೆಸರು, ವಿಳಾಸ ಮುಂತಾದವುಗಳನ್ನು ಕೇಳುವುದಕ್ಕಿಂತ ಮೊದಲು "ನೀವು ವಿಮಾ (ಇನ್ಶುರೆನ್ಸ್) ಹೊಂದಿದ್ದೀರೆ? ನಿಮ್ಮ ಹತ್ತಿರ ಆರೋಗ್ಯದ ಇನ್ಶುರೆನ್ಸ್ ಪಾಲಿಸಿ ಇದೆಯೇ?" ಎಂದು ಕೇಳುತ್ತಾರೆ. ಇದು ಖಾಸಗಿ ಆಸ್ಪತ್ರೆಗಳಲ್ಲಿ ಸಾಮಾನ್ಯ. ಸರ್ಕಾರೀ ಆಸ್ಪತ್ರೆಗಳಲ್ಲಿ ಈ ರೀತಿ ಕೇಳುವುದಿಲ್ಲ. ಈಗಿನ ದಿನಗಳಲ್ಲಿ ಖಾಸಗಿ ಆಸ್ಪತ್ರೆ ಚಿಕಿತ್ಸೆಗಳು ವಿಪರೀತ ದುಬಾರಿಯಾಗಿವೆ. ಜನಸಾಮಾನ್ಯರಿಗೆ ಈ ಚಿಕಿತ್ಸಾ ವೆಚ್ಚವನ್ನು ಭರಿಸಲು ಕಷ್ಟವಾಗುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ವೆಚ್ಚವೇ ಇರುವುದಿಲ್ಲವಾದರೂ ಅಲ್ಲಿ ಜನಜಂಗುಳ ಇರುವುದರಿಂದ, ಮಧ್ಯಮ ವರ್ಗದವರು ಖಾಸಗಿ ಆಸ್ಪತ್ರೆಗಳಿಗೆ ಹೋಗುವುದು ಸಾಮಾನ್ಯವಾಗಿದೆ. ಈ ಖಾಸಗಿ ಆಸ್ಪತ್ರೆಗಳ ಚಿಕಿತ್ಸಾ ವೆಚ್ಚವನ್ನು ಒಂದೇ ಸರಿ ಭರಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಬಹಳ ಜನ ಈ ಆರೋಗ್ಯ ವಿಮೆ ತೆಗೆದುಕೊಳ್ಳಲು ಮುಂದಾಗುತ್ತಾರೆ.

ಖಾಸಗಿ ವಿಮಾ ಕಂಪನಿಗಳು ಆರೋಗ್ಯ ವಿಮೆಯನ್ನು ನೀಡುತ್ತ ಬಂದಿವೆ. ಈ ವಿಮೆ ತೆಗೆದು ಕೊಂಡಾಗ ಕಟ್ಟಬೇಕಾದ ಕಂತು ಸಾಮಾನ್ಯವಾಗಿ ಎಲ್ಲರಿಗೂ ಎಟುಕುವಂತಿರುತ್ತದೆ. ಆದ್ದರಿಂದ ವಿಮಾ ವಿಧಾನವನ್ನು ಹೆಚ್ಚು ಜನರು ಬಳಸುತ್ತಿದ್ದಾರೆ. ಈ ಖಾಸಗಿ ವಿಮೆಯಲ್ಲಿ ಕಂತನ್ನು ಕಟ್ಟಬೇಕು ಹಾಗೂ ಅದರಲ್ಲಿ ಇನ್ನೂ ಅನೇಕ ತೊಂದರೆಗಳಿವೆ. ಹಾಗೂ ಈ ಖಾಸಗಿ ವಿಮಾ ಪಾಲಿಸಿಯನ್ನು ನಿಗದಿತ ಆದಾಯ ಇಲ್ಲದವರಿಗೆ, ಬಡಜನರಿಗೆ ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ.

ಬಡಜನರಿಗೆ ಸರ್ಕಾರಿ ಆಸ್ಪತ್ರೆ ಉಚಿತ ಚಿಕಿತ್ಸೆ ನೀಡುತ್ತೆ. ಆದರೂ ಅನೇಕ ಬಾರಿ ಅವರಿಗೆ ಅಲ್ಲಿ ಚಿಕಿತ್ಸೆ ಪಡೆಯಲು ಸಾಧ್ಯವಾಗುವುದಿಲ್ಲ. ಅನೇಕ ಜನರು ಖಾಸಗಿ ಆಸ್ಪತ್ರೆಗಳಿಗೆ ಹೋಗಲು ಸಾಧ್ಯವಾಗದಿರುವುದರಿಂದ, ಕಾಯಿಲೆಯಿಂದ ಬಳಲುತ್ತಾರೆ, ಹಾಗೂ ಅನೇಕ ಬಾರಿ ಸಾವನ್ನಪ್ಪುತ್ತಾರೆ. ಕೆಲವೇ ಕೆಲವರು ಖಾಸಗಿ ಆಸ್ಪತ್ರೆಗೆ ಹೋಗಲು ತಮ್ಮ ಆಸ್ತಿ ಮಾರಿ, ಚಿಕಿತ್ಸೆ ವೆಚ್ಚ ಭರಿಸಲು ಮುಂದಾಗುತ್ತಾರೆ. ಆಸ್ಪತ್ರೆ ವೆಚ್ಚ ಹೆಚ್ಚಾಗಲು ಕಾರಣ, ಸರ್ಕಾರದ ನವ–ಉದಾರವಾದಿ ಆರ್ಥಿಕ ನೀತಿ. ಅದನ್ನು ಮುಂದೆ ವಿವರಿಸಿದೆ.

2007 ರಲ್ಲಿ ಆಂಧ್ರಪ್ರದೇಶದಲ್ಲಿ ಬಡಜನರಿಗೆ ಉಪಯೋಗವಾಗುವ ಜೀವ್ ಆರೋಗ್ಯ ಶ್ರೀ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಯೋಜನೆಯಲ್ಲಿ ಸರ್ಕಾರವೇ ವಿಮಾ ಕಂತುಗಳನ್ನು ಕಟ್ಟುವ ವ್ಯವಸ್ಥೆ ಬಂದಿತು. ನಂತರದ ವರ್ಷಗಳಲ್ಲಿ ಈ ಆರೋಗ್ಯ ವಿಮೆ ಬಹಳ ಜನಪ್ರಿಯವಾಯಿತು.

2009 ರಲ್ಲಿ ಬಾರತ ಸರ್ಕಾರ, ಆಂಧ್ರದ ವಿಮಾ ಯೋಜನೆಯ ಯಶಸ್ಸಿನ ಆಧಾರದ ಮೇಲೆ ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆ (Rashtriya Swastha Bima Yojana- RSBY) ಯನ್ನು ಜಾರಿ ಗೊಳಿಸಿತು. ಇದರಲ್ಲಿಯೂ ಸರ್ಕಾರವೇ ವಿಮಾ ಕಂತುಗಳನ್ನು ಕಟ್ಟುವ ಯೋಜನೆ ಇತ್ತು. RSBY ಕೂಡ ಯಶಸ್ವಿ ಕಾರ್ಯಕ್ರಮವಾಯಿತು.

ಈಗ ಮೋದಿ ಸರ್ಕಾರ, ವಿಮಾ ಯೋಜನೆಯನ್ನೂ ಮುಂದುವರಿಸಿಕೊಂಡು ಹೋಗಲು ಆಯುಶ್ಮಾನ್ ಭಾರತ ಎಂಬ ವಿಮಾ ಯೋಜನೆಯನ್ನು ಜಾರಿಗೊಳಿಸಿದೆ. ಈಗ ಆ ಯೋಜನೆಯ ವಿಷಯದ ಬಗ್ಗೆ ತಿಳಿದು ಕೊಳ್ಳೋಣ.

ಆಯುಶ್ಮಾನ್ ಭಾರತ – ವಿಮಾ ಯೋಜನೆ (AB-NHPS)

2018 ರಲ್ಲಿ ಮೋದಿ ಸರ್ಕಾರ ಆಯುಶ್ಮಾನ್ ಭಾರತ ಎಂಬ ರಾಷ್ಟ್ರೀಯ ಆರೋಗ್ಯ ರಕ್ಷಣಾ ಯೋಜನೆ (AB-NHPS) ಯನ್ನು ಜಾರಿಗೊಳಿಸಲು ಮುಂದಾಗಿದೆ. ಈ ಯೋಜನೆಯನ್ನು ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ಪ್ರಾರಂಭಿಸಲಿದೆ. ಇದನ್ನು ಇತರೇ ರಾಜ್ಯಗಳಲ್ಲೂ ಪ್ರಾರಂಭಿಸುವ ಯೋಜನೆ ಹಾಕಿಕೊಂಡಿದೆ. ಇದನ್ನು ಸಂಸತ್ತಿನ 2018–19 ರ ಮುಂಗಡ ಪತ್ರದ ಮಂಡನೆಯು ಸಮಯದಲ್ಲಿ ಶ್ರೀ ಅರುಣ್ ಜೇಟ್ಲಿಯವರು ಘೋಷಣೆ ಮಾಡುತ್ತ ಇದೊಂದು ರಾಷ್ಟ್ರೀಯ ವಿಮಾ ಯೋಜನೆ. ಇದು 10 ಕೋಟಿ ಬಡ ಕುಟುಂಬಗಳಿಗೆ ಸಹಾಯಕವಾಗಲಿದೆ ಹಾಗೂ ಪ್ರತಿ ಕುಟುಂಬಕ್ಕೆ ವರ್ಷಕ್ಕೆ 5 ಲಕ್ಷ ರೂ ವರೆಗೆ ಚಿಕಿತ್ಸೆಗೆ ವಿಮಾ ಹಣ ದೊರಕುವ ಯೋಜನೆ ಮಾಡಲಾಗುವುದು ಎಂದು ಹೇಳಿದರು. ಈ ವಿಮಾ ಯೋಜನೆ ಸರ್ಕಾರಿ ಹಾಗೂ ಖಾಸಗೀ ಆಸ್ಪತ್ರೆಗಳಲ್ಲಿ ಜಾರಿಗೆ ಬರುತ್ತದೆ. ಹಾಗೂ ಆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವವರಿಗೆ ವಿಮಾ ಹಣವನ್ನು ನೀಡಲಾಗುವುದು ಎಂದು ಹೇಳಿದರು.



ಈ ಯೋಜನೆಯ ವಿವರಗಳು

ಈ ಯೋಜನೆ ದೇಶದಲ್ಲಿನ 70% ಆಸ್ಪತ್ರೆಗಳನ್ನು ತಲುಪುತ್ತದೆ ಹಾಗೂ 40% ಜನಸಂಖ್ಯೆಗೆ ಪ್ರಯೋಜನವಾಗಲಿದೆ. ಈ ಯೋಜನೆಗೆ ನೋಂದಣಿಯಾದ ಸಣ್ಣ ಹಾಗೂ ಮಧ್ಯಮ ಗಾತ್ರದ ಆಸ್ಪತ್ರೆಗಳನ್ನು ಗುರುತಿಸಲಾಗುವುದು. ಈ ಆಸ್ಪತ್ರೆಗಳಲ್ಲಿ 10 ಅಥವಾ ಹೆಚ್ಚು ರೋಗಿ ಹಾಸಿಗೆಗಳಿರಬೇಕಾಗುತ್ತದೆ. ಈ ಆಸ್ಪತ್ರೆಗಳಿಗೆ Nationl Accreditation Board Hospital (NABH)ನ ಪ್ರಮಾಣ ಪತ್ರ ಅಗತ್ಯವಿಲ್ಲ, ಅವರಲ್ಲಿ ಆ ಪ್ರಮಾಣ ಪತ್ರವಿದ್ದರೆ ಅವರು ಪ್ರತಿಶತ 10 ರಿಂದ 15 ಕಿಂತ ಹೆಚ್ಚು ಹಣವನ್ನು ವಿಧಿಸಬಹುದು. ಆಸ್ಪತ್ರೆಗಳು NABH/NQAS (National Quality Assurance Standard) ಪ್ರಮಾಣ ಪತ್ರಗಳನ್ನು ಹೊಂದಿದ್ದರೆ ಹೆಚ್ಚಿಗೆ ಹಣವನ್ನು ವಿಧಿಸಬಹುದು. ಆ ಆಸ್ಪತ್ರೆಗಳು ಡಿ.ಎನ್.ಎ ತರಬೇತಿ ಕೇಂದ್ರಗಳಾಗಿದ್ದರೆ (ವೈದ್ಯಕೀಯ ಸ್ನಾತಕೋತ್ತರ ಪರೀಕ್ಷೆ) ಅವರೂ ಪ್ರತಿಶತ 10 ರಿಂದ 15 ರಷ್ಟು ಹೆಚ್ಚು ಶುಲ್ಕ ವಿಧಿಸಬಹುದು. ಕೇಂದ್ರ ಸರ್ಕಾರ ದೆಹಲಿಯಲ್ಲಿ 24x7 ಕೆಲಸ ಮಾಡುವ ಕೇಂದ್ರವನ್ನೂ ಸ್ಥಾಪಿಸಿ ಅಲ್ಲಿ ವಿಮಾ ಯೋಜನೆ ಬಗ್ಗೆ ಜನರಲ್ಲಿ ದೂರುಗಳನ್ನು ಸ್ವೀಕರಿಸಿ ಅದಕ್ಕೆ ಉತ್ತರ ನೀಡುವ ವ್ಯವಸ್ಥೆಯನ್ನು ಮಾಡಲಿದೆ. ಈ ವಿಮಾ ಯೋಜನೆ ಸುಮಾರು 11 ಕೋಟಿ ಕುಟುಂಬದ ಕಾರ್ಡಗಳನ್ನು ಹಳ್ಳಿಗಳಲ್ಲಿ ಹಂಚುವ ವ್ಯವಸ್ಥೆ ಮಾಡಲಾಗುವುದು. ಈ ಎಲ್ಲ ತಯಾರಿಯನ್ನು ಆಗಸ್ಟ್ 15, 2018 ರೊಳಗೆ ಮಾಡಲಾಗುವುದು. ಆದರೆ ಈ ಕಾರ್ಯಕ್ರಮ ಎಂದು ಅನಾವರಣಗೊಳ್ಳುತ್ತದೆ ಎಂಬುದು ಇನ್ನೂ ತಿಳಿದು ಬಂದಿಲ್ಲ.

ಈ ಕುಟುಂಬದ ಕಾರ್ಡ್‌ನಲ್ಲಿ ಯಾರು ಅದನ್ನು ಬಳಸಬಹುದು ಅವರ ಹೆಸರನ್ನು ನಮೂದಿಸಲಾಗಿರುತ್ತದೆ. ಈಗಾಗಲೇ ಸರ್ಕಾರ 80% ಗ್ರಾಮೀಣ ಫಲಾನುಭವಿಗಳನ್ನು ಹಾಗೂ 60% ಪಟ್ಟಣದ ಫಲಾನುಭವಿಗಳನ್ನು ಗುರುತಿಸಿದೆ. ಈ ಯೋಜನೆ 10 ಕೋಟಿ ಬಡ ದುರ್ಬಲ ವರ್ಗದವರಿಗೆ ಹಾಗೂ 50 ಕೋಟಿ ಕಾರ್ಡುಗಳನ್ನು ಆಶಾಕಾರ್ಯಕರ್ತೆಯರು ಮನೆ ಮನೆಗೆ ಹೋಗಿ ಫಲಾನುಭವಿ ಕುಟುಂಬಗಳಿಗೆ ನೀಡಲಿದ್ದಾರೆ, ಎಂದು ಹೇಳಲಾಗಿದೆ.

ಇದಕ್ಕಾಗಿ 11 ಕೋಟಿ ಮಾಹಿತಿ ಪತ್ರ ಹಾಗೂ ಕಾರ್ಡಗಳನ್ನು ಅಚ್ಚು ಹಾಕಿಸಿ ಫಲಾನುಭವಿ ಕುಟುಂಬಗಳಿಗೆ ನೀಡುವ ವ್ಯವಸ್ಥೆ ಮಾಡಲಾಗಿದೆ ಹಾಗೂ ಇದು ಸುಮಾರು ಎರಡು ವರ್ಷದಲ್ಲಿ ಪೂರ್ತಿಗೊಳ್ಳಲಿದೆ. ಇದರ ಫಲಾನುಭವಿಗಳ ಮಾಹಿತಿಯನ್ನು National Health Agency ಈ ಸಂಸ್ಥೆಗೆ ನೀಡಲಿದೆ. ಈ ಕಾರ್ಯಕ್ರಮ ಪರಿಣಾಮಕಾರಿಯಾಗಿ ಕೆಲಸವನ್ನು ನಿರ್ವಹಿಸಲಿದೆ, ಎಂದು ಹೇಳಲಾಗಿದೆ.

ಆಯುಶ್‌ಮಾನ್ ಮಿತ್ರ

ಆಯುಶ್ಮಾನ್ ಭಾರತ ಪಟ್ಟಿಯಲ್ಲಿರುವ ಎಲ್ಲ ಆಸ್ಪತ್ರೆಗಳಲ್ಲಿ ಸಾರ್ವತ್ರಿಕ ಆರೋಗ್ಯ ವ್ಯಾಪ್ತಿ (Universal Health Coverage) ವ್ಯವಸ್ಥೆಯನ್ನೂ ಮಾಡಲಾಗುವುದು. ಈ ಯೋಜನೆಯ ಫಲಾನುಭವಿಗಳನ್ನು ಆರ್ಥಿಕ ಹಾಗೂ ಸಾಮಾಜಿಕ ಮಾಹಿತಿ (SECC) ಆಧಾರದ ಮೇಲೆ ಗುರುತಿಸಲಾಗುವುದು. ಪ್ರತಿಯೊಂದು, ನೊಂದಣಿಯಾಗಿ ಆಯುಶ್ಮಾನ್ ಭವ ಒಪ್ಪಿಕೊಂಡ ಆಸ್ಪತ್ರೆಯಲ್ಲಿ ಒಬ್ಬ ಆಯುಶ್ಮಾನ್ ಮಿತ್ರ ಇರುತ್ತಾರೆ. ಇವರ ಕೆಲಸ ರೋಗಿಗಳು(ಈ ಕಾರ್ಯಕ್ರಮದ ಫಲಾನುಭವಿಗಳು) ಹಾಗೂ ಆಸ್ಪತ್ರೆ ನಡುವೆ ಸಂಪರ್ಕ ಏರ್ಪಡಿಸಿ ಸಹಾಯ ಮಾಡುವುದು, ಅವರು ಸಹಾಯ ಕೇಂದ್ರದಲ್ಲಿ ಫಲಾನುಭವಿಗಳ ಕಾಗದ ಪತ್ರಗಳನ್ನು ಪರಿಶೀಲಿಸಿ ಆಸ್ಪತ್ರೆಯವರೊಂದಿಗೆ ಸ್ಪಂದಿಸುತ್ತಾರೆ, ಎನ್ನಲಾಗಿದೆ.

ಪ್ರತಿಯೊಬ್ಬ ಫಲಾನುಭವಿಗೆ ಒಂದು ಪತ್ರವನ್ನು ನೀಡಿರುತ್ತಾರೆ ಹಾಗೂ ಅದರಲ್ಲಿ QR ಕೋಡ್ ಇರುತ್ತದೆ. ಅದನ್ನು ಆ. ಮಿತ್ರ ಸ್ಕ್ಯಾನ್ ಮಾಡಿ ಆ ವ್ಯಕ್ತಿಯ ವಿವರಗಳನ್ನು ಪಡೆದು ಆಸ್ಪತ್ರೆಗೆ ಚಿಕಿತ್ಸೆ ನೀಡಲು ಸಹಾಯ ಮಾಡುತ್ತಾನೆ. ಇಲ್ಲಿಯವರೆಗೆ 25 ರಾಜ್ಯಗಳು ಹಾಗೂ ಕೇಂದಾಡಳಿತ ಪ್ರದೇಶಗಳು ಈ ಕಾರ್ಯಕ್ರಮವನ್ನೂ ಜಾರಿಗೊಳಿಸುವುದಾಗಿ ಒಪ್ಪಿಗೆ ಪತ್ರಕ್ಕೆ (MoU) ಸಹಿ ಮಾಡಿವೆ. ಈ ಕಾರ್ಯಕ್ರಮದಲ್ಲಿ ಪಟ್ಟಣ ಪ್ರದೇಶದ 23.3 ಕೋಟಿ ಜನ ಹಾಗೂ ಗ್ರಾಮೀಣ ಪ್ರದೇಶದ 8.03 ಕೋಟಿ ಜನ ಭಾಗವಹಿಸುವ ಸಾಧ್ಯತೆ ಇದೆ.

ವಿಮಾ ಯೋಜನೆಗೆ ಹಣಕಾಸು :

ಈ ವಿಮಾ ಯೋಜನೆಗೆ ಹಣ ಎಷ್ಟು ಮತ್ತು ಎಲ್ಲಿಂದ ಬರುತ್ತದೆ ಎಂಬುದು ಸ್ಪಷ್ಟವಿಲ್ಲ. ಇಲ್ಲಿಯವರೆಗೆ ಆರೋಗ್ಯ ಮುಂಗಡ ಪತ್ರದಲ್ಲಿ ವಿಮೆಗೆ ಮೀಸಲಾಗಿಟ್ಟಿರುವ ಹಣ (2000 ಕೋಟಿ ರೂಪಾಯಿ, 50 ಕೋಟಿ ಜನರ ವಿಮೆಗಾಗಿ) ಸಾಲದು. ಇತ್ತೀಚೆಗೆ ಆರ್ಥಿಕ ಖಾತೆ ಕಾರ್ಯದರ್ಶಿ ಹಸ್‌ಮುಖ್ ಆದಿಯಾ ಅವರು ಒಂದು ಸಂದರ್ಶನದಲ್ಲಿ "ಈ ಯೋಜನೆಯನ್ನು ಇನ್ನೂ ಕಾರ್ಯರೂಪಕ್ಕೆ ತರಬೇಕಾಗಿದೆ. ಆ ಯೋಜನೆಯ ವಿವಿಧ ಹಂತಗಳನ್ನು ತೀರ್ಮಾನಿಸಬೇಕಿದೆ ಹಾಗೂ ಈ ಕಾರ್ಯಕ್ರಮ 2019–20 ರಲ್ಲಿ ಪ್ರಾರಂಭವಾಗುವ ಸಾಧ್ಯತೆ ಇದೆ" ಎನ್ನುತ್ತಾರೆ. ಅಂದರೆ ನೀವೇ ಊಹಿಸಬಹುದು, ಇದು ಮೋದಿ ಸಮಯದಲ್ಲಿ ಆಗದೇ ಇರಬಹುದು ಹಾಗೂ ಈ ಯೋಜನೆ ಪ್ರಾರಂಭದಲ್ಲೇ ಕುಸಿದು ಹೋಗುವ ಸಾಧ್ಯತೆ ಇರಬಹುದಲ್ಲ! ಈ ಕಾರ್ಯಕ್ರಮ ಜಾರಿಗೆ ಬರಲು ಪ್ರತಿವರ್ಷ 50,000 ದಿಂದ 1.2 ಲಕ್ಷ ಕೋಟಿ ಹಣ ಹೂಡಬೇಕಾಗುತ್ತದೆ. ಅದರರ್ಥ ಆರೋಗ್ಯದ ಬಜೆಟ್‌ನಲ್ಲಿ ಕಡಿಮೆ ಹಣ ಇಟ್ಟಿರುವಾಗ ಈ ಯೋಜನೆ ಒಂದು ಕಣ್ಣಾ ಮುಚ್ಚಾಲೆ ಆಟವೇ.

ಈ ವಿಮಾ ಯೋಜನೆ ಜನರಿಗೆ ಪ್ರಯೋಜನವಾಗಬಲ್ಲದೇ?

ಈ ಯೋಜನೆಗೆ ಸರಕಾರ ಎಲ್ಲಿಂದ ಹಣ ಹೂಡುತ್ತವೆ? ಹೇಗೋ ಹಣ ಹೂಡಿದರು ಎಂದುಕೊಳ್ಳಿ. ಆಗಲೂ ಆರೋಗ್ಯ ವ್ಯವಸ್ಥೆ ಸುಧಾರಿಸಲಾರದು. ಆರೋಗ್ಯ ವಿಮೆ ಪ್ರಯೋಜನವಾಗುವುದು ಅನುಮಾನವೇ. ಆರೋಗ್ಯ ವಿಮೆ ಬಗ್ಗೆ ನಮ್ಮ ಹಿಂದಿನ ಅನುಭವ ಇದನ್ನು ಸೂಚಿಸುತ್ತದೆ.

ಈಗ ವಿಮಾ ಯೋಜನೆ ಕೇವಲ 12–13% ಭಾಗದಷ್ಟು ಜನರಿಗೆ ತಲುಪಿದೆ. ಅದಲ್ಲದೇ ಈ ವಿಮಾ ಯೋಜನೆ ಕೇವಲ ಆಸ್ಪತ್ರೆ ಚಿಕಿತ್ಸೆಗೆ ಮಾತ್ರ ಹಾಗೂ

ಪುಟ 10 ಕ್ಕೆ

ಆರೋಗ್ಯ ವಿಮೆ ಬೇಕಾ, ಆರೋಗ್ಯ ರಕ್ಷಣೆ ಬೇಕಾ?....

ಪುಟ 9 ರಿಂದ

ಅದರಲ್ಲಿಯೂ ಕೆಲವು ಆಪರೇಶನ್‌ಗಳಿಗೆ ಮಾತ್ರ. ಜನಸಾಮಾನ್ಯರಿಗೆ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಅಗತ್ಯತೆ ಇದೆ. ಆದರೆ ಅದಕ್ಕೆ ಯಾವ ವಿಮೆಯೂ ಸಹಾಯಕವಾಗಲಾರದು. ಈ ಯೋಜನೆಯನ್ನು ಖಾಸಗಿ ಹಾಗೂ ಕೆಲವು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಜಾರಿಗೆ ತರಲಾಗುತ್ತಿದೆ.

ಹಿಂದೆ ಆರೋಗ್ಯ ಶ್ರೀ ಎಂಬ ವಿಮಾ ಯೋಜನೆಯಲ್ಲಿ (2007–2013) 10.71 ಶತಕೋಟಿ ರೂಪಾಯಿಯನ್ನು ಸಾರ್ವಜನಿಕ ಆಸ್ಪತ್ರೆಗೆ ನೀಡಲಾಗಿತ್ತು. ಆದರೆ ಖಾಸಗಿ ಆಸ್ಪತ್ರೆಗೆ ನೀಡಿದ ಹಣ 36.52 ಶತಕೋಟಿ. ಖಾಸಗಿ ಆಸ್ಪತ್ರೆಗಳು ಚಿಕಿತ್ಸೆ ದ್ವಿತೀಯ ಹಾಗೂ ತೃತೀಯ ಹಂತದ ಆರೋಗ್ಯ ಸೇವೆಗೆ ಮೀಸಲಿರುತ್ತವೆ. ಆದರೆ ಈ ಯೋಜನೆಯಲ್ಲಿ ಸಾಂಕ್ರಾಮಿಕ ರೋಗಗಳಿಗೆ ಉದಾ ಕ್ಷಯ ಹಾಗೂ ದೀರ್ಘಕಾಲದ ರೋಗಗಳಿಗೆ ಉದಾ: ಸಕ್ಕರೆ ಕಾಯಿಲೆ, ರಕ್ತದ ಒತ್ತಡ, ಹೃದಯ ರೋಗ, ಕ್ಯಾನ್ಸರ್ ರೋಗಗಳಿಗೆ, ಆಸ್ಪತ್ರೆ ಚಿಕಿತ್ಸೆ ನೀಡಲಾಗುವುದಿಲ್ಲ ಹೀಗಾಗಿ ವಿಮಾ ಯೋಜನೆ ದಿನನಿತ್ಯದ ಸಮಸ್ಯೆಗಳಿಗೆ ಪ್ರಯೋಜಕವಾಗಿಲ್ಲ. ಆರೋಗ್ಯ ಶ್ರೀ ಯೋಜನೆಯಲ್ಲಿ 25% ಹಣವನ್ನು ರಾಜ್ಯ ಆರೋಗ್ಯ ಯೋಜನೆಯ ಹಣಕಾಸಿನಿಂದ ಪಡೆಯಲಾಗಿತ್ತು. ಆದರೆ ಅದನ್ನು ಕೇವಲ 2% ರೋಗಿಗಳಿಗೆ ವಿಮೆಗೆ ಬಳಸಲಾಗಿತ್ತು. ಇದರಿಂದಾಗಿ ಸರಕಾರಕ್ಕೆ ಅನಗತ್ಯ ವೆಚ್ಚವಾಗುವುದಲ್ಲದೆ ಆರೋಗ್ಯ ಕ್ಷೇತ್ರ ಸುಧಾರಿಸುವ ಬದಲು ಖಾಸಗಿ ಆಸ್ಪತ್ರೆಗಳನ್ನು ಉದ್ಧಾರ ಮಾಡಿದಂತಾಗುತ್ತದೆ.

ಯಾಕೆ ವಿಮಾ ಯೋಜನೆ :

ನವಉದಾರವಾದಿ ಆರ್ಥಿಕತೆ 1991 ರಿಂದ ಭಾರತದಲ್ಲಿ ಜಾರಿಯಲ್ಲಿದೆ. ಈ ಆರ್ಥಿಕತೆ ವಿಮಾ ಯೋಜನೆಗೆ ಮಹತ್ವ ನೀಡುತ್ತದೆ. ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರವನ್ನು ತೊಡಗಿಸಿಕೊಂಡು (Public Private Patnership) ಹೋಗುವುದು ಉತ್ತಮ ಎಂಬ ನಂಬಿಕೆ ಈ ಧೋರಣೆಯಲ್ಲಿದೆ. ಆದರೆ ಇದು ಜನರಿಗೆ ಪ್ರಯೋಜನಕಾರಿಯಲ್ಲ, ಖಾಸಗಿಯವರಿಗೆ ಲಾಭಕಾರಿಯಷ್ಟೇ. ಈ ಆರ್ಥಿಕತೆಯನ್ನು ಜಾರಿಮಾಡಲು ಸರ್ಕಾರಿ ಹಣವನ್ನು ಖಾಸಗಿ ಕ್ಷೇತ್ರದ ಉನ್ನತೀಕರಿಸಲು ಬಳಸಲಾಗುತ್ತದೆ. ಆದರೆ ಅದರಿಂದ ಸರ್ಕಾರಿ ಕ್ಷೇತ್ರ ಕ್ಷೀಣಿಸುವುದನ್ನು ಕಡೆಗಣಿಸಲಾಗುತ್ತದೆ. ಅದರ ಬದಲು ಸರ್ಕಾರಿ ಹಣವನ್ನು ಬಳಸಿ, ಸರ್ಕಾರಿ ಕ್ಷೇತ್ರವನ್ನು ಉನ್ನತಮಟ್ಟಕ್ಕೆ ತೆಗೆದುಕೊಂಡು ಹೋಗಬಹುದು ಎಂಬ ತರ್ಕವನ್ನು ತಿರಸ್ಕರಿಸುವುದು ಅರ್ಥಹೀನ. ಈ ನವ–ಉದಾರವಾದಿ ಆರ್ಥಿಕತೆಯಲ್ಲಿ ಖಾಸಗಿ ಕ್ಷೇತ್ರಕ್ಕೆ ನಿರಂತರವಾಗಿ ರೋಗಿಗಳನ್ನು ನೀಡಿದಂತಾಗುತ್ತದೆ. ಆದರೆ ಖಾಸಗೀ ಚಿಕಿತ್ಸಾ ಗುಣಮಟ್ಟ ಹಾಗೂ ಚಿಕಿತ್ಸಾ ವೆಚ್ಚದ ಮೇಲೆ ನಿಯಂತ್ರಣ ಸಾಧಿಸುವುದು ಸಾಧ್ಯವಾಗದಿರುವ ನಮ್ಮಂತಹ ಬಡದೇಶದಲ್ಲಿ ಈ ನವಉದಾರವಾದಿ ಆರ್ಥಿಕತೆ ಜನರಿಗೆ ಒಳ್ಳೆಯದನ್ನು ಮಾಡದು.

ಈ ನವ–ಉದಾರವಾದಿ ಆರ್ಥಿಕತೆ ಬದಲು ಸರ್ಕಾರಿ ಕ್ಷೇತ್ರಕ್ಕೆ ಹೆಚ್ಚಿನ ಹಣ ನೀಡಿ ಸರ್ಕಾರೀ ಆಸ್ಪತ್ರೆಗಳು ಪರಿಸ್ಥಿತಿಯನ್ನು ಸುಧಾರಿಸ ಬೇಕಾಗಿದೆ. ಇಲ್ಲದಿದ್ದರೆ ಗೋರಕಪುರದಂತಹ ಪರಿಸ್ಥಿತಿ ಉಂಟಾಗಿ ನೂರಾರು ಮಕ್ಕಳ ಸಾವು ಸಂಭವಿಸುವುದು ಸಾಮಾನ್ಯವಾಗುತ್ತಾ ಹೋಗುತ್ತದೆ. ಈ ನವ–ಉದಾರವಾದಿ ನೀತಿ ಜಾರಿಗೊಳಿಸಿ ಸರ್ಕಾರವೇ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಕ್ಷೀಣಿಸ ಹೊರಟಿದೆ.

ಆದರೆ ಜಗತ್ತಿನಾದ್ಯಂತ ಉತ್ತಮ ಆರೋಗ್ಯ ಸೇವೆಗಳಿಗೆ ಖಾಸಗಿ ಆಸ್ಪತ್ರೆ ಬದಲು ಸರ್ಕಾರಿ ಆಸ್ಪತ್ರೆಗಳೇ ಕಾರಣವಾಗಿವೆ ಎಂದು ಅನೇಕ ಉದಾಹರಣೆಗಳು ತಿಳಿಸುತ್ತವೆ. ಉದಾ: ಬ್ರಿಟನ್. ಶ್ರೀಲಂಕಾ, ಥೈಲ್ಯಾಂಡ್, ಫ್ರಾನ್ಸ್, ಕ್ಯೂಬಾ. ನಮ್ಮ ದೇಶದಲ್ಲಿ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಕಡೆಗಣಿಸಲಾಗಿದೆ. ಆನಾರೋಗ್ಯ ಸುಧಾರಿಸಲು ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಅತ್ಯಗತ್ಯ. ಈ ಖಾಸಗಿ ಆಸ್ಪತ್ರೆಗಳು ಗ್ರಾಮೀಣ ಪ್ರದೇಶದಲ್ಲಿ ಇರದಿರುವುದರಿಂದ ಹೇಗೆ ವಿಮಾ ಯೋಜನೆ ಎಲ್ಲರಿಗೂ ತಲುಪಿ ಯಶಸ್ವಿಯಾಗಲು ಸಾಧ್ಯ?

ಈ ವಿಮಾ ಯೋಜನೆಯಿಂದ ಪ್ರಯೋಜನೆ ಯಾರಿಗೆ?

ಈಗ ದೊಡ್ಡ ದೊಡ್ಡ ಶ್ರೀಮಂತರು ಈ ಖಾಸಗೀ ಆಸ್ಪತ್ರೆಗಳನ್ನು ನಡೆಸುತ್ತಾರೆ. ಅವರು ಈ ನವಉದಾರವಾದಿ ನೀತಿಯಿಂದ ಜಾರಿಗೆ ಬರುವ ವಿಮಾಯೋಜನೆಯಿಂದ ಸಂತೋಷ ಪಡುತ್ತಾರೆ. ಈ ಯೋಜನೆ ಬಡವರಿಗೆ ಸಹಾಯಕವೇ ಎಂದು ಕೇಳಿದಾಗ, ಸರ್ಕಾರ ಇದು ಎಲ್ಲರಿಗೂ ಲಾಭದಾಯಕ ಎಂಬ ಉಡಾಫೆ ಉತ್ತರ ನೀಡುತ್ತದೆ. ಈ ಯೋಜನೆಯನ್ನು ಇನ್ನು ಪ್ರಾರಂಭಿಸಿಯೇ ಇಲ್ಲ. ಆದರೂ ಈ ಬಿಜೆಪಿ ಸರ್ಕಾರ ಈ ಯೋಜನೆ ಜಾರಿಗೊಳಿಸಿ ಯಶಸ್ವಿಯಾಗಿದೆ ಎಂದು ಹೇಳಿಕೊಳ್ಳುತ್ತಿದೆ. ಇತ್ತೀಚೆಗೆ ನೀತಿ ಆಯೋಗದ ರಾಜೀವ್ ಕುಮಾರ್ ಅವರು ಪ್ರೊ. ಅಮಾರ್ತ್ಯ ಸೆನ್ ಅವರೊಂದಿಗೆ ಚರ್ಚೆಯಲ್ಲಿದ್ದ ವಿಡಿಯೋ ನೋಡಿದರೆ ನಿಮಗೆ ಗೊತ್ತಾಗುತ್ತದೆ.

ಈ ಯೋಜನೆಗೆ ಯಾವದಾದರೂ ಆಧಾರವಿದೆಯೋ?

ಈ ಯೋಜನೆಯ ಆರ್ಥಿಕತೆ ಬಗ್ಗೆ ಕರ್ನಾಟಕದ್ದೇ ಒಂದು ಅಧ್ಯಯನವನ್ನೂ ಮಾಡಲಾಗಿತ್ತು. ಅದನ್ನು "ಕರ್ನಾಟಕ ಗೌರ್ನಮೆಂಟ್ ಕಾಸ್ಟಿಂಗ್ ಸ್ಮಡಿ" ಎಂದು ಕರೆಯಲಾಗಿದೆ. ಈ ಯೋಜನೆಯಲ್ಲಿ ಕರ್ನಾಟಕದ 4 ಆಸ್ಪತ್ರೆಗಳಲ್ಲಿ ಈ ವಿಮಾ ಯೋಜನೆಗೆ ಪ್ರಮುಖ 20 ಚಿಕಿತ್ಸಾ ಕ್ರಮದ ಬಗ್ಗೆ ಅಧ್ಯಯನ ಮಾಡಲಾಯಿತು. ಈ ಅಧ್ಯಯನದಲ್ಲಿ ಈ ಚಿಕಿತ್ಸಾ ಕ್ರಮಗಳಿಗೆ (ಪ್ರೊಸೀಜರ್ಸ್) ಎಷ್ಟು ವೆಚ್ಚ ತಗಲುಬಹುದು ಎಂದು ತೀರ್ಮಾನಿಸಲಾಗಿತ್ತು. ಈ ಅಧ್ಯಯನದ ಬಗ್ಗೆ ಆಗಲೇ ಅಪಸ್ವರಗಳೆದ್ದಿವೆ. ಕರ್ನಾಟಕದ ಆರೋಗ್ಯ ಕಾರ್ಯದರ್ಶಿಗಳು "ಈ ಯೋಜನೆ ರಾಜ್ಯ ಸರ್ಕಾರದ ಯೋಜನೆ ಅಲ್ಲ" ಎನ್ನುತ್ತಾರೆ. ಈ ಅಧ್ಯಯನದ ಬಗ್ಗೆ ಎದ್ದ ಅಪಸ್ವರಗಳು ಹೀಗಿವೆ:



ಕೃಪೆ: ಮಂಜುಲ

ಈ ಅಧ್ಯಯನದಲ್ಲಿ ಕೇವಲ ಬೆಂಗಳೂರಿನಲ್ಲಿದ್ದ 4 ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಈ ಆಸ್ಪತ್ರೆಗಳು ಇಡೀ ಭಾರತದ ಆಸ್ಪತ್ರೆಗಳನ್ನು ಪ್ರತಿನಿಧಿಸುವುದಿಲ್ಲ ಹಾಗೂ ಆ ಆಸ್ಪತ್ರೆಗಳು ಈ ಯೋಜನೆಗೆ ನೇರ ಸಂಬಂಧವಿರುವ ವ್ಯಕ್ತಿಗಳಿದ್ದಾರೆ. ಇದು ಸ್ವತಂತ್ರವಲ್ಲ. ಖಾಸಗಿ ಆಸ್ಪತ್ರೆಯವರ (ಅಸೋಸಿಯೇಶನ ಆಪ್ ಹೆಲ್ತ್ ಪ್ರೊಫೆಶನಲ್ಸ್ (AHPI) ಆಫ್ ಇಂಡಿಯಾ) ಗುಂಪು ಸರ್ಕಾರದ ಈ ಯೋಜನೆಯಲ್ಲಿ ಬೆಲೆ ನಿಗದಿ ಪಡಿಸಿದ್ದಕ್ಕೆ ಅಸಂತೋಷ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಹೆಚ್ಚು ಬೆಲೆ ನಿಗದಿ ಮಾಡಲು ಕೇಳಿಕೊಂಡಿದ್ದಾರೆ. ಈ ಖಾಸಗಿ ಆಸ್ಪತ್ರೆಗಳ ಒತ್ತಡಕ್ಕೆ ಮಣಿದ ಸರ್ಕಾರ ಬೆಲೆಗಳಲ್ಲಿ ಹೆಚ್ಚಳ ತಂದಿದೆ.

ಕರ್ನಾಟಕ ಗೌರ್ನಮೆಂಟ್ ಕಾಸ್ಟಿಂಗ್ (Costing) ಸ್ಟಡಿ ಎಂಬ ಒಂದು ಅಧ್ಯಾಯವನ್ನು ಕರ್ನಾಟಕ ಸಾರ್ವಜನಿಕ ಆರೋಗ್ಯ ನೀತಿಯಲ್ಲಿ ಸೇರಿಸಲಾಗಿದೆ. ಇದನ್ನು 2016 ನವೆಂಬರ್‌ನಲ್ಲಿಯೇ ಕರ್ನಾಟಕ ಜ್ಞಾನ ಆಯೋಗ ಪ್ರಕಟಿಸಿತ್ತು. ಆ ಅಧ್ಯಯನದಲ್ಲಿ ಸುಮಾರು 20 ಚಿಕಿತ್ಸಾ ಪದ್ಧತಿಗಳಿಗೆ (Procedure) ಬೆಲೆ ನಿಗದಿ ಮಾಡುವ ಅಧ್ಯಯನ ನಡೆಸಿದೆ. ಆದರೆ ಖಾಸಗಿ ಆಸ್ಪತ್ರೆಗಳ ಪ್ರಕಾರ ಈ ಚಿಕಿತ್ಸಾ ಕ್ರಮಗಳಿಗೆ ಹೆಚ್ಚು ಖರ್ಚಾಗುವುದರಿಂದ, ಆ ಆಯೋಗದ ಬೆಲೆಗಳನ್ನು ಹೆಚ್ಚಿಸಬೇಕು ಎಂದಿವೆ.

ಈಗ ಕರ್ನಾಟಕ ಸರ್ಕಾರ ಎ.ಬಿ.ಎನ್. ಹೆಚ್.ಸಿ.ಎನ್(AB-NHCN) ಜೊತೆಗೆ ಒಪ್ಪಂದ (MoU) ಮಾಡಿಕೊಳ್ಳಲು ಹೊರಟಿದೆ. ಇದರರ್ಥ ಸರ್ಕಾರದ ನಿಲುವು ಆರೋಗ್ಯ ಕ್ಷೇತ್ರದ ಖಾಸಗೀಕರಣದತ್ತ ಎಂಬುದು ಸ್ಪಷ್ಟವಾಗುತ್ತದೆ. ಜೂನ್ 22, 2018 ರಂದು ಭಾರತೀಯ ವೈದ್ಯಕೀಯ ಸಂಘದ (ಐ.ಎಮ್.ಎ.–IMA) ಪ್ರತಿನಿಧಿಗಳು ಕೇಂದ್ರ ಸರ್ಕಾರದೊಂದಿಗೆ ಈ ಯೋಜನೆಗೆ ಸಮ್ಮತಿ ನೀಡಲು ಭೇಟಿಯಾಗಿದ್ದರೆಂದು ಸರ್ಕಾರ ಪತ್ರಿಕೆಗಳಿಗೆ ಮಾಹಿತಿ ನೀಡಿದೆ. ಆದರೆ ಐಎಮ್ಎ ಈ ಯೋಜನೆಯ ಹಣಕಾಸಿನ ವಿಷಯದ ಬಗ್ಗೆ ಒಪ್ಪಿಗೆ ನೀಡಿಲ್ಲ. ಸರ್ಕಾರ ಈ ಹಣಕಾಸಿನ ವೆಚ್ಚದಲ್ಲಿ ಬದಲಾವಣೆ ಮಾಡುವುದಾಗಿ ಹೆಚ್ಚಳ ನೀಡುವುದಾಗಿ ತಿಳಿಸಿದೆ. ಆಯುಶ್ಮನ್ ಭವ ಕಾರ್ಯಕ್ರಮದ ನಿರ್ದೇಶಕ ಡಾ ದಿನೇಶ್ ಅರೋರಾ,, ಈ ಯೋಜನೆಯ ಹಣಕಾಸಿನ ವಿಷಯವನ್ನು ಭಾರತೀಯ ವೈದ್ಯಕೀಯ ಸಂಶೋಧನೆಯ ವಿಭಾಗದೊಂದಿಗೆ ಒಂದು ಚರ್ಚೆ ಏರ್ಪಡಿಸಿ ತೀರ್ಮಾನಕ್ಕೆ ಬರುವುದಾಗಿ ತಿಳಿಸಿದ್ದಾರೆ.

ಈ ವಿಮಾ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಈಗಾಗಲೇ ಇರುವ ಖಾಸಗಿ ವಿಮೆ ತೆಗೆದುಕೊಂಡವರಿಗೆ ಇದನ್ನು ಸೇರಲು ಸಾಧ್ಯವಿಲ್ಲ. ಈ ಯೋಜನೆ ಪ್ರತಿ ವರ್ಷ 30,000 ರೂ. ದ್ವೀತಿಯ ಹಂತದ ಆರೋಗ್ಯ ಸೇವೆ ಪಡೆಯಲು ನೀಡಲಾಗುವುದು ಹಾಗೂ ಅಂಥ ವ್ಯಕ್ತಿಗಳಿಗೆ ಅಗತ್ಯವಿದ್ದರೆ ತೃತಿಯ ಹಂತದ ಆರೋಗ್ಯ ಸೇವೆ (Tertiary Helth care) ಪಡೆಯಲು 5 ಲಕ್ಷ ರೂ (ಮೂಲ 1.5 ಲಕ್ಷ) ನೀಡಲು ಸರ್ಕಾರ ತಯಾರಾಗಿದೆ.

ಸ್ಥಾಂಸ್ಥಿಕ ಭ್ರಷ್ಟಾಚಾರ

ಆರೋಗ್ಯದ ವಿಷಯಗಳು ಪೂರ್ತಿ ತೀರ್ಮಾನವಾಗದಿದ್ದಾಗ ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಜನರಿಗೆ ದೊರಕದಿದ್ದಾಗ ಆರೋಗ್ಯ ಕಾಪಾಡಲು ಸರ್ಕಾರ ಹಣ ಕೊಡುತ್ತದೆ ಎಂಬ ಮಾಹಿತಿ ಯಾರನ್ನೂ ಆಶ್ಚರ್ಯ ಹಾಗೂ ಸಂತೋಷದಿಂದ ತುಂಬುತ್ತದೆ. ಜನರಿಗೆ ಈ ವಿಮಾ ಯೋಜನೆಯ ಒಂದು ಆಕರ್ಷಕ ವಿಷಯವೆಂದರೆ ಅವರು ವಿಮಾ ಕಂತು ಕಟ್ಟುವಂತಿಲ್ಲ. ಆದರೆ ಯಾವುದೇ ವಿಮಾಯೋಜನೆಯ ಉದ್ದೇಶ ಏನಿರಬೇಕೆಂದು ಜನರಿಗೆ ತಿಳಿಸಲಾಗಿಲ್ಲ ಹಾಗೂ ಹಾಗೆಯೇ ತರ್ಕವಿಲ್ಲದೇ ಈ ವಿಮಾ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಈ ವಿಮಾ ಯೋಜನೆಯಿಂದ ಜನರ ಬದಲು, ವಿಮಾ ಕಂಪನಿಗಳಿಗೆ ಲಾಭವಾಗಲಿದೆ. ಇದು ಉದಾರವಾದಿ ನೀತಿಯ ಒಂದು ಉಪನೀತಿಯೇ ಆಗಿದೆ. ಆದರೆ ಆರೋಗ್ಯ ವ್ಯವಸ್ಥೆ ಸುಧಾರಿಸಲು ಖಾಸಗಿ ಆರೋಗ್ಯ ವ್ಯವಸ್ಥೆಯೇ ಅತ್ಯಗತ್ಯ ಎಂಬ ತೀರ್ಮಾನಕ್ಕೆ ಸರ್ಕಾರ ಬಂದಂತಾಗಿದೆ ಹಾಗೂ ಖಾಸಗಿ ಸಂಸ್ಥೆಗಳಿಗೆ ಪ್ರಾಮುಖ್ಯತೆ ಬಂದಿದೆ.

ಈ ಸಮಸ್ಯೆ ಜಗತ್ತಿನಾದ್ಯತ್ಯ ಅನೇಕ ದೇಶಗಳಲ್ಲಿ ಕಂಡು ಬಂದಿದೆ. ಇಲ್ಲಿಯವರೆಗೆ ಕಾರ್ಯದಲ್ಲಿ ತೊಡಗಿದ್ದ ವಿಶ್ವ ಆರೋಗ್ಯ ವ್ಯವಸ್ಥೆಯನ್ನು ಈ ಖಾಸಗಿ ಸಂಸ್ಥೆಗಳೇ ಬಲಹೀನಗೊಳಿಸಿವೆ ಎಂದರೆ ತಪ್ಪಾಗಲಾರದು. (ಉದಾ: ಅಮೇರಿಕಾದ ಮೆಕೆನ್ಸೀ, ಬಿಲ್‌ಗೇಟ್ ಸಂಸ್ಥೆ) ಈಗ ನಮ್ಮ ದೇಶದಲ್ಲಿ ಖಾಸಗಿ ಆಸ್ಪತ್ರೆ ನೀತಿಗಳು ಬರಲು ಈ ಮೆಕೆನ್ಸೀ ಸಂಸ್ಥೆಯೇ ಕಾರಣ ಎಂಬುದು ಬಹಳ ಜನರಿಗೆ ತಿಳಿಯಲಾರದು. ಭಾರತದ ಸರ್ಕಾರೀ ನೀತಿಗಳನ್ನು ಈ ಖಾಸಗಿ ಸಂಸ್ಥೆಗಳೇ ನಿರ್ಧರಿಸುತ್ತವೆ ಎಂದರೆ ಆಶ್ಚರ್ಯವಾಗ ಬಹುದಲ್ಲವೇ. ಇದು ಕೇವಲ ನೀತಿಯ ವಿಷಯವಲ್ಲ, ಸ್ಥಾಂಸ್ಥಿಕ ಭ್ರಷ್ಟಾಚಾರ.

ನವ ಉದಾರವಾದಿ ನೀತಿಯಲ್ಲಿ ಸಾರ್ವಜನಿಕ ವ್ಯವಸ್ಥೆಗಳ ಬದಲು ಖಾಸಗಿ ಸಂಸ್ಥೆಗಳಿಗೆ ಪ್ರಾಮುಖ್ಯತೆ ನೀಡಲಾಗುವುದು. ಇಂದು ಭ್ರಷ್ಟಾಚಾರ ಎಂದರೆ ಸಾರ್ವಜನಿಕ ಸರ್ಕಾರಿ ವ್ಯವಸ್ಥೆಯನ್ನೂ ಖಾಸಗಿ ಲಾಭಕ್ಕೆ ಉಪಯೋಗಿಸುವ ಪದ್ಧತಿ ಎನ್ನಬಹುದು. 1991 ರಿಂದ ಸತತವಾಗಿ ಸರ್ಕಾರಿ ಸೇವೆಗಳನ್ನು ಕ್ಷೀಣಿಸುವಂತೆ ಮಾಡಲು, ಸರ್ಕಾರವೇ ಎಲ್ಲ ಪ್ರಯತ್ನ ಮಾಡಿದೆ. ಸರ್ಕಾರವೇ ದೂರ ನಿಂತು ಖಾಸಗಿ ಕ್ಷೇತ್ರವನ್ನು ಪ್ರೋತ್ಸಾಹಿಸಿತು. ಆದ್ದರಿಂದ ಕೆಲಸವನ್ನು ತೆಗೆದು ಕೊಂಡು, ಅಪಾರ ಹಣಕೊಟ್ಟು, ತಾನು ದೂರನಿಂತು ನೋಡುತ್ತಾ ತನ್ನ ಕರ್ತವ್ಯದಿಂದ ವಿಮುಖವಾಗುತ್ತ ಹೊರಟಿದೆ.

ಮೋದಿ ಕೇರ್ ನಲ್ಲಿ ಬುಡಮೇಲಾದ ಪಿರಮಿಡ್

ಆಯುಶ್ಮಾನ್ ಭಾರತ ಅಥವಾ ವಿಮಾ ಯೋಜನೆಯನ್ನು ಮೋದಿ ಕೇರ ಎಂತಲೂ ಕರೆಯಲಾಗುತ್ತಿದೆ. ಇದು ಜಾಗತಿಕ ನವಉದಾರವಾದಿ ಆರೋಗ್ಯದ ಮಾದರಿ ಜಾರಿಯಲ್ಲಿದೆ. ಸರ್ಕಾರಿ ಹಾಗೂ ಖಾಸಗೀ ಕ್ಷೇತ್ರದ ಕಾರ್ಯವೈಖರಿಯನ್ನೂ ಬದಲಿಸುವ ತಂತ್ರ ಈ ವ್ಯವಸ್ತೆಯಲ್ಲಿ ಸರ್ಕಾರಿ ಕ್ಷೇತ್ರ ಕ್ಷೀಣಿಸುತ್ತದೆ. ಖಾಸಗೀ ಕ್ಷೇತ್ರ ಬಲಗೊಳ್ಳುತ್ತದೆ. ಆರೋಗ್ಯ ಚಿಕಿತ್ಸೆ ದುಬಾರಿಯಾಗುತ್ತದೆ. ರೋಗ ತಡೆಗಟ್ಟುವಿಕೆ ಇಲ್ಲವಾಗುತ್ತದೆ.

ನವಉದಾರವಾದಿ ವ್ಯವಸ್ಥೆ 1991 ರಿಂದ ಪ್ರಾರಂಭವಾಗಿದೆ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ (IMF) ಹಾಗೂ ವಿಶ್ವಬ್ಯಾಂಕ್ (WB) ಇವರ ಆದೇಶದ ಮೇಲೆ ರಾಷ್ಟ್ರೀಯ ಆರೋಗ್ಯ ನೀತಿಗಳು ರೂಪುಗೊಂಡಿವೆ. ಖಾಸಗೀ ಕ್ಷೇತ್ರದಲ್ಲಿನ ಕೆಲವು ಪ್ರಬಾವಶಾಲಿ ವೈದ್ಯರು ಉದಾ: ಡಾ. ➡

ಬಂಡವಾಳದ ಪುನರುತ್ಪಾದನೆಯನ್ನೂ ಮಾಡಲಾಗದ... ಪುಟ 16 ರಿಂದ

ಬೇಳೆಕಾಳುಗಳು) 1967–81 ಅವಧಿಗಿಂತಲೂ ಕಡಿಮೆಯಾಗಿದೆ. ಉದಾಹರಣೆಗೆ ಬೇಳೆಕಾಳುಗಳ ಒಟ್ಟು ಉತ್ಪಾದಕತೆಯ ಬೆಳವಣಿಗೆಯ ವಾರ್ಷಿಕ ದರ 1967–81 ಮತ್ತು 1981–91 ಅವಧಿಗಳಲ್ಲಿ ಶೇ. 2.11 ಮತ್ತು ಶೇ. 3.64 ಇದ್ದಿದ್ದು, 1991–2010 ಅವಧಿಯಲ್ಲಿ ಶೇ. 1.61ಕ್ಕೆ ಕುಸಿದಿದೆ. ಅದೇ ರೀತಿ ಗ್ರಾಮೀಣ ಉದ್ಯೋಗದಲ್ಲೂ 1994–2000 ಅವಧಿಯಲ್ಲಿ ಕುಸಿತ ಮತ್ತು 2004–2011 ಅವಧಿಯಲ್ಲಿ ತೀರಾ ಅಲ್ಪ ಬೆಳವಣಿಗೆ ಆಗಿದೆ. ಈ ಅವಧಿಯಲ್ಲಿ ಗ್ರಾಮೀಣ ದುಡಿಮೆಗಾರರ (ಕೂಲಿ ಕೆಲಸಗಾರರು ಮತ್ತು ಸ್ವಯಂ ಉದ್ಯೋಗಿಗಳೂ ಸೇರಿ) ವಾರ್ಷಿಕ ಆದಾಯ ನಿಜಬೆಲೆಗಳಲ್ಲಿ ಸ್ಥಗಿತವಾಗಿತ್ತು ಇಲ್ಲವೆ ಕಡಿಮೆಯಾಗಿದೆ, ಎಂದು ಪ್ರೊ. ಆತ್ರೇಯ ಅವರು ಕೃಷಿ ಬಿಕ್ಕಟ್ಟಿನ ಪರಿಣಾಮಗಳನ್ನು ವಿವರಿಸಿದರು.

ಆದರೆ ಇದೇ ಅವಧಿಯಲ್ಲಿ ಬಂಡವಾಳದ ಸೃಷ್ಟಿಯಲ್ಲಿ ಸಕಾರಾತ್ಮಕ ಬೆಳವಣಿಗೆ ಆಗಿರುವುದು ಗಮನಾರ್ಹ. ಕೃಷಿ ಮತ್ತು ಸಂಬಂಧಿತ ಕ್ಷೇತ್ರದಲ್ಲಿ ಬಂಡವಾಳ ಸೃಷ್ಟಿ ಮತ್ತು ಜಿಡಿಪಿಯ ಅನುಪಾತ 2002–2007 ಅವಧಿಯಲ್ಲಿ ಸರಾಸರಿ ಶೇ. 13.9 ಇದ್ದಿದ್ದು, 2007–2011 ಅವಧಿಯಲ್ಲಿ ಶೇ. 18.8ಕ್ಕೆ ಏರಿತ್ತು. ಇದರಲ್ಲಿ ಶೇ. 80ರಷ್ಟು ಖಾಸಗಿ ಕ್ಷೇತ್ರದಲ್ಲಿ ಆಗಿತ್ತು. ಗ್ರಾಮೀಣ ಪ್ರದೇಶದಲ್ಲಿ ಭೂಮಾಲಕರ, ಬಂಡವಾಳಶಾಹಿ ಭೂಮಾಲಕರ, ಶ್ರೀಮಂತ ರೈತರ ಮತ್ತು ವಹಿವಾಟುದಾರರ – ಅಥವಾ ಗ್ರಾಮೀಣ ಶ್ರೀಮಂತರ ವರ್ಗವೊಂದು ಈ ಅವಧಿಯಲ್ಲಿ ತಮ್ಮ ಉತ್ಪಾದಕ ಆಸ್ತಿ ಆದಾಯ ಲಾಭಗಳನ್ನು ಹೆಚ್ಚಿಸಿಕೊಂಡಿದ್ದು ಕಂಡು ಬರುತ್ತದೆ. ಈ ವರ್ಗ ಕೃಷಿ ಬಿಕ್ಕಟ್ಟನ್ನು ಬಳಸಿ ಗ್ರಾಮೀಣ ಬಡವರ ಶೋಷಣೆಯಿಂದ ಮತ್ತು ಅವರ ಆಸ್ತಿಯನ್ನು ಕಬಳಿಸುವುದರಿಂದಲೂ ತಮ್ಮ ಆಸ್ತಿ ಆದಾಯ ಲಾಭಗಳನ್ನು ಹೆಚ್ಚಿಸಿಕೊಂಡಿದ್ದಾರೆಂಬುದು ನಿಜ. ಆದರೆ ಕೃಷಿ ಮತ್ತು ಸಂಬಂಧಿತ ಕ್ಷೇತ್ರದಲ್ಲಿ ಈ ವರ್ಗ ಮರುಹೂಡಿಕೆ ಮಾಡಿರುವುದು ಕಂಡು ಬರುತ್ತದೆ. ಇದು ಕೃಷಿಯಲ್ಲಿ ಯಂತ್ರಗಳ ಬಳಕೆ ಮತ್ತು ಇತರ ಆಧುನೀಕರಣದಿಂದಲೂ ಕಂಡು ಬರುತ್ತದೆ. ಒಟ್ಟಾರೆಯಾಗಿ ನವ–ಉದಾರವಾದಿ ಅವಧಿಯ ವಿವಿಧ ಅವಧಿಯಲ್ಲಿ, ವಿವಿಧ ವರ್ಗಗಳಿಗೆ, ವಿವಿಧ ಪ್ರದೇಶಗಳಲ್ಲಿ ನವ–ಉದಾರವಾದ ಕೃಷಿಯ ಮೇಲೆ ಬೀರುವ ಪರಿಣಾಮಗಳಲ್ಲಿ ಗಮನಾರ್ಹ ವ್ಯತ್ಯಾಸಗಳಿವೆ ಎಂದು ಗುರುತಿಸಬೇಕು ಎಂದು ಪ್ರೊ. ಆತ್ರೇಯ ಒತ್ತಿ ಹೇಳಿದರು. ಹಾಗಾಗಿ, ಸಾಲ ಮನ್ನಾ ಮತ್ತು ಲಾಭದಾಯಕ ಬೆಲೆ ಮಾತ್ರ ಈ ಬಿಕ್ಕಟ್ಟನ್ನು ಪರಿಹರಿಸುವುದಿಲ್ಲ ಎಂದೂ ಅವರು ಹೇಳಿದರು.

ನವ–ಉದಾರವಾದ ಕೃಷಿಯ ಮೇಲೆ ಬೀರುವ ಪರಿಣಾಮವಾಗಿ ಸಣ್ಣ ಪ್ರಮಾಣದ ಕೃಷಿ ಲಾಭದಾಯಕವಾಗಿ ಉಳಿದಿಲ್ಲ. ಭೂಮಿಯ ಕೇಂದ್ರೀಕರಣ ಹೆಚ್ಚುತ್ತಿದೆ. ಭೂಮಿ ಇದ್ದವರೂ ಅದರಲ್ಲಿ ಸರಿಯಾದ ಹೂಡಿಕೆ ಮಾಡಲಾಗುತ್ತಿಲ್ಲ. ಆದ್ದರಿಂದ ಬಹುಸಂಖ್ಯಾತ ಗ್ರಾಮೀಣ ಜನ ಕೂಲಿಕಾರರಾಗುತ್ತಿದ್ದಾರೆ. ಕೃಷಿಯಲ್ಲಿ ಮಾತ್ರ ದುಡಿಯುವ ಕೂಲಿಕಾರರು ಮತ್ತು ಕೃಷಿಯಲ್ಲಿ ಮಾತ್ರ ತೊಡಗಿರುವ ರೈತರ ವರ್ಗ ಮಾಯವಾಗುತ್ತಿದೆ. ಆದ್ದರಿಂದ ಭೂಮಿಯ ಒಡೆತನದ ಪ್ರಶ್ನೆ, ಸಣ್ಣ ಪ್ರಮಾಣದ ರೈತ ಕೃಷಿಯನ್ನು ಲಾಭದಾಯಕಗೊಳಿಸುವ, ಗ್ರಾಮೀಣ ಕೂಲಿಕಾರರ ಆದಾಯ ಹೆಚ್ಚಿಸುವ, ಮೂಲ ಸೌಕರ್ಯ ಒದಗಿಸುವ ಕ್ರಮಗಳ ಸುತ್ತ ಹೊಸ ಹೋರಾಟಗಳನ್ನು ರೂಪಿಸಬೇಕಾಗಿದೆ, ಎಂದು ಪ್ರೊ. ಆತ್ರೇಯ ಹೇಳಿದರು.

ಮೊದಲಿಗೆ ಭಾರತದ ಕೃಷಿ ಬೆಳವಣಿಗೆಯ ಮತ್ತು ಸರಕಾರದ ಕೃಷಿ ನೀತಿಗಳ ದೃಷ್ಟಿಯಿಂದ ಈ ಪ್ರಮುಖ ಅವಧಿಗಳನ್ನು ಗುರುತಿಸಿ ಆ ಅವಧಿಗಳಲ್ಲಿ ಆದ ಪ್ರಮುಖ ಮುನ್ನಡೆ–ಹಿನ್ನಡೆ ಸಮಸ್ಯೆಗಳನ್ನು ವಿವರಿಸಿ ಸುಮಾರು 120 ವರ್ಷಗಳ ಭಾರತದ ಕೃಷಿಯ ಹಕ್ಕಿ ನೋಟವನ್ನು ಪ್ರೊ. ಆತ್ರೇಯ ನೀಡಿದರು. ಅವರು ವಿವರಿಸಿದ ಪ್ರಮುಖ ಅವಧಿಗಳು – ಬ್ರಿಟಿಶ್ ವಸಾಹತುಶಾಹಿಯ ಅಡಿಯಲ್ಲಿನ ಸ್ವಾತಂತ್ರ್ಯ–ಪೂರ್ವದ 5 ದಶಕಗಳು, 1947–1965 ವರೆಗಿನ ಸೀಮಿತ ಭೂಸುಧಾರಣೆ ಕೃಷಿಗೆ ಪ್ರಮುಖ ಸರಕಾರಿ ಬೆಂಬಲದ ನೀತಿಗಳ ಅವಧಿ, 1964–75ರ "ಹಸಿರು ಕ್ರಾಂತಿ"ಯ ಕೃಷಿಯಲ್ಲಿ ಹೊಸ ತಂತ್ರಜ್ಞಾನ ತರುವ ಸ್ವಾವಲಂಬನೆ ಸಾಧಿಸುವ ನೀತಿಗಳ ಅವಧಿ, ಇದರ ಮುಂದುವರಿಕೆಯಾದ 1975–1991 ಅವಧಿ, 1991ರಿಂದ ಈ ವರೆಗಿನ ನವ–ಉದಾರವಾದಿ ನೀತಿಗಳ ಅವಧಿ. ●


➡ ದೇವಿ ಶೆಟ್ಟಿ ಹಾಗೂ ಡಾ. ನರೇಶ್ ಟ್ರೆಹಾನ್ ಅವರು ಈಗ ಈ ಸರ್ಕಾರದ ನೀತಿಯನ್ನು ರೂಪಿಸಲು ಮುಂದಾಗಿದ್ದಾರೆ. ಅದಲ್ಲದೇ ಸರ್ಕಾರದಲ್ಲಿ ಮುಖ್ಯ ಹುದ್ದೆಯಲ್ಲಿದ್ದ ಅಧಿಕಾರಿಗಳು ನಿವೃತ್ತಿ ನಂತರ ಖಾಸಗಿ ಕಂಪನಿಗಳಿಗೆ ಸೇರಿಕೊಂಡು, ಖಾಸಗಿ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ.

70 ರ ದಶಕದ ಆರೋಗ್ಯ ವ್ಯವಸ್ಥೆ ಪಿರಮಿಡ್‌ಗಳಂತೆ ಇದ್ದವು. ಪಿರಮಿಡ್ ಬುಡದಲ್ಲಿರುವ ಕೋಟ್ಯಾಂತರ ಜನರ ಪ್ರಾಥಮಿಕ ಆರೋಗ್ಯ ಸಮಸ್ಯೆಯನ್ನು ಸುಧಾರಿಸುವ ವ್ಯವಸ್ಥೆ, ಮೇಲ್ತುದಿಯಲ್ಲಿರುವ ಕೆಲವರಿಗೆ ತೃತಿಯ ಹಂತದ ಸೇವೆಯ ಅಗತ್ಯತೆ ಇದೆ.

ಆದರೆ ಈಗ ಜಾರಿಗೆ ಬರಲಿರುವ ಆಯುಶ್ಮಾನ್ ಭಾರತ, ಈ ಪಿರಮಿಡ್ಡನ್ನೂ ಬುಡಮೇಲೆ ಮಾಡಲಿದೆ ಹಾಗೂ ಇದರಿಂದಾಗಿ ಹೆಚ್ಚಿನ ಜನರಿಗೆ ಕಡಿಮೆ ಸೇವೆ ದೊರೆಯಲಿದೆ. ಸರ್ಕಾರ ತೃತೀಯ ಹಂತದ ಆರೋಗ್ಯ ಸೇವೆಗಳನ್ನು ನೀಡಲು ಎಲ್ಲ ಪ್ರಯತ್ನವನ್ನು ಮಾಡಲಿದೆ ಹಾಗೂ ಪ್ರಾಥಮಿಕ ಆರೋಗ್ಯ ಸೇವೆಗಳು ಕಡೆಗಣಿಸಲ್ಪಡುತ್ತವೆ. ಈ ಸರ್ಕಾರಿ ವಿಮಾ ಯೋಜನೆ ಕೇಂದ್ರ ಸರ್ಕಾರದೊಂದಿಗೆ ಸೇರಿ ಖಾಸಗಿ ಆಸ್ಪತ್ರೆಗಳಿಗೆ ಉತ್ತೇಜನ ನೀಡಲು ಹೊರಟಿದೆ. ಖಾಸಗೀ ಆಸ್ಪತ್ರೆಗಳು ಶಕ್ತಿಶಾಲಿಗಳಾಗಿವೆ. ಈ ಹಂತದಲ್ಲಿ ಸರ್ಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನೂ ಕಡೆಗಣಿಸಿದೆ. ಅದಕ್ಕೆ ಉದಾಹರಣೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಕಡಿಮೆ ಹಣ ಹೂಡಿಕೆ ಹಾಗೂ ಖಾಸಗಿ ಆಸ್ಪತ್ರೆಗಳು ಆರೋಗ್ಯದ ಜವಾಬ್ದಾರಿ ತೆಗೆದುಕೊಳ್ಳಲಿ ಎಂದು ಅವುಗಳಿಗೆ ಪ್ರೋತ್ಸಾಹ ನೀಡಿವೆ. ಈ ಹಂತದಲ್ಲಿ "ಖಾಸಗೀ ಆಸ್ಪತೆಗಳು ವಿಮಾ ಯೋಜನೆಗೆ ಹೆಚ್ಚಿನ ಹಣಕಾಸು ನೀಡಿ ಇಲ್ಲದಿದ್ದರೆ ನಾವು ಯೋಜನೆಯಲ್ಲಿ ಪಾಲ್ಗೊಳ್ಳುವುದಿಲ್ಲ" ಎಂದು ಹಠ ಹಿಡಿಯುವ ಮಟ್ಟಕ್ಕೆ ಹೋಗಿವೆ. ಈ ಯೋಜನೆ ಯಶಸ್ವಿಯಾಗಲು ಖಾಸಗಿ ಕ್ಷೇತ್ರದ ಪಾಲ್ಗೊಳ್ಳುವಿಕೆ ಅತ್ಯಗತ್ಯ ಎಂದು ಸರ್ಕಾರ ಪರಿಗಣಿಸುತ್ತದೆ.

ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ಅಕ್ರಮವಾಗಿ ಹಣ ತೆಗೆದು ಕೊಂಡರೆ ಅದನ್ನು ಭ್ರಷ್ಟಾಚಾರ ಎಂದು ಗುರುತಿಸುತ್ತೇವೆ. ವ್ಯವಸ್ಥೆಯನ್ನೇ ಬದಲಿಸುವ ನವ ಉದಾರವಾದಿ ನೀತಿಗಳನ್ನು ಭ್ರಷ್ಟಾಚಾರ ಎಂದು ಪರಿಗಣಿಸುವುದಿಲ್ಲ. ಈ ಸನ್ನಿವೇಶದಲ್ಲಿ ಖಾಸಗೀ ಆರೋಗ್ಯ ಸಂಸ್ಥೆಗಳು ಜನಸಾಮಾನ್ಯರ ಲೂಟಿಗೆ ಸಜ್ಜಾಗಿದೆ. ಅನಗತ್ಯ ಪರೀಕ್ಷೆಗಳು, ಅನಗತ್ಯ ಚಿಕಿತ್ಸೆಗಳು, ದುಬಾರಿ ವೆಚ್ಚ ವಿಧಿಸುವುದು ಈ ಯೋಜನೆಯಲ್ಲಿ ಸಾಮಾನ್ಯವಾಗಲಿದೆ.

ನರೇಂದ್ರ ಮೋದಿಯವರು ತಮ್ಮದು ಭ್ರಷ್ಟಾಚಾರ ರಹಿತ ಸರ್ಕಾರ ಎಂದು ಮೇಲೆ ಮೇಲೆ ಹೇಳುತ್ತಾರೆ. ಆದರೆ ಬಹುಶಃ ಈ ವಿಷಯ ಗೊತ್ತಿದ್ದೂ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆಂದು ಅನಿಸುತ್ತದೆ.



ಮೋದಿ ಸರ್ಕಾರದ ಇನ್ನೊಂದು ಗುಣವೆಂದರೆ ಎಲ್ಲವನ್ನು ವೈಭವೀಕರಿಸುವುದು, ಇದ್ದ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆ ತಂದು ಹೊಸ ಹೆಸರು ಕೊಟ್ಟು ವೈಭವೀಕರಿಸುವುದು. ಸುಳ್ಳು ವೈಭವೀಕರಣವನ್ನೂ ಸಾರ್ವಜನಿಕ ನೀತಿ ಎಂದು ಹೇಳಲಾಗುತ್ತಿದೆ.

"ಜಗತ್ತಿನ ಸರ್ಕಾರಿ ಹಣಕಾಸು ಅತಿ ದೊಡ್ಡ ಆರೋಗ್ಯ ಪಾಲನಾ ಕಾರ್ಯಕ್ರಮವೆಂದು" ಬಣ್ಣಿಸುತ್ತಾ ಅರುಣ ಜೇಟ್ಲಿಯವರು ಹೇಳಿದ ಕೂಡಲೇ ಈ ಕಾರ್ಯಕ್ರಮವನ್ನು ಮೋದಿ ಕೇರ್ (ಒಬಾಮಾ ಕೇರ್!) ಎಂದು ಈ ಕಾರ್ಯಕ್ರಮವನ್ನೂ ಕೆಲವು ಮಾಧ್ಯಮಗಳು ಘೋಷಿಸಿಯೇಬಿಟ್ಟವು.

ಆದರೆ ಸರ್ಕಾರ 2016 ರಲ್ಲಿ ಇಂಥದೆ ಒಂದು ನೀತಿಯನ್ನು ತಂದಿತ್ತು. ಆಗ ಸರ್ಕಾರ 1.5 ಲಕ್ಷ ವಿಮಾ ನೀಡುವುದಾಗಿ ಹೇಳಿತು. ಆದರೆ ಈಗ 5 ಲಕ್ಷ ರೂಪಾಯಿಗೆ ಏರಿಸಿದೆ. ಕಾರಣ 2019 ಚುನಾವಣೆಗಳೆ? ಆದರೆ ಇಲ್ಲಿ ಗಮನಿಸಬೇಕಾದ ಒಂದು ವಿಷಯವೆಂದರೆ ಸರ್ಕಾರ 2017–18 ರಲ್ಲಿ RSBY ಗೆ ಮೀಸಲಿಟ್ಟ ಕೇವಲ ಅರ್ಧದಷ್ಟು ಹಣವನ್ನು ಖರ್ಚುಮಾಡಿತ್ತು. ಈ ತರಹದ ವಾಗ್ಡಾಂಭರದ ಮಾತುಗಳಲ್ಲಿ ಎಷ್ಟು ಶಕ್ತಿ ಇದೆ ನೋಡಿ!.

ಆರೋಗ್ಯ ವಿಮೆ ಅಥವಾ ಆರೋಗ್ಯ ರಕ್ಷಣೆ ?

ಇಂದು ಅನೇಕ ವಿಮಾ ಯೋಜನೆಗಳು ಆರೋಗ್ಯ ಸಮಸ್ಯೆಗೆ ಯಾವ ರೀತಿಯ ಪರಿಹಾರ ನೀಡಿಲ್ಲವೆಂಬುದು ವಾಸ್ತವ. ಈ ಯೋಜನೆ ಬಗ್ಗೆ ಇರುವ ಗೊಂದಲ ಹುಟ್ಟಿಸುವ ವಿಷಯಗಳು ಈ ಯೋಜನೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರ ನಿಭಾಯಿಸಲು ತೀರ್ಮಾನಿಸಲಾಗಿದೆ. ಆದರೆ ಯಾವ ರಾಜ್ಯ ಸರ್ಕಾರದೊಂದಿಗೆ ಇವರು ಚರ್ಚಿಸಿದ್ದಾರೆ. ಐಎಂಎ ಜೊತೆಗೆ ಚರ್ಚೆ ಮಹತ್ವದಲವೇ?

ಆಂಧ್ರ ಹಾಗೂ ತಮಿಳುನಾಡಿನಲ್ಲಿ ಈಗಾಗಲೇ ವಿಮಾ ಯೋಜನೆ ಜಾರಿಯಲ್ಲಿದೆ. ಈಗ ಆ ಯೋಜನೆಗಳನ್ನು ನಿಲ್ಲಿಸಲಾಗುತ್ತಿದೆಯೇ? 'ಒಬಾಮಾ ಕೇರ್' ಜಾರಿಗೆ ತರುವುದಕ್ಕಿಂತ ಮೊದಲು ದೇಶದಾದ್ಯಂತ ವ್ಯಾಪಕವಾಗಿ ತಜ್ಞ ಹಾಗೂ ಜನಸಾಮಾನ್ಯರೊಡನೆ ಚರ್ಚೆ ನಡೆಸಲಾಗಿತ್ತು. ಎಲ್ಲ ವಿಷಯಗಳನ್ನು ದಾಖಲಿಸಿ ಸ್ಪಷ್ಟತೆ ನೀಡಲಾಗಿತ್ತು. ಆದರೆ ಈ ಮೋದೀ ಕೇರ್ ಬಗ್ಗೆ ಸಮಾನ ಮಾದರಿಯನ್ನು ಮಾಡಿಲ್ಲ.

"ಈ ವಿಮಾ ಯೋಜನೆ ಹಾಗೂ ಆರೋಗ್ಯ ರಕ್ಷಣೆ ಅಮೇರಿಕಾದ ವಿಧಾನ. ಅದಕ್ಕೆ ಪರ್ಯಾಯವಾದ ಇನ್ನೊಂದು ವ್ಯವಸ್ಥೆಯೆಂದರೆ ಪ್ರಾಥಮಿಕ, ದ್ವಿತಿಯ, ತೃತೀಯ ಹಂತದ ಆರೋಗ್ಯ ಸೇವೆಗಳನ್ನು ಜಾರಿಗೊಳಿಸಿ, ಅದು ಎಲ್ಲರಿಗೂ ದೊರಕುವಂತೆ ಮಾಡುವುದು. ಇದನ್ನು ಯೂರೋಪಿನ ರಾಷ್ಟ್ರಗಳಲ್ಲಿ ಜಾರಿಗೊಳಿಸಲಾಗಿದೆ. ಈ ಸರ್ಕಾರ ಮೊದಲನೆಯ ವ್ಯವಸ್ಥೆಯನ್ನು ಒಪ್ಪಿಕೊಳ್ಳುವಂತಿದೆ ಹಾಗೂ ಅದು ನಮ್ಮಂತಹ ಬಡರಾಷ್ಟ್ರದಲ್ಲಿ ಅದು ಅನಾಹುತ ಉಂಟುಮಾಡಬಹುದಾಗಿದೆ. ಈ ವಿಧಾನದ ಬಗ್ಗೆ ಅನುಮಾನಗಳು ಹಲವಾರು.

ಈ ವಿಮಾ ಯೋಜನೆಯಲ್ಲಿ ಜನರಿಗೆ ಆರೋಗ್ಯ ದೊರಕುವುದರ ಬದಲು ವಿಮಾ ಕಂಪನಿಗಳಿಗೆ ಲಾಭ ತಂದು ಕೊಟ್ಟಾಂತಾಗುತ್ತದೆ. ಈ ತರಹದ ಮೂಲಭೂತ ವಿಷಯಗಳ ಬಗ್ಗೆ ತಿಳವಳಿಕೆ ಇಲ್ಲವೇ ಎಂಬ ಅನುಮಾನ ಬರುತ್ತದೆ. ಈ ವಿಮಾ ಯೋಜನೆಯ ಹಣಕಾಸಿನ ಲೆಕ್ಕಚಾರ ತಪ್ಪಿನಿಂದ ಕೂಡಿದೆ.

ಅದನ್ನು ಜಾರಿಗೊಳಿಸುವ ಮೊದಲೇ ವೈಭವೀಕರಿಸಲು ಹೊರಟಿದೆ. ಅದಲ್ಲದೇ ಈ ವಿಮಾ ಯೋಜನೆ ಶ್ರೀಮಂತ ಖಾಸಗೀ ಆಸ್ಪತ್ರೆಗಳನ್ನೂ ಇನ್ನಷ್ಟು ಶ್ರೀಮಂತಗೊಳಿಸಲು ಹೊರಟಿದೆ. ಆದರೆ ಖಾಸಗೀ ಆಸ್ಪತ್ರೆಗಳು ಕ್ಷೀಣಿಸುತ್ತಿರುವುದನ್ನು ತಡೆಯದಂತಾಗಿದೆ. ಆರೋಗ್ಯ ವಿಮೆ ಬೇಕಾ, ಆರೋಗ್ಯ ರಕ್ಷಣೆ ಬೇಕಾ ಎಂಬ ಪ್ರಶ್ನೆಗೆ ನಾವೆಲ್ಲರೂ ಪರಿಹಾರ ಹುಡುಕಬೇಕಾಗಿದೆ.

ವಿಮಾ ಯೋಜನೆ ಹೇಗಿರಬೇಕು?

ಆರೋಗ್ಯ ಕ್ಷೇತ್ರದಲ್ಲಿ ಪ್ರಾಥಮಿಕ, ದ್ವಿತಿಯ, ತೃತೀಯ ಹಂತದ ಆರೋಗ್ಯ ಸೇವೆಗಳು ಎಲ್ಲರಿಗೂ ದೊರಕುತ್ತಿರಬೇಕು. ಅದರೊಂದಿಗೆ ವಿಮಾ ಯೋಜನೆ ಜಾರಿಗೆ ಬರಬೇಕು. ಅದನ್ನು ಕಡೆಗಣಿಸಿ, ವಿಮಾ ಯೋಜನೆ ತಂದರೆ ಅದು ಫಲಕಾರಿಯಾಗದು. ಸಕಾರವೇ ಕಂತು ತುಂಬಬೇಕು. ಸರಿಯಾದ ಸಮಯಕ್ಕೆ ಜನರಿಗೆ ಹಣಕಾಸಿನ ಪರಿಹಾರ ದೊರಕಿಸಬೇಕು.

ಕೇವಲ 20 ಚಿಕಿತ್ಸಾ ಕ್ರಮಗಳ ಬದಲು ಎಲ್ಲ ತರಹದ ಆರೋಗ್ಯ ಸಮಸ್ಯೆಗಳಿಗೆ ವಿಮೆ ಬರಬೇಕು. ಖಾಸಗೀ ಆಸ್ಪತ್ರೆಗಳು ಬದಲು, ಎಲ್ಲ ಸರ್ಕಾರಿ ಆಸ್ಪತ್ರೆಗಳನ್ನು ಉನ್ನತ ಮಟ್ಟಕೇರಿಸಿ ಅಲ್ಲಿ ವಿಮೆ ಜಾರಿಗೆ ಬರಬೇಕು. ಈ ಬಗ್ಗೆ ಎಲ್ಲರಿಗೂ ಮಾಹಿತಿ ನೀಡಬೇಕು. ಈ ಯೋಜನೆ ಇದ್ದರೂ ಆರೋಗ್ಯ ವ್ಯವಸ್ಥೆಯ ಮೇಲೆ ಯಾವುದೇ ಕೆಟ್ಟ ಪರಿಣಾಮ ಬೀರಬಾರದು. ●



ಈ ಮಧ್ಯಯುಗದ ಬರ್ಬರತೆಯನ್ನು ಸೋಲಿಸಿ
ಹಿಂಸಾಚಾರದ ಪಂಥವನ್ನು ಐಕ್ಯತೆಯಿಂದ ತಡೆದು ನಿಲ್ಲಿಸಿ

ಪುಟ 8 ರಿಂದ

ಸ್ಪಷ್ಟವಾಗಿ ಹೇಳುತ್ತದೆ. ಈ ಉದ್ದೇಶ ಸಾಧನೆಗೆ ಅವರು "ಎಲ್ಲ ರಾಜಕೀಯವನ್ನು ಹಿಂದೂಕರಿಸಿ ಮತ್ತು ಹಿಂದೂತನವನ್ನು ಮಿಲಿಟರೀಕರಿಸಿ" ಎಂಬ ಘೋಷಣೆ ಕೊಟ್ಟರು. ಇದರಿಂದ ಪ್ರೇರಿತರಾದ ಡಾ. ಬಿ.ಎಸ್. ಮೂಂಜೆ, ಆರೆಸ್ಸೆಸ್‌ನ ಸ್ಥಾಪಕ ಡಾ.ಹೆಡ್ಗೆವಾರ್‌ರವರ ಗುರುಗಳು, ಇಟೆಲಿಗೆ ಫ್ಯಾಸಿಸ್ಟ್ ಸರ್ವಾಧಿಕಾರಿ ಮುಸೋಲಿನಿಯನ್ನು ಭೇಟಿಯಾಗಲು ಪ್ರಯಾಣ ಕೈಗೊಂಡರು. ಮಾರ್ಚ್ 19, 1931ರಂದು ಅವರಿಬ್ಬರ ಭೇಟಿ ನಡೆಯಿತು. ಮಾರ್ಚ್ 20ರ ಅವರ ವೈಯಕ್ತಿಕ ದಿನಚರಿಯಲ್ಲಿನ ಟಿಪ್ಪಣಿ ಇಟಾಲಿಯನ್ ಫ್ಯಾಸಿಸಂ ಹೇಗೆ ತನ್ನ ಯುವಜನರನ್ನು (ಗಲಭೆಕೋರರನ್ನು ಎಂದು ಓದಿಕೊಳ್ಳಿ) ಮಿಲಿಟರಿ ರೀತಿಯಲ್ಲಿ ತರಬೇತು ಗೊಳಿಸುತ್ತಿತ್ತು ಎಂಬುದರ ಬಗ್ಗೆ ಅವರ ಆಕರ್ಷಣೆ ಮತ್ತು ಮೆಚ್ಚುಗೆಯನ್ನು ತೋರಿಸುತ್ತದೆ.

1984ರ ಸಿಖ್–ವಿರೋಧಿ ಗಲಭೆಗಳು ಅತಿ ದೊಡ್ಡ ಲಿಂಚಿಂಗ್– ಗೋರಕ್ಷಕರೆನ್ನುವವರು ಸಾಯಬಡಿಯುತ್ತಿರುವುದರ ಬಗ್ಗೆ ಕೇಳಿದಾಗ ಕೇಂದ್ರ ಗೃಹಮಂತ್ರಿಗಳ ಪ್ರತಿಕ್ರಿಯೆ!



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಭಾರತಕ್ಕೆ ಮರಳಿದ ಮೇಲೆ ಡಾ.ಮೂಂಜೆ ನಾಶಿಕ್‌ನಲ್ಲಿ 1935ರಲ್ಲಿ ಸೆಂಟ್ರಲ್ ಹಿಂದು ಮಿಲಿಟರಿ ಎಜುಕೇಶನ್ ಸೊಸೈಟಿ ಎಂಬುದನ್ನು ಸ್ಥಾಪಿಸಿದರು. ಇದು 1937ರಲ್ಲಿ ಸ್ಥಾಪನೆಗೊಂಡ ಭೊಂಸಾಲೆ ಮಿಲಿಟರಿ ಸ್ಕೂಲ್‌ನ ಪೂರ್ವವರ್ತಿ ಸಂಸ್ಥೆಯಾಗಿತ್ತು. ಈ ಹಿಂದೆ ನಡೆಸಿದ ತನಿಖೆಗಳಿಂದಾಗಿ ಅದನ್ನು ಭಯೋತ್ಪಾದನೆಯ ಪಟ್ಟಿಗೆ ಸೇರಿತ್ತು.

ಆರೆಸ್ಸೆಸ್‌ನ ಗುರು ಗೋಲ್ವಾಲ್ಕರ್ 1939ರಲ್ಲಿ ನಾಝೀ ಫ್ಯಾಸಿಸಂ ಅಡಿಯಲ್ಲಿ ಹಿಟ್ಲರ್ ಯೆಹೂದ್ಯರನ್ನು ಸದೆಬಡಿದುದನ್ನು "ಹಿಂದುಸ್ತಾನದಲ್ಲಿರುವ ನಮಗೆ ಕಲಿಯಲು ಮತ್ತು ಅದರಿಂದ ಪ್ರಯೋಜನ ಪಡೆಯಲು ಒಂದು ಒಳ್ಳೆಯ ಪಾಟ" ಎಂದು ಹಾಡಿ ಹೊಗಳಿದ್ದಾರೆ. ಕೆಲವು ವರ್ಷಗಳ ನಂತರ 1970ರಲ್ಲಿ ಅವರು "ಒಟ್ಟಾರೆಯಾಗಿ ಹೇಳುವುದಾದರೆ, ದುಷ್ಟ ಶಕ್ತಿಗಳು(ಹಿಂದೂವೇತರರು ಎಂದು ಓದಿಕೊಳ್ಳಿ) ತರ್ಕ ಮತ್ತು ಸಿಹಿ ಸ್ವಭಾವದ ಭಾಷೆಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ ಎಂಬುದು ಸಾರ್ವತ್ರಿಕ ಅನುಭವದ ಸಂಗತಿ. ಅವರನ್ನು (ಕೇವಲ) ಬಲಪ್ರಯೋಗದಿಂದ ಹತೋಟಿಯಲ್ಲಿಡಬಹುದು" ಎಂದರು.

ಕೋಮುವಾದ ಮತ್ತು ಮೂಲಭೂತವಾದ ಪರಸ್ಪರ ಪೋಷಣೆ ನೀಡುತ್ತವೆ. ತಮ್ಮ ಗುರಿಸಾಧನೆಗೆ ಉಗ್ರ ತರಬೇತಿ ನೀಡುವ ಆರೆಸ್ಸೆಸ್ ಪ್ರಯತ್ನಗಳು ಬಲಪ್ರಯೋಗದಿಂದ ಹತೋಟಿಯಲ್ಲಿಡಲು ದ್ವೇಷ, ಹಿಂಸೆ ಮತ್ತು ಭಯೋತ್ಪಾದನೆಯ ಒಂದು ವಾತಾವರಣವನ್ನು ಸೃಷ್ಟಿಸುವ ಪ್ರಕ್ರಿಯೆಗೆ ನೆರವಾಗುತ್ತವೆ. ಇದು ಸಾಮಾನ್ಯವಾಗಿ ಸ್ಫೋಟಕ ಕೋಮು ದಂಗೆಗಳಿಗೆ ಹಾದಿ ಮಾಡಿಕೊಡುತ್ತದೆ.

ಸ್ವತಂತ್ರ ಭಾರತದಲ್ಲಿನ ಕೋಮು ಗಲಭೆಗಳ ಪ್ರತಿಯೊಂದು ನ್ಯಾಯಾಂಗ ತನಿಖೆಯೂ, 1969ರ ಅಹಮದಾಬಾದ್ ಗಲಭೆಗಳು, 1970ರ ಭಿವಂಡಿ ಜಲಗಾಂವ್ ಮತ್ತು ಮಹಾಡ್ ಗಲಭೆಗಳು, 1971ರಲ್ಲಿ ತೆಲ್ಲಿಚೇರಿಯಲ್ಲಿನ ಗಲಭೆಗಳು, 1979ರ ಜಂಷೇಧ್‌ಪುರ ಗಲಭೆಗಳು, 1982ರ ಕನ್ಯಾಕುಮಾರಿ ಗಲಭೆಗಳು ಇವೆಲ್ಲವುಗಳ ವರದಿಗಳು ಮತ್ತು 1992–93ರ ಮುಂಬೈ ಗಲಭೆಗಳ ಶ್ರೀಕೃಷ್ಣ ಆಯೋಗದ ವರದಿಯಿಂದ ಹಿಡಿದು ರಾಷ್ಟ್ರೀಯ ಮಾನವ ಹಕ್ಕು ಆಯೋಗದಂತಹ ಸಂವಿಧಾನಿಕ ಸಂಸ್ಥೆಗಳ ಹಲವಾರು ವರದಿಗಳು, ಗುಜರಾತಿನ 2002ರ ಸರಕಾರ ಪ್ರಾಯೋಜಿತ ರಾಕ್ಷಸೀ ಕೋಮು ಹತ್ಯಾಕಾಂಡದ ಸ್ವತಂತ್ರ ತನಿಖೆಗಳ ವರೆಗೆ ಎಲ್ಲವೂ ಉದ್ರಿಕ್ತ ವಾತಾವರಣವನ್ನು ನಿರ್ಮಿಸುವಲ್ಲಿ ಮತ್ತು ಅಲ್ಪಸಂಖ್ಯಾತರ ವಿರುದ್ಧ ದಾಳಿಗಳನ್ನು ಎಸಗುವಲ್ಲಿ ಆರೆಸ್ಸೆಸ್‌ನ ಪಾತ್ರವನ್ನು ಹೆಸರು ಹೇಳಿ ದೂಷಿಸಿವೆ. ಈ ಪ್ರತಿಯೊಂದು ಆಯೋಗದ ಮುಖಂಡತ್ವವನ್ನು ನ್ಯಾಯಾಂಗದ ಅತ್ಯುನ್ನತ ಮಟ್ಟದ ಗೌರವಾನ್ವಿತ ಸದಸ್ಯರೇ ವಹಿಸಿದ್ದರು, ಮತ್ತು ಅವರೆಲ್ಲರೂ ಹಿಂದೂಗಳು ಎಂಬುದನ್ನು ಗಮನಿಸಿ! ಆದ್ದರಿಂದ ಇಲ್ಲಿ ಯಾವುದೇ ಪಕ್ಷಪಾತದ ಪ್ರಶ್ನೆ ಉದ್ಭವಿಸುವುದಿಲ್ಲ.

ಹಿಂಸಾಚಾರದ ಪಂಥ

ಈ ಸಂದರ್ಭದಲ್ಲಿ ಭಾರತದ ಮೊದಲ ಉಪಪ್ರಧಾನ ಮಂತ್ರಿ ಮತ್ತು ಗೃಹಮಂತ್ರಿ(ಮತ್ತು ಆರೆಸ್ಸೆಸ್ ಬಿಜೆಪಿ ಇಂದು ತಮ್ಮ ಕೈವಶ ಮಾಡಿಕೊಳ್ಳಬಯಸುತ್ತಿರುವ) ಸರ್ದಾರ್ ವಲ್ಲಭಬಾಯಿ ಪಟೇಲ್ ಮಹಾತ್ಮ ಗಾಂಧಿಯವರ ಹತ್ಯೆಯ ನಂತರ ಏನು ಹೇಳಿದ್ದರೆಂಬುದನ್ನು ನೆನಪಿಸಿಕೊಳ್ಳುವುದು ಅಗತ್ಯವಾಗಿದೆ. ಸರ್ದಾರ್ ಪಟೇಲ್ ಆರೆಸ್ಸೆಸ್ಸನ್ನು ನಿಷೇಧಿಸುವ ಒಂದು ಹೇಳಿಕೆಯನ್ನು ಬರೆದರು. ಅದು ಹೀಗೆ ಹೇಳುತ್ತದೆ:" ಆದರೂ, ಸಂಘ(ಆರೆಸ್ಸೆಸ್)ದ ಆಕ್ಷೇಪಾರ್ಹ ಮತ್ತು ಕೇಡುಂಟುಮಾಡುವ ಚಟುವಟಿಕೆಗಳು ನಿಲ್ಲದೆ ಮುಂದುವರೆದಿವೆ, ಮತ್ತು ಸಂಘದ ಚಟುವಟಿಕೆಗಳಿಂದ ಪ್ರಾಯೋಜಿತವಾದ ಮತ್ತು ಪ್ರೇರಿತವಾಗಿರುವ ಹಿಂಸಾಚಾರದ ಪಂಥ ಹಲವು ಬಲಿಗಳನ್ನು ಪಡೆದಿದೆ. ಅವುಗಳಲ್ಲಿ ತೀರಾ ಇತ್ತೀಚಿನದ್ದು ಮತ್ತು ಅತ್ಯಂತ ಅಮೂಲ್ಯವಾದದ್ದೆಂದರೆ ಸ್ವತಃ ಗಾಂಧೀಜಿಯವರೇ."

ಫೆಬ್ರವರಿ 4, 1948ರ ಈ ಹೇಳಿಕೆಯಲ್ಲಿ ಸರ್ದಾರ್ ಪಟೇಲ್ ಹೇಳುತ್ತಿರುವ ಅಂಶವೆಂದರೆ ಆರೆಸ್ಸೆಸ್ ಮತ್ತು ಅದರ ಸಹಯೋಗಿಗಳು ಒಂದು 'ಹಿಂಸಾಚಾರದ ಪಂಥ'ವನ್ನು ಪ್ರಾಯೋಜಿಸಿದ್ದರು, ಗಾಂಧೀಜಿಯವರದ್ದೂ ಸೇರಿದಂತೆ ಅದಕ್ಕೆ ಹಲವು ಜೀವಗಳು ಬಲಿಯಾದವು ಎಂಬುದು.



4ಕಿ.ಮೀ. ದೂರದ ಆಸ್ಪತ್ರೆಗೆ ಪೋಲೀಸರಿಗೆ 3ಗಂಟೆ
ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಇಂದು ನಮ್ಮ ಗಣತಂತ್ರದ ಜಾತ್ಯತೀತ ಜನವಾದೀ ಬುನಾದಿಯನ್ನು ಪ್ರೀತಿಸುವ ಎಲ್ಲ ಭಾರತೀಯ ದೇಶಪ್ರೇಮಿಗಳು ಐಕ್ಯತೆಯಿಂದ ತಡೆಯದಿದ್ದರೆ, ಇಂತಹ ಹಿಂಸಾಚಾರದ ಪಂಥವನ್ನು ಖಾಸಗಿ ಸೇನೆಗಳು ಆಧರಿಸುವ ಮಟ್ಟದತ್ತ ದೇಶದಲ್ಲಿನ ವಾತಾವರಣ ಬೇಗವಾಗಿ ಅವನತಿಗೊಳ್ಳುತ್ತದೆ. ಹಿಟ್ಲರ್ ಮತ್ತು ಮುಸೊಲಿನಿ ಕಪ್ಪು ಮತ್ತು ಬೂದು ಶರ್ಟ್‌ಗಳ ಮೂಲಕ ಪಾಲನೆ–ಪೋಷಣೆ ಮಾಡಿದ ಫ್ಯಾಸಿಸ್ಟ್ ಗಲಭೆಕೋರರ ಮಾದರಿಯಲ್ಲಿ ಖಾಸಗಿ ಸೇನೆಗಳ ಪೋಷಣೆಗೆ ಮತ್ತಷ್ಟು ಧೈರ್ಯ ತುಂಬುತ್ತದೆ.

ಇಂತಹ ಹಿಂಸಾಚಾರ, ಭಯೋತ್ಪಾದನೆ ಮತ್ತು ಅರಾಜಕತೆ ಹರಡಿದರೆ, ಅದು ನಮ್ಮ ಸಂವಿಧಾನಿಕ ರಚನೆಯ ಬುನಾದಿಗಳನ್ನೇ ಶಿಥಿಲಗೊಳಿಸುತ್ತದೆ. ಆರೆಸ್ಸೆಸ್/ಬಿಜೆಪಿ ಪ್ರಯತ್ನಿಸುತ್ತಿರುವುದು ಇದನ್ನೇ– ಅಂದರೆ ನಮ್ಮ ಸಂವಿಧಾನದ ಜಾತ್ಯತೀತ ಜನವಾದೀ ಗಣತಂತ್ರ ಸ್ವರೂಪವನ್ನು ಶಿಥಿಲಗೊಳಿಸಿ ಭಾರತೀಯ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸಲು ಅನುವು ಮಾಡಿಕೊಡುವುದು. ಬಿಜೆಪಿ ಈ ಗುರಿಸಾಧನೆಗೆಗಾಗಿಯೇ ಇರುವ ಆರೆಸ್ಸೆಸ್‌ನ ರಾಜಕೀಯ ಅಂಗ.

ಈ ಅಪಾಯವನ್ನು ಸೋಲಿಸಬೇಕು. ಭಾರತವನ್ನು ಒಂದು ಉತ್ತಮ ಭವಿಷ್ಯದತ್ತ ಬದಲಿಸಲು ಇಂದು ಅದನ್ನು ಉಳಿಸಿಕೊಳ್ಳಬೇಕಾಗಿದೆ.


"ದಯವಿಟ್ಟು ನನ್ನ ಹೆಸರಲ್ಲಿ ಬೇಡ ಇದೆಲ್ಲಾ.."

ದೇಶಾದ್ಯಂತ ಲಿಂಚಿಂಗ್ ಅಥವ ಸಾಯಬಡಿಯುವ ಪ್ರಕರಣಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಸರಕಾರ ಇಂತಹ ಪ್ರಕರಣಗಳ ದಾಖಲೆಗಳನ್ನು ಇಟ್ಟಿದೆಯೇ ಎಂದು ರಾಜ್ಯಸಭೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸುತ್ತ ಗೃಹ ವ್ಯವಹಾರಗಳ ರಾಜ್ಯಮಂತ್ರಿ ಹನ್ಸ್‌ರಾಜ್ ಆಹಿರ್ ಈ ಬಗ್ಗೆ ಮಾಹಿತಿ ಸರಕಾರದ ಬಳಿಯಿಲ್ಲ, ಏಕೆಂದರೆ ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ(ಎನ್‌ಸಿಆರ್‌ಬಿ) ನಿರ್ದಿಷ್ಟವಾಗಿ ಲಿಂಚಿಂಗ್ ನ ಮಾಹಿತಿ ಸಂಗ್ರಹಿಸುತ್ತಿಲ್ಲ ಎಂದು ಹೇಳಿದರು.

ಆದರೆ ಮಾರ್ಚ್ 2018ರಲ್ಲಿ ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಕೊಟ್ಟಿರುವ ಉತ್ತರದ ಪ್ರಕಾರ 2014ರಿಂದ ಮಾರ್ಚ್ 3, 2018 ರ ವರೆಗೆ 40 ಗುಂಪುಗೂಡಿ ಸಾಯಬಡಿದ ಪ್ರಕರಣಗಳಲ್ಲಿ 45 ಮಂದಿ ಸತ್ತಿದ್ದಾರೆ, ಕನಿಷ್ಟ 217 ಮಂದಿಯನ್ನು ಬಂಧಿಸಲಾಗಿದೆ ಎಂದು ಗೃಹ ಮಂತ್ರಾಲಯ ಸಂಗ್ರಹಿಸಿದ ಮಾಹಿತಿ ತಿಳಿಸುತ್ತದೆ . ಆದರೆ ಈ ಪ್ರಕರಣಗಳಿಗೆ ಕಾರಣವೇನು, ಗೋರಕ್ಷಕ ಕಾವಲುಕೋರತನವೋ, ಮಕ್ಕಳ ಅಪಹರಣದ ವದಂತಿಗಳೋ, ಕೋಮು–ಜಾತಿ ದ್ವೇಷಗಳೋ ಎಂಬ ವಿವರಗಳು ಗೃಹ ಮಂತ್ರಾಲಯದ ಬಳಿ ಇಲ್ಲವಂತೆ.

ಆದರೆ ಇಂಡಿಯಾಸ್ಪೆಂಡ್ ಎಂಬ ವೆಬ್ ತಾಣ ಇಂತಹ ಎರಡು ಮಾಹಿತಿ ನೆಲೆಗಳನ್ನು ಕಲೆ ಹಾಕಿದೆ ಎನ್ನುತ್ತಾರೆ ಅಲಿಸನ್ ಸಾಲ್ಡಾನಾ(ಫ್ಯಾಕ್ಟ್‌ಚೆಕರ್,ಇನ್, ಜುಲೈ 19)

ಅವುಗಳ ಪ್ರಕಾರ, ಈ ಅವಧಿಯಲ್ಲಿ ಗೋವುಗಳಿಗೆ



ಸಂಬಂಧಪಟ್ಟ ದ್ವೇಷ ಹಿಂಸಾಚಾರ ಮತ್ತು ಮಕ್ಕಳನ್ನು ಕದಿಯುವ ವದಂತಿಗಳಿಂದ ಗುಂಪುಗೂಡಿ ಸಾಯಬಡಿದ 80 ಪ್ರಕರಣಗಳು ದಾಖಲಾಗಿವೆ. ಇವುಗಳಲ್ಲಿ 41 ಸಾವುಗಳಾಗಿವೆ.

ಇಂಡಿಯಾಸ್ಪೆಂಡ್ 2010ರಿಂದ ಈ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದು, ಇದುವರೆಗೆ ಗೋಮಾಂಸ, ಗೋವಧೆಯ ಸಂದೇಹದ ಮೇಲೆ ಹಿಂಸಾಚಾರದ 86 ಹಲ್ಲೆಗಳು ಇಂಗ್ಲಿಷ್ ಮಾಧ್ಯಮಗಳಲ್ಲಿ ವರದಿಯಾಗಿವೆ. ಇವುಗಳಲ್ಲಿ 98% ಮೇ 2014ರ ನಂತರ, ಅಂದರೆ ಮೋದಿ ಸರಕಾರ ಬಂದ ಮೇಲೆ ನಡೆದಿರುವಂತದ್ದು.


ಈ ಹಲ್ಲೆಗಳಲ್ಲಿ ಸತ್ತ 33 ಮಂದಿಯಲ್ಲಿ 29, ಅಂದರೆ 88% ಮುಸ್ಲಿಮರು.

ಇವುಗಳಲ್ಲಿ 56% ದಷ್ಟು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ನಡೆದಿವೆ. ಈ ಹಿಂದೆ ಗೋರಕ್ಷಕರೆಂಬವರ ಕಾವಲುಕೋರತನದಿಂದ ಹಿಂಸಾಚಾರಗಳು ನಡೆಯುತ್ತಿದ್ದರೆ, ಇತ್ತೀಚೆಗೆ ಈ ಹಿಂಸಾಚಾರ ತೀವ್ರಗೊಳ್ಳುತ್ತಿದ್ದು ಎಲ್ಲ ಸಣ್ಣ–ದೊಡ್ಡ ಕಾರಣಗಳಿಗೆ ತೀವ್ರ ಹಿಂಸಾಚಾರ ನಡೆಯುತ್ತಿದೆ ಎಂದು ತಿಳಿದುಬಂದಿದೆಯಂತೆ.

2018ರ ಆರಂಭದಿಂದ ಮಕ್ಕಳ ಕಳ್ಳರು ಬಂದಿದ್ದಾರೆಂಬ ವದಂತಿಗಳ ಮೇಲೆ 66 ಗುಂಪುಗೂಡಿ ಬಡಿದಿರುವ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 27 ಮಂದಿ ಸತ್ತಿದ್ದಾರೆ. 2017ರಲ್ಲಿ ಇಂತಹ 8 ಹಲ್ಲೆಗಳಲ್ಲಿ 9 ಜನಸತ್ತಿದ್ದರು.

ಅಂದರೆ ಜನವರಿ 2017ರಿಂದ ಈ 19 ತಿಂಗಳಲ್ಲಿ ಒಟ್ಟು 74 ಗುಂಪು ಹಲ್ಲೆಗಳು ನಡೆದಿದ್ದು 36 ಜನ ಸತ್ತಿದ್ದಾರೆ. ಇದಕ್ಕೆ ಮೊದಲು 2012ರಲ್ಲಷ್ಟೇ ಒಂದು ಪ್ರಕರಣ ದಾಖಲಾಗಿತ್ತು ಎನ್ನಲಾಗಿದೆ.

ಮತ್ತೊಂದು ಮೂಲದ ಪ್ರಕಾರ, 2016ರಿಂದ ಇದುವರೆಗೆ 140 ಕಾವಲುಕೋರತನದ ಪ್ರಕರಣಗಳು ನಡೆದಿದ್ದು, ಅದರಲ್ಲಿ 125 ಬಿಜೆಪಿ ಆಳ್ವಿಕೆಯ 14 ರಾಜ್ಯಗಳಿಲ್ಲಿ ನಡೆದಿವೆ. ಈ ರಾಜ್ಯಗಳ ಬಿಜೆಪಿ ಮುಖಂಡರು ಇಂತಹ ಪ್ರಕರಣಗಳಲ್ಲಿ ಆಪಾದಿತರನ್ನು ಸಮರ್ಥಿಸಿಕೊಂಡಿರುವದು ಈಗ ಸಾಮಾನ್ಯ ಸುದ್ದಿಯಾಗುತ್ತಿದೆ.





ವಿಷಮ ಪರಿಸ್ಥಿತಿಯಲ್ಲಿ ದೇಶದ ಅರ್ಥವ್ಯವಸ್ಥೆ

ಹೆಡೆ ಬಿಚ್ಚಿದ ನವ–ಉದಾರವಾದವನ್ನು ನಾವು ಕಾಣಲಿದ್ದೇವೆ



ಕೈಗಾರಿಕಾ ವಲಯದ ಸ್ಥಗಿತತೆ, ಹಣದುಬ್ಬರ ಮತ್ತು ವಿದೇಶ ವ್ಯಾಪಾರದಲ್ಲಿ ಹೆಚ್ಚುತ್ತಿರುವ ಕೊರತೆ, ಈ ಮೂರೂ ಒಮ್ಮೆಲೇ ಮೇಳೈಸಿರುವ ಅಸಾಧಾರಣ ಪರಿಸ್ಥಿತಿ ದೇಶದಲ್ಲಿದೆ. ಮೇಲ್ನೋಟದಲ್ಲಿ, ತೈಲ ಬೆಲೆ ಏರಿಕೆಯ ಕಾರಣದಿಂದಾಗಿಯೇ ಈ ಮೂರೂ ಸಮಸ್ಯೆಗಳು ಕಾಣಿಸಿಕೊಂಡಿವೆ ಎಂದು ಅನ್ನಿಸಬಹುದು.. ಆದರೆ, ಈ ಗ್ರಹಿಕೆ ತಪ್ಪು. ಒಂದು ಬಹಳ ಗುರುತರವಾದ ಬಿಕ್ಕಟ್ಟು ದೇಶದ ಅರ್ಥವ್ಯವಸ್ಥೆಯನ್ನು ಈಗ ಪೀಡಿಸುತ್ತಿರುವ ಸಂದರ್ಭದಲ್ಲಿ, ಹಣಕಾಸು ಬಂಡವಾಳವು ಅರ್ಥವ್ಯವಸ್ಥೆಗೆ ಬೆನ್ನು ತೋರಿಸಿ ಓಡಿಹೋಗುತ್ತಿರುವ ಸಂದರ್ಭದಲ್ಲಿ, ಕಾರ್ಮಿಕರಿಂದ, ರೈತರಿಂದ ಮತ್ತು ಕಿರು ಉತ್ಪಾದಕರಿಂದ ಅವರಿಗೆ ನ್ಯಾಯಯುತವಾಗಿ ದಕ್ಕಬೇಕಾದುದನ್ನು ಬಲವಂತವಾಗಿ ಕಿತ್ತುಕೊಳ್ಳುವ ಕ್ರಮ ಬಹಳ ಪಟ್ಟು ಹೆಚ್ಚುತ್ತದೆ. ಹೆಡೆ ಬಿಚ್ಚಿದ ನವ–ಉದಾರವಾದವನ್ನು ನಾವು ಕಾಣಲಿದ್ದೇವೆ.

— ಪ್ರೊ. ಪ್ರಭಾತ್ ಪಟ್ನಾಯಕ್ — ಅನು:ಕೆ.ಎಂ.ನಾಗರಾಜ್

ದೇಶದ ಅರ್ಥವ್ಯವಸ್ಥೆ ನೆಲಕಚ್ಚಲು ಕಾರಣವಾದ ಮೂರು ಅಂಶಗಳ ಬಗ್ಗೆ ಇತ್ತೀಚೆಗೆ ಪತ್ರಿಕೆಗಳಲ್ಲಿ ತಲೆಬರಹದ ಲೇಖನಗಳು ಪ್ರಕಟವಾಗಿವೆ. ಮೊದಲನೆಯ ಅಂಶ, ಹಣದುಬ್ಬರಕ್ಕೆ (ಅಂದರೆ, ಬೆಲೆ ಏರಿಕೆಗೆ) ಸಂಬಂಧಿಸಿದೆ. ಹಿಂದಿನ ವರ್ಷದ ಜೂನ್ ತಿಂಗಳಲ್ಲಿದ್ದ ಬೆಲೆಗಳ ಮಟ್ಟಕ್ಕೆ ಹೋಲಿಸಿದರೆ, ಈ ವರ್ಷದ ಜೂನ್ ತಿಂಗಳಲ್ಲಿ ಸಗಟು ವ್ಯಾಪಾರ ಬೆಲೆ ಸೂಚ್ಯಂಕದಲ್ಲಿ 5.7% ಏರಿಕೆಯಾಗಿದೆ. ಏರಿಕೆಯ ಲೆಕ್ಕದಲ್ಲಿ, ಇದು, 2018 ಡಿಸೆಂಬರ್ ನಂತರದ ಅವಧಿಯಲ್ಲಿ ಅತಿ ಹೆಚ್ಚಿನದು. ಎರಡನೆಯ ಅಂಶ, ರಫ್ತಿಗಿಂತ ಹೆಚ್ಚಿನ ಆಮದುಗಳಿಂದಾಗಿ ವಿದೇಶ ವ್ಯಾಪಾರಗಳಲ್ಲಿ ಕೊರತೆಯ ಪ್ರಮಾಣ ಏರುತ್ತಿರುವ ಸಮಸ್ಯೆಗೆ ಸಂಬಂಧಿಸಿದೆ: ಈ ವರ್ಷದ ಜೂನ್ ತಿಂಗಳಲ್ಲಿ ಈ ಕೊರತೆಯ ಪ್ರಮಾಣ 16.6 ಬಿಲಿಯನ್ ಡಾಲರ್ ಇತ್ತು. ಇದು, ಕಳೆದ ಐದು ವರ್ಷಗಳ ಯಾವುದೇ ತಿಂಗಳಿನಲ್ಲಿದ್ದ ಕೊರತೆಗಿಂತ ದೊಡ್ಡದು. ಮೂರನೆಯ ಅಂಶ, ತಳ ಊರುತ್ತಿರುವ ಕೈಗಾರಿಕಾ ಸ್ಥಗಿತತೆಗೆ ಸಂಬಂಧಿಸಿದೆ: ಕೈಗಾರಿಕಾ ಉತ್ಪಾದನಾ ಸೂಚ್ಯಂಕದ ಪ್ರಕಾರ, ಕಾರ್ಖಾನೆಗಳ ಉತ್ಪತ್ತಿ ದರ ಈ ವರ್ಷದ ಮೇ ತಿಂಗಳಲ್ಲಿ ಕೇವಲ 3.2% ಇತ್ತು. ಇದು, ಕಳೆದ ಏಳು ತಿಂಗಳಿನಲ್ಲಿ ಅತಿ ಕಡೆಮೆಯದ್ದು ಮತ್ತು ಅಕ್ಟೋಬರ್ 2017ರಲ್ಲಿದ್ದ 1.8% ಗಿಂತ ಮೇಲಿದೆ.

ಕೈಗಾರಿಕಾ ಕ್ಷೇತ್ರದಲ್ಲಿ, ತಯಾರಿಕಾ ವಲಯದ ಸಾಧನೆ ತೀರಾ ಕಳಪೆಯಾಗಿದೆ: ಹಿಂದಿನ ವರ್ಷದ ಮೇ ತಿಂಗಳ ಬೆಳವಣಿಗೆಯ ಮಟ್ಟಕ್ಕೆ ಹೋಲಿಸಿದರೆ, ಈ ವರ್ಷದ ಮೇ ತಿಂಗಳಲ್ಲಿ 2.8% ಬೆಳವಣಿಗೆಯಾಗಿದೆ. ಬಹಳ ಸಮಯದಿಂದಲೂ ಮನೆಮಾಡಿದ್ದ ಸ್ಥಗಿತತೆಯಿಂದ ಕೊಡವಿಕೊಂಡ ಕೈಗಾರಿಕೆಗಳು ಇತ್ತೀಚಿನ ತಿಂಗಳುಗಳಲ್ಲಿ ತೋರುತ್ತಿದ್ದ ಸ್ವಲ್ಪ ಮಟ್ಟಿನ ಚೇತರಿಕೆ ಈಗ ಇಲ್ಲವಾಗುತ್ತಿದೆ. ಈ ಮಾತು ಕಾರ್ಖಾನೆಗಳಿಗೆ ಮಾತ್ರ ಅನ್ವಯಿಸುತ್ತದೆ. ಆದರೆ, ನೋಟು ರದ್ದತಿ ಮತ್ತು ಜಿಎಸ್‌ಟಿಗಳ ಹಾವಳಿಗೆ ಬಲಿಯಾದ "ಅನೌಪಚಾರಿಕ" ಕೈಗಾರಿಕಾ ವಲಯದ ಪರಿಸ್ಥಿತಿಯನ್ನು ಗಮನಿಸಿದರೆ, ಕೈಗಾರಿಕಾ ವಲಯದ ಸ್ಥಗಿತತೆ ಸ್ಪಷ್ಟವಾಗಿ ಗೋಚರಿಸುತ್ತದೆ.

ಕೈಗಾರಿಕಾ ವಲಯದ ಸ್ಥಗಿತತೆ, ಹಣದುಬ್ಬರ ಮತ್ತು ವಿದೇಶ ವ್ಯಾಪಾರದಲ್ಲಿ ಹೆಚ್ಚುತ್ತಿರುವ ಕೊರತೆ, ಈ ಮೂರೂ ಒಮ್ಮೆಲೇ ಮೇಳೈಸಿರುವ ಅಸಾಧಾರಣ ಪರಿಸ್ಥಿತಿ ದೇಶದಲ್ಲಿದೆ. ಮೇಲ್ನೋಟದಲ್ಲಿ, ತೈಲ ಬೆಲೆ ಏರಿಕೆಯ ಕಾರಣದಿಂದಾಗಿಯೇ ಈ ಮೂರೂ ಸಮಸ್ಯೆಗಳು ಕಾಣಿಸಿಕೊಂಡಿವೆ ಎಂದು ಅನ್ನಿಸಬಹುದು. ತೈಲ ಬೆಲೆ ಏರಿಕೆಯಿಂದಾಗಿಯೇ ವಿದೇಶ ವ್ಯಾಪಾರದ ಕೊರತೆ ಏರುತ್ತಿದೆ; ಅದರಿಂದಾಗಿಯೇ ಹಣದುಬ್ಬರದ ದರ ಏರುತ್ತಿದೆ; ಅದರ ಪರಿಣಾಮದಿಂದಾಗಿ ಜನರಲ್ಲಿ ಕೊಳ್ಳುವ ಶಕ್ತಿ ಕುಗ್ಗಿದೆ; ಅದರಿಂದಾಗಿ ಕೈಗಾರಿಕಾ ಉತ್ಪನ್ನಗಳಿಗೆ ಬೇಡಿಕೆ ಇಳಿದಿದೆ; ಹಾಗಾಗಿ ಕೈಗಾರಿಕಾ ಉತ್ಪತ್ತಿ ಇಳಿದಿದೆ ಎಂಬುದಾಗಿ ವಾದ ಮಂಡಿಸಲಾಗುತ್ತಿದೆ.

ಆದರೆ, ಈ ಗ್ರಹಿಕೆ ತಪ್ಪು. ಏಕೆಂದರೆ, ಕೈಗಾರಿಕಾ ಸ್ಥಗಿತತೆ ಬಹಳ ಸಮಯದ ಹಿಂದೆಯೇ ಕಾಣಿಸಿಕೊಂಡಿತ್ತು. ಹಿಂದಿನ ವರ್ಷದ ಮೇ ತಿಂಗಳ ಕೈಗಾರಿಕಾ ಉತ್ಪಾದನಾ ಮಟ್ಟಕ್ಕೆ ಹೋಲಿಸಿದರೆ, ಅದರ ಬೆಳವಣಿಗೆಯ ದರ ಈ ವರ್ಷದ ಮೇ 2017ರಲ್ಲಿ ಕೇವಲ 2.6% ಇತ್ತು. ಜೂನ್ 2017ರಲ್ಲಿ 3.1% ಇತ್ತು. ಕಳೆದ ಕೆಲವು ತಿಂಗಳುಗಳ ಹಿಂದೆ ನೆಲ ಕಚ್ಚಿದ್ದ ಕೈಗಾರಿಕಾ ಉತ್ಪಾದನಾ ದರ ಇತ್ತೀಚೆಗೆ ಚೇತರಿಕೆಯ ಹಾದಿಯಲ್ಲಿತ್ತು. ಈಗ ಅದೂ ಇಲ್ಲ ಎನ್ನುವಂತಾಗಿದೆ. ಅದೇ ರೀತಿಯಲ್ಲಿ, ಪಾವತಿ ಶೇಷ(ಬ್ಯಾಲನ್ಸ್ ಆಫ್ ಪೇಮೆಂಟ್ಸ್) ಅಥವಾ ವಿದೇಶಿ ವ್ಯಾಪಾರದ ಶಿಲ್ಕು ಪಾವತಿಯ ಸಮಸ್ಯೆಯೂ ಬಿಗಡಾಯಿಸುತ್ತಿದೆ. ಅಮೇರಿಕಾದಲ್ಲಿ ಬಡ್ಡಿ ದರ ಏರಿಸಿರುವ ಕಾರಣದಿಂದಾಗಿ ಡಾಲರ್ ಎದುರಿನಲ್ಲಿ ರೂಪಾಯಿ ವಿನಿಮಯ ದರ ಬಹಳ ಸಮಯದಿಂದಲೂ ಇಳಿಯುತ್ತಲೇ ಇದೆ. ಸುಮಾರು ಎರಡು ವರ್ಷದ ಹಿಂದಿನವರೆಗೆ, ಅನೇಕ ವರ್ಷಗಳ ಕಾಲ, ಅಮೇರಿಕಾದಲ್ಲಿ ಹತ್ತಿರ ಹತ್ತಿರ 0% ಬಡ್ಡಿದರ ಇತ್ತು. ಆಗ, ಭಾರತದಂತಹ ದೇಶಗಳಿಗೆ ಡಾಲರ್ ಹೇರಳವಾಗಿ ಹರಿಯುತ್ತಿತ್ತು. ಏಕೆಂದರೆ, ಇಲ್ಲಿ ಬಡ್ಡಿ ದರ ಉನ್ನತ ಮಟ್ಟದಲ್ಲಿತ್ತು. ಈ ವಿದ್ಯಮಾನದಿಂದಾಗಿ, ನಮ್ಮ ಚಾಲ್ತಿ ಖಾತೆಯ ಕೊರತೆ ನಿಭಾಯಿಸುವುದು ಸುಲಭವಾಗಿತ್ತು. ಮಿಗಿಲಾಗಿ, ವಿದೇಶಿ ವಿನಿಮಯ ಮೀಸಲು ಅಂದರೆ ಡಾಲರ್ ಸಂಗ್ರಹ ತುಂಬಿಕೊಂಡಿತ್ತು.

ಈಗ ಪರಿಸ್ಥಿತಿ ತಿರುಗು ಮುರುಗಾಗಿದೆ. ಕಳೆದ ಎರಡು ವರ್ಷಗಳಲ್ಲಿ ಅಮೇರಿಕಾದಲ್ಲಿ ಬಡ್ಡಿ ದರಗಳು ಏಳು ಬಾರಿ ಏರಿಕೆಯಾಗಿವೆ. ಪರಿಣಾಮವಾಗಿ, ವಿದೇಶದಿಂದ ಬಂದ ಹಣ ಹೊರ ಹರಿಯಲಾರಂಭಿಸಿತು. ಅಲ್ಲಿ ಈಗಿರುವ 2% ಬಡ್ಡಿ ದರ ಇನ್ನೂ ಮೇಲಕ್ಕೆ ಏರುವ ನಿರೀಕ್ಷೆ ಇರುವುದರಿಂದ ವಿದೇಶಿ ಹಣದ ಹೊರ ಹರಿವು ಹೆಚ್ಚುತ್ತಲೇ ಇದೆ. ಈ ಕಾರಣದಿಂದಾಗಿ, ಡಾಲರ್ ಎದುರು ರೂಪಾಯಿಯ ಬೆಲೆ ಒತ್ತಡಕ್ಕೊಳಗಾಗಿದೆ. ರೂಪಾಯಿ ಬೆಲೆ ಇಳಿಯುತ್ತಿದೆ. ಡಾಲರ್ ಸಂಗ್ರಹದ ಮೂಲಕ ಈ ಒತ್ತಡವನ್ನು ತಡೆಯುವ ರಿಸರ್ವ್ ಬ್ಯಾಂಕಿನ ಪ್ರಯತ್ನಗಳು ನಿರೀಕ್ಷಿತ ಫಲ ಕೊಡುತ್ತಿಲ್ಲ. ರೂಪಾಯಿಯ ಬೆಲೆಯ ಮೇಲೆ ಡಾಲರ್‌ನ ಒತ್ತಡ ಬೀಳುತ್ತಿರುವ ಕಾರಣದಿಂದಾಗಿ, ರೂಪಾಯಿಯ ಆಂತರಿಕ ಬೆಲೆಗಳ ಮೇಲೂ ಒತ್ತಡ ಬೀಳುತ್ತಿದೆ. ಉತ್ಪಾದನೆಗೆ ಬೇಕಾಗುವ ಕಚ್ಚಾ ಪದಾರ್ಥಗಳ ಆಮದು ಬೆಲೆಗಳು ಏರುತ್ತಿವೆ. ಅದಾಗಲೇ ಕೈಗಾರಿಕಾ ಸ್ಥಗಿತತೆ ಹಾಗೂ ಪಾವತಿ ಶೇಷ ಸಮಸ್ಯೆ ಹಾಗೂ ಉಲ್ಬಣಗೊಳ್ಳುತ್ತಿದ್ದ ಹಣದುಬ್ಬರದ ಸಮಸ್ಯೆಗಳಿಂದ ಬಳಲುತ್ತಿದ್ದ ಅರ್ಥವ್ಯವಸ್ಥೆಯ ಪರಿಸ್ಥಿತಿಯನ್ನು, ತೈಲ ಬೆಲೆಗಳ ಏರಿಕೆಯು ಮತ್ತಷ್ಟು ಜಟಿಲಗೊಳಿಸಿದೆ.

ಸರ್ಕಾರದ–ಪರ ವಕ್ತಾರರು ಬಹಳ ಹುಮ್ಮಸ್ಸಿನಿಂದ ಭಾರತ ಮತ್ತು ಚೀನಾ ದೇಶಗಳ ನಡುವೆ ಹೋಲಿಕೆ ಮಾಡುತ್ತಾರೆ. ಇತ್ತೀಚೆಗೆ, ಭಾರತದ ಬೆಳವಣಿಗೆ ದರ ಚೀನಾದ ಬೆಳವಣಿಗೆ ದರಕ್ಕಿಂತಲೂ ಅಧಿಕವಾಗಿದೆ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಆದರೆ, ಈ ಎರಡು ದೇಶಗಳ ಪರಿಸ್ಥಿತಿಗಳಲ್ಲಿ ಒಂದು ಮೂಲಭೂತ ವ್ಯತ್ಯಾಸವಿದೆ. ಅವರ ಚಾಲ್ತಿ ಖಾತೆ ಧನಾತ್ಮಕವಾಗಿದೆ. ಅಂದರೆ, ಅವರ ಆಮದುಗಳಿಗಿಂತ ರಫ್ತುಗಳು ಅಧಿಕವಾಗಿರುವುದರಿಂದ ಅವರ ಗಳಿಕೆ ಹೆಚ್ಚಿಗೆ ಇದೆ. (ಕಳೆದ ಮೂವತ್ತು ವರ್ಷಗಳಿಂದಲೂ ಅವರ ಗಳಿಕೆ ಹೆಚ್ಚುತ್ತಲೇ ಇದೆ). ಆದರೆ, ನಮ್ಮ ಚಾಲ್ತಿ ಖಾತೆ ಬಹಳ ವರ್ಷಗಳಿಂದಲೂ ಋಣಾತ್ಮಕವಾಗಿದೆ. ಹಾಗಾಗಿ, ಯಾವ ರೀತಿಯಲ್ಲಾದರೂ ಸರಿಯೇ, ಬಂಡವಾಳವನ್ನು ಆಕರ್ಷಿಸಲೇಬೇಕು ಎಂಬ ಚಿಂತೆ ಚೀನಾ ದೇಶಕ್ಕಿಲ್ಲ. ಆದರೆ, ಯಾವ ರೀತಿಯಲ್ಲಾದರೂ ಸರಿಯೇ, ಬಂಡವಾಳವನ್ನು ಆಕರ್ಷಿಸಲೇಬೇಕು ಎಂಬ ಚಿಂತೆ ನಮ್ಮ ದೇಶಕ್ಕಿದೆ. ಅಮೇರಿಕಾದಲ್ಲಿ ಹತ್ತಿರ ಹತ್ತಿರ 0% ಬಡ್ಡಿ ದರ ಇದ್ದಾಗ ನಮಗೆ ಈ ಚಿಂತೆ ಇರಲಿಲ್ಲ. ಅಲ್ಲಿ ಬಡ್ಡಿ ದರ ಏರಿಕೆಯಾಗಿರುವುದರಿಂದ, ಈ ಚಿಂತೆ ದೇಶವನ್ನು ಹಗೆ ತೀರಿಸಿಕೊಳ್ಳುವ ರೀತಿಯಲ್ಲಿ ಕಾಡುತ್ತಿದೆ.

ಪಾವತಿ ಶೇಷ ಅಂದರೆ, ವಿದೇಶಿ ವ್ಯಾಪಾರದ ಶಿಲ್ಕು ಪಾವತಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು ಎಂದಾದರೆ, ಜಾಗತಿಕ ಹಣಕಾಸು ಬಂಡವಾಳವು ಹೂಡಿಕೆ ಮಾಡುವಂತೆ ಅದನ್ನು ಆಕರ್ಷಿಸುವ ಸಲುವಾಗಿ ಬಡ್ಡಿ ದರಗಳನ್ನು ಇನ್ನೂ ಹೆಚ್ಚಿನ ಮಟ್ಟಕ್ಕೆ ಏರಿಸಬೇಕಾಗುತ್ತದೆ. ಸರ್ಕಾರದ ಎಲ್ಲಾ ಖರ್ಚುಗಳನ್ನೂ ಕಡಿತಗೊಳಿಸಿ, ಎಲ್ಲರಿಗೂ ಮತ್ತು ಎಲ್ಲದಕ್ಕೂ ಅನ್ವಯವಾಗುವ "ಮಿತವ್ಯಯ" ನೀತಿಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಎಲ್ಲ ಕ್ರಮಗಳು ಅರ್ಥವ್ಯವಸ್ಥೆಯ ಸ್ಥಗಿತತೆಯನ್ನು ಹೆಚ್ಚಿಸುತ್ತವೆ, ಪರಿಣಾಮವಾಗಿ, ಬಡಜನತೆಯ ಸಂಕಷ್ಟಗಳು ಮತ್ತಷ್ಟು ಹೆಚ್ಚುತ್ತವೆ.

ಅದೇ ಸಮಯದಲ್ಲಿ, ಈ ಕ್ರಮಗಳು ಹಣದುಬ್ಬರದ ಮೇಲೆ ಬೀರುವ ಪರಿಣಾಮಗಳು ನಗಣ್ಯವಾಗುತ್ತವೆ. ಏಕೆಂದರೆ, ಸರ್ಕಾರವೇ ಹೇಳುವ ಪ್ರಕಾರ, ಸಧ್ಯದ ಹಣದುಬ್ಬರವು ಬೆಲೆ–ತಳ್ಳು ರೀತಿಯದ್ದು ಮತ್ತು ಅದು ವೇಗ ಪಡೆಯಲು ತೈಲ ಬೆಲೆಗಳ ಹೆಚ್ಚಳವೇ ಕಾರಣ. ತೈಲ ಬೆಲೆಗಳು ಏರು ಗತಿಯಲ್ಲಿರುವಾಗ (ಒಂದು ಬ್ಯಾರೆಲ್ ತೈಲದ ಬೆಲೆ 100ಡಾಲರ್ ವರೆಗೂ ಏರಬಹುದು ಎಂದು ಸಾಮಾನ್ಯವಾಗಿ ಎಲ್ಲರೂ ಭಾವಿಸುತ್ತಾರೆ) ಹೆಚ್ಚಳದ ಹೊರೆಯನ್ನು ಅದರ ಚಿಲ್ಲರೆ ಬೆಲೆ ಏರಿಸುವ ಮೂಲಕ ಜನಸಾಮಾನ್ಯರಿಗೆ ವರ್ಗಾಯಿಸಲಾಗುತ್ತದೆ. ಇದು, ಸರ್ಕಾರ ಈಗ ಅನುಸರಿಸುತ್ತಿರುವ ನೀತಿ. ಹಾಗಾಗಿ, ಉಳಿದ ಅಂಶಗಳು ಇದ್ದ ಹಾಗೆಯೇ ಇದ್ದರೆ, ಹಣದುಬ್ಬರದ ತೀವ್ರತೆ ಕಡಿಮೆಯಾಗಲು ಕಾರಣವೇ ಇಲ್ಲ.

ಹೆಚ್ಚಿನ ದರದಲ್ಲಿ ಆಮದು ಮಾಡಿಕೊಂಡ ಕಚ್ಚಾ ತೈಲದ ಹೊರೆಯನ್ನು ಜನಸಾಮಾನ್ಯರಿಗೆ ವರ್ಗಾಯಿಸಬಾರದು ಎಂದಾದರೆ, ಸರ್ಕಾರವು ಬೇರೆ ವಿಧಾನಗಳ ಮೂಲಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಬೇಕಾಗುತ್ತದೆ. ಅಂತಹ ವಿಧಾನಗಳು ಹಣದುಬ್ಬರ ಉಂಟಾಗದ ರೀತಿಯ ವಿಧಾನಗಳಾಗಬೇಕೆಂದರೆ, ನೇರ ತೆರಿಗೆ ವಿಧಿಸುವ ಪ್ರಮಾಣವನ್ನು ಹೆಚ್ಚಿಸಬೇಕು ಅಥವಾ ಸಾಲ ಎತ್ತಬೇಕು – ಇದು ವಿತ್ತೀಯ ಕೊರತೆ. ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಿಸಿಕೊಳ್ಳುವ ಸಲುವಾಗಿ ಇಂತಹ ವಿಧಾನಗಳ ಬಳಕೆಯನ್ನು ಹಣಕಾಸು ಬಂಡವಾಳವು ಅನಿಷ್ಟವೆಂದು ಭಾವಿಸುತ್ತದೆ. ಆದ್ದರಿಂದ, ವಿದೇಶಿ ವ್ಯಾಪಾರದ ಶಿಲ್ಕು ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕು ಎಂದಾದರೆ, ಹಣಕಾಸು ಬಂಡವಾಳವನ್ನು ಓಲೈಸಬೇಕಾಗುತ್ತದೆ. ಹಾಗಾಗಿ, ಉಳಿದ ಅಂಶಗಳು ಇದ್ದ ಹಾಗೆಯೇ ಇದ್ದರೆ, ತೈಲ ಬೆಲೆಗಳ ಹೆಚ್ಚಳದಿಂದ ಉಂಟಾಗುವ ಬೆಲೆ–ತಳ್ಳು ರೀತಿಯ ಹಣದುಬ್ಬರವನ್ನು, ಸರ್ಕಾರದ ಖರ್ಚುಗಳ ಕಡಿತ ಮತ್ತು "ಮಿತವ್ಯಯ" ನೀತಿಗಳ ಅನುಸರಣೆಯ ಮೂಲಕ ನಿಯಂತ್ರಿಸಲಾಗದು.

ಇಂತಹ ಪರಿಸ್ಥಿತಿಯನ್ನು ನಿಭಾಯಿಸಲು, ಉಳಿದ ಅಂಶಗಳು ಇದ್ದ ಹಾಗೆಯೇ ಇರದಂತೆ ನೋಡಿಕೊಳ್ಳಬೇಕಾಗುತ್ತದೆ. ಅಂದರೆ, ಬೆಲೆ–ತಳ್ಳು ರೀತಿಯ ಹಣದುಬ್ಬವನ್ನು ಅಂಕೆಯಲ್ಲಿಡುವ ಸಲುವಾಗಿ, ಕೂಲಿ ಅಥವಾ ವೇತನಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಅಂದರೆ, ಬೆಲೆ ಏರಿಕೆಯಿಂದ ದುಡಿಯುವ ಜನತೆಗೆ ಉಂಟಾದ ನಷ್ಟಕ್ಕೆ ಪರಿಹಾರ ನಿರಾಕರಿಸಲಾಗುತ್ತದೆ. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ, ತೈಲ ಬೆಲೆಗಳ ಏರಿಕೆಯಿಂದ ಉಂಟಾದ ಬೆಲೆ–ತಳ್ಳು ರೀತಿಯ ಹಣದುಬ್ಬವನ್ನು ನಿಯಂತ್ರಿಸಲು, ಸೇವಾ ವಲಯದ ಉದ್ಯೋಗಿಗಳ ಸಂಬಳ ಮತ್ತು ಶ್ರಮಜೀವಿಗಳ ಕೂಲಿಯಲ್ಲಿ ಇಳಿಕೆ ಮಾಡಲಾಗುತ್ತದೆ. ಅವರು ಹಿಂಡಿದ ಹಿಪ್ಪೆಯಾಗುತ್ತಾರೆ..

ನವ–ಉದಾರ ನೀತಿಗಳ ಆಳ್ವಿಕೆಗೆ ಒಳಪಟ್ಟ ಭಾರತದ ಅರ್ಥವ್ಯವಸ್ಥೆಯನ್ನು, ಬರುವ ದಿನಗಳಲ್ಲಿ, ಈ ರೀತಿಯ ಮೂಲಭೂತ ಬದಲಾವಣೆಗಳಿಗೆ ಒಳಪಡಿಸಲಾಗುವದು: ಕಣ್ಣಿಗೆ ಕಾಣುವಂತಹ ಬಿಕ್ಕಟ್ಟುಗಳಿಲ್ಲದ ಸಂದರ್ಭಗಳಲ್ಲೂ, ಭಾರತದ ನವ–ಉದಾರವಾದವು ಕಾರ್ಮಿಕರಿಗೆ, ರೈತರಿಗೆ ಮತ್ತು ಉತ್ಪಾದಕರಿಗೆ ದಕ್ಕಬೇಕಾದುದನ್ನು ಬಲವಂತವಾಗಿ ಕಿತ್ತುಕೊಂಡಿದೆ. ಒಂದು ಬಹಳ ಗುರುತರವಾದ ಬಿಕ್ಕಟ್ಟು ದೇಶದ ಅರ್ಥವ್ಯವಸ್ಥೆಯನ್ನು ಈಗ ಪೀಡಿಸುತ್ತಿರುವ ಸಂದರ್ಭದಲ್ಲಿ, ಹಣಕಾಸು ಬಂಡವಾಳವು ಅರ್ಥವ್ಯವಸ್ಥೆಗೆ ಬೆನ್ನು ತೋರಿಸಿ ಓಡಿಹೋಗುತ್ತಿರುವ ಸಂದರ್ಭದಲ್ಲಿ, ಕಾರ್ಮಿಕರಿಂದ, ರೈತರಿಂದ ಮತ್ತು ಕಿರು ಉತ್ಪಾದಕರಿಂದ ಅವರಿಗೆ ನ್ಯಾಯಯುತವಾಗಿ ದಕ್ಕಬೇಕಾದುದನ್ನು ಬಲವಂತವಾಗಿ ಕಿತ್ತುಕೊಳ್ಳುವ ಕ್ರಮ ಬಹಳ ಪಟ್ಟು ಹೆಚ್ಚುತ್ತದೆ. ಹೆಡೆ ಬಿಚ್ಚಿದ ನವ–ಉದಾರವಾದವನ್ನು ನಾವು ಕಾಣಲಿದ್ದೇವೆ.

ಹಣಕಾಸು ಬಂಡವಾಳವನ್ನು ಓಲೈಸುವುದನ್ನು ಬಿಟ್ಟು ಕೆಲವು ಪರ್ಯಾಯ ನೀತಿಗಳನ್ನು ಅನುಸರಿಸಿದರೆ, ಇಂತಹ ಹೀನಾಯ ಪರಿಸ್ಥಿತಿಗೆ ನಾವು ಒಳಗಾಗುವುದಿಲ್ಲ. ನಮ್ಮ ಘನತೆ ಮತ್ತು ವರಮಾನಗಳಿಗೂ ಧಕ್ಕೆಯಾಗುವುದಿಲ್ಲ. ಆದರೆ, ಇಂತಹ ಪರ್ಯಾಯ ನೀತಿಗಳನ್ನು ಅನುಸರಿಸಲು ಹೊರಟಾಗ, ವಿದೇಶದಿಂದ ಬಂದ ಬಂಡವಾಳವು ದೇಶದಿಂದ ಹೊರ ಹೋಗುತ್ತದೆ. ಬಂಡವಾಳದ ಹೊರ ಹರಿವಿನ ಮೇಲೆ ನಿಯಂತ್ರಣಗಳನ್ನು ಹೇರುವ ಮೂಲಕ ಅದನ್ನು ತಡೆಯಬಹುದು. ಈ ಕ್ರಮಗಳ ಅರ್ಥ, ನವ–ಉದಾರ ಆಳ್ವಿಕೆಯಿಂದ ನಿರ್ಗಮಿಸುವುದು ಎಂದಾಗುತ್ತದೆ.

ಇಂತಹ ಪರ್ಯಾಯ ನೀತಿಗಳು ಒಳಗೊಳ್ಳುವ ಅಂಶಗಳು ಹೀಗಿರುತ್ತವೆ: ಪಾವತಿ ಶೇಷ ಸಮಸ್ಯೆಗೆ ಪರಿಹಾರವಾಗಿ ಹೆಚ್ಚಿನ ಆಮದು ಸುಂಕ ವಿಧಿಸುವ ಮೂಲಕ ಮತ್ತು ಸುಂಕವಿಲ್ಲದ ಕೆಲವು ನಿರ್ಬಂಧಗಳ ಮೂಲಕ ಆಮದುಗಳನ್ನು ನಿಯಂತ್ರಿಸಿವುದು (ಇಂತಹ ಕ್ರಮವನ್ನು ಪ್ರಪಂಚದ ಅತ್ಯಂತ ಬಲಶಾಲಿ ಬಂಡವಾಳಶಾಹಿ ದೇಶದ ಅಧ್ಯಕ್ಷ ಟ್ರಂಪ್ ಈಗಾಗಲೇ ಆರಂಭಿಸಿದ್ದಾರೆ); ತೈಲ ಬೆಲೆ ಏರಿಕೆಯ ಹೊರೆಯನ್ನು ಬಳಕೆದಾರರಿಗೆ ವರ್ಗಾವಣೆಯಾಗದ ರೀತಿಯಲ್ಲಿ ಹಣದುಬ್ಬರವನ್ನು ನಿಯಂತ್ರಿಸಿವುದು; ನೇರ ತೆರಿಗೆಗಳ ಮೂಲಕ ಸರ್ಕಾರದ ಆದಾಯವನ್ನು ಹೆಚ್ಚಿಸಿಕೊಂಡು, ಅದನ್ನು, ತೈಲ ಬೆಲೆ ಏರಿಕೆಯ ಹೊರೆ ಬಳಕೆದಾರರಿಗೆ ವರ್ಗಾವಣೆ ಆಗದೆ ಇದ್ದುದರಿಂದ ಉಂಟಾದ ಆದಾಯ–ನಷ್ಟವನ್ನು ಸರಿದೂಗಿಸಲು ಬಳಸಿಕೊಳ್ಳುವುದು; ಮತ್ತು ಆರೋಗ್ಯ, ಶಿಕ್ಷಣ ಮುಂತಾದ ಜನೋಪಯೋಗಿ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳುವುದು. (ಈ ನಿಟ್ಟಿನಲ್ಲಿ, ಬ್ರಿಟನ್‌ನಲ್ಲಿರುವ ರಾಷ್ಟ್ರೀಯ ಆರೋಗ್ಯ ಸೇವೆಗಳ ಮಾದರಿಯಲ್ಲಿ ಒಂದು ಸಾರ್ವತ್ರಿಕ ಆರೋಗ್ಯ ರಕ್ಷಣಾ ಯೋಜನೆ ಕೈಗೊಳ್ಳಲು ಸಾಧ್ಯವಿದೆ.)

ಒಂದು ಕಡೆಯಲ್ಲಿ ಸರ್ಕಾರದ ವೆಚ್ಚಗಳನ್ನು ಹೆಚ್ಚಿಸುವ ಮೂಲಕ, ಮತ್ತೊಂದೆಡೆಯಲ್ಲಿ ಆಮದುಗಳನ್ನು ಕಡಿಮೆಮಾಡಿಕೊಳ್ಳುವ ಮೂಲಕ, ತತ್‌ಕ್ಷಣದಲ್ಲೇ, ಆಂತರಿಕವಾಗಿ ಉತ್ಪಾದಿಸಿದ ಸರಕು ಸಾಮಗ್ರಿಗಳಿಗೆ ಬೇಡಿಕೆ ವೃದ್ಧಿಸುತ್ತದೆ. ಕ್ರಮೇಣ, ಕೆಲವು ಉಪ ಕ್ರಮಗಳ ಮೂಲಕ ಈ ಬೇಡಿಕೆ ಮತ್ತಷ್ಟು ವೃದ್ಧಿಯಾಗುವಂತೆ ನೋಡಿಕೊಂಡರೆ, ರೈತ ಕೃಷಿ ಮರುಹುಟ್ಟು ಪಡೆಯುತ್ತದೆ. ಜೊತೆಗೆ, ಬೇಡಿಕೆ ವೃದ್ಧಿಸುವುದರಿಂದ, ಪ್ರಮುಖ ಸರಕು ಸಾಮಗ್ರಿಗಳನ್ನು ಉತ್ಪಾದಿಸುವ ಕೈಗಾರಿಕೆಗಳನ್ನು ಬಹಳ ಸಮಯದಿಂದಲೂ ಕಾಡುತ್ತಿದ್ದ ಸ್ಥಗಿತತೆಯಿಂದ ಅವು ಹೊರಬರಲು ನೆರವಾಗುತ್ತದೆ. (ಮೆಚ್ಚಿಕೊಳ್ಳುವಂತಿದೆ ಎಂದು ಕೊಚ್ಚಿಕೊಳ್ಳುತ್ತಿರುವ ಜಿಡಿಪಿ ಬೆಳವಣಿಗೆ ದರದ ಹಿಂದಿರುವ ಕಾರಣವೆಂದರೆ, ಸೇವಾ ವಲಯದ ವಿಸ್ತಾರಗೊಳ್ಳುತ್ತಿರುವಿಕೆ. ಇದು, ಪ್ರಾಯೋಗಿಕವಾಗಿ ಪ್ರಶ್ನಾರ್ಹವಾಗಿದೆ ಮತ್ತು ಸೈದ್ಧಾಂತಿಕವಾಗಿ ಹುರುಳಿಲ್ಲದ್ದು)

ಖಚಿತವಾಗಿ ಹೇಳುವುದಾದರೆ, ಇಂತಹ ಒಂದು ನೀತಿ–ಬದಲಾವಣೆಯ ಸಂದರ್ಭದಲ್ಲಿ, ಸ್ಥಿತ್ಯಂತರಕ್ಕೆ ಸಂಬಂಧಿಸಿದ ಅನೇಕ ತೊಡಕುಗಳು ಎದುರಾಗುತ್ತವೆ. ಏಕೆಂದರೆ, ಅಂತಾಷ್ಟ್ರೀಯ ಬಂಡವಾಳದೊಂದಿಗೆ ಕೈಜೋಡಿಸಿರುವ ನಮ್ಮ ದೇಶದ ಕಾರ್ಪೋರೇಟ್ ಕುಳಗಳು ನೀತಿ–ಬದಲಾವಣೆಯ ವಿರುದ್ಧವಾಗಿ ಪ್ರತಿರೋಧ ಒಡ್ಡುತ್ತವೆ. ಆದರೆ, ಭಾರತದಲ್ಲಿ ನವ–ಉದಾರ ನೀತಿಗಳ ಆಳ್ವಿಕೆಯು ತನ್ನ ಶಕ್ತಿ ಸಾಮರ್ಥ್ಯಗಳ ಕೊನೆಯನ್ನು ತಲುಪಿರುವಾಗ (ಅಂದರೆ ಅದು ಹಿಡಿದಿರುವ ಹಗ್ಗದ ತುದಿಯಲ್ಲಿರುವಾಗ), ನವ–ಉದಾರವಾದವು ಅನಿವಾರ್ಯವಾಗಿ ಜನತೆಯ ಮೇಲೆ ಹೇರುವ "ಮಿತವ್ಯಯ" ನೀತಿಗಳ ತೀಕ್ಷ್ಣ ಹೊಡೆತಗಳಿಂದ ತಪ್ಪಿಸಿಕೊಳ್ಳಲು, ನೀತಿ–ಬದಲಾವಣೆ ಬಿಟ್ಟರೆ ಬೇರೆ ದಾರಿಯೇ ಇಲ್ಲ. ●

ಹಲವು ವರ್ಷಗಳ ನಂತರ ದಿಲ್ಲಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರ



ಜುಲೈ 20ರಂದು 11 ಕಾರ್ಮಿಕ ಸಂಘಟನೆಗಳ ಕರೆಗೆ ಓಗೊಟ್ಟು ದಿಲ್ಲಿ ಹಾಗೂ ಸುತ್ತಮುತ್ತಲಿನ ಲಕ್ಷಾಂತರ ಕಾರ್ಮಿಕರು ಯಶಸ್ವಿ ಮಯುಷ್ಕರ ನಡೆಸಿದ್ದಾರೆ. ಇಲ್ಲಿ ಇಂತಹ ಮುಷ್ಕರ ಕಂಡು ಒಂದು ದಶಕವೇ ಅಗಿದೆ ಎನ್ನಲಾಗಿದೆ.

ದಿಲ್ಲಿ ಸರಕಾರ ಪ್ರಕಟಿಸಿರುವ ಕನಿಷ್ಟ ಸಂಬಳವನ್ನು ಕೊಡಬೇಕು, ದುಡಿಮೆಯ ಸ್ಥಳಗಳಲ್ಲಿ ಸುಭದ್ರತೆ, ಸುರಕ್ಷಿತತೆ ಒದಗಿಸಬೇಕು, ಕಾಂಟ್ರಾಕ್ಟ್ ಕಾರ್ಮಿಕರನ್ನು ನಿಯಮಿತಗೊಳಿಸಬೇಕು, ಕಟ್ಟಡ ಕೆಲಸಗಾರರ ದಾಖಲಾತಿ ಆರಂಭಿಸಬೇಕು, ಸ್ವ–ಉದ್ಯೋಗಿ ರಸ್ತೆ ವ್ಯಾಪಾರಿಗಳ ಜೀವನಾಧಾರದ ಮೇಲೆ ಹಲ್ಲೆಗಳು ಮತ್ತು ಕಿರುಕುಳಗಳು ನಿಲ್ಲಬೇಕು, ಕಾರ್ಮಿಕಸಂಘಗಳನ್ನು ಉಪೇಕ್ಷಿಸುವುದನ್ನು ನಿಲ್ಲಿಸಿ ಅವುಗಳಿಗೆ ಕೊಟ್ಟ ಆಶ್ವಾಸನೆಗಳನ್ನು ಜಾರಿಗೊಳಿಸಬೇಕು, ದಿಲ್ಲಿ ಸರಕಾರದ ಎಂಸಿಡಿ ಮತ್ತು ಇತರ ಇಲಾಖೆಗಳಲ್ಲಿ ನೇಮಕಾತಿ ಆರಂಭಿಸಬೇಕು, 7ನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಬೇಕು ಹಾಗೂ ನಿಗದಿತ ಅವಧಿ ಉದ್ಯೋಗ ಎಂಬುದನ್ನು ಹಿಂತೆಗೆದುಕೊಳ್ಳಬೇಕು ಎಂಬ ಒಂಬತ್ತು ಬೇಡಿಕೆಗಳ ಮೇಲೆ ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ, ಹೆಚ್‌ಎಂಎಸ್, ಎಐಸಿಸಿಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಯುಟಿಯುಸಿ, ಎಲ್‌ಪಿಎಫ್ ಮತ್ತು ಎಂಇಸಿ ಈ 11 ಕಾರ್ಮಿಕ ಸಂಘಟನೆಗಳು ಒಂದು ದಿನದ ಮುಷ್ಕರಕ್ಕೆ ಕರೆ ನೀಡಿದ್ದವು. ಬಿಎಂಎಸ್ ತನ್ನ ಸಂಘ ಪರಿವಾರದ ಧೋರಣೆಗಳ ಭಾಗವಾಗಿ ಎಎಪಿ ರಾಜ್ಯ ಸರಕಾರವನ್ನು ತೀವ್ರವಾಗಿ ವಿರೋಧಿಸುತ್ತಿದ್ದರೂ ಈ ಮುಷ್ಕರದಿಂದ ದೂರ ಉಳಿದಿದೆ, ಮಾತ್ರವಲ್ಲ, ಕಾರ್ಮಿಕರ ಕಾರ್ಯಾಚರಣೆಗಳನ್ನು ಹೀಗಳೆಯುವ ಕೆಲಸ ಮಾಡುತ್ತಿದೆ.

ದಿಲ್ಲಿಯ ಎಲ್ಲ ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡರು. ಬಹಳಷ್ಟು ಕಾರ್ಮಿಕರು ಪಿಕೆಟಿಂಗ್, ಮತಪ್ರದರ್ಶನಗಳಲ್ಲೂ ಭಾಗವಹಿಸಿದರು. ಘಾಸಿಪುರದಲ್ಲಿರುವ ಕೇಂದ್ರೀಯ ದಾಸ್ತಾನು ನಿಗಮ ಮುಚ್ಚಿತ್ತು. ಇಂದಿರಾಗಾಂಧಿ ಅಂತರ್‍ರಾಷ್ಟ್ರೀಯ ವಿಮಾನ ನಿಲ್ದಾಣದ 200 ಕಾಂಟ್ರಾಕ್ಟ್ ನೌಕರರು ಬಸ್ ನಿಲ್ದಾಣದಲ್ಲಿ ಧರಣಿ ನಡೆಸಿದರೆ ದಿಲ್ಲಿ ಜಲಮಂಡಳಿಯ ಸುಮಾರು 800 ನೌಕರರು ತಮ್ಮ ಮುಖ್ಯಕಚೇರಿಯ ಮುಂದೆ ಧರಣಿ ನಡೆಸಿದರು. ಕಟ್ಟಡ ಕಾರ್ಮಿಕರು 16 ಸ್ಥಳಗಳಲ್ಲಿ ಧರಣಿ ನಡೆಸಿದರು.

ಕಾರ್ಮಿಕರ ಕೇಂದ್ರೀಯ ಮೆರವಣಿಗೆ 11 ಗಂಟೆಗೆ ಸಿವಿಕ್ ಸೆಂಟರ್‌ನಿಂದ ಆರಂಭವಾಯಿತು. ಇದರಲ್ಲಿ ಮುನಿಸಿಪಲ್ ನೌಕರರು, ಮನೆಕೆಲಸದವರು, ಅಂಗನವಾಡಿ ನೌಕರರು ಮತ್ತು ಬೀದಿ ವ್ಯಾಪಾರಿಗಳೂ ಭಾಗವಹಿಸಿದರು.ಮೆರವಣಿಗೆಯ ನಂತರ ನಡೆದ ಸಾರ್ವಜನಿಕ ಮುಷ್ಕರ ರ್‍ಯಾಲಿಯನ್ನುದ್ದೇಶಿಸಿ ಎಲ್ಲ 11 ಸಂಘಟನೆಗಳ ಮುಖಂಡರು ಮಾತನಾಡಿದರು.

ದಿಲ್ಲಿಯ ಈ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಮುಷ್ಕರವನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಕಾರ್ಮಿಕರನ್ನು ಮತ್ತು ನೌಕರರನ್ನು ಅಭಿವಂದಿಸುತ್ತ ಮುಂಬರುವ ದಿನಗಳಲ್ಲಿ ಕಾರ್ಮಿಕರ ಹಕ್ಕುಗಳ ಹೋರಾಟವನ್ನು ಮುಂದುವರೆಸುವ ಹೊಣೆಯನ್ನು ಹೊರುವುದಾಗಿ ತಿಳಿಸಿದೆ.

ದಿಲ್ಲಿಯಲ್ಲಿ ಮತ್ತು ಸುತ್ತಮುತ್ತ 3ಲಕ್ಷ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ಮತ್ತು ಸುಮಾರು 9000 ನೋಂದಾಯಿತ ಕಾರ್ಖಾನೆಗಳಿವೆ. ಅಲ್ಲದೆ ಲಕ್ಷಾಂತರ ಕಾರ್ಮಿಕರನ್ನು ದುಡಿಸಿಕೊಳ್ಳುವ ಇನ್ನೂ ಹಲವಾರು ಯಾವುದೇ ಅಧಿಕೃತ ಪರವಾನಿಗೆ ಇಲ್ಲದ ಘಟಕಗಳಿವೆ. ಒಟ್ಟು 20ಲಕ್ಷ ಕಾರ್ಮಿಕರು ಇರುವುದಾಗಿ ಅಂದಾಜಿದೆ. ಇವರಲ್ಲಿ ಬಹಳಷ್ಟು ಮಂದಿ ದೂರ–ದೂರದ ಹಳ್ಳಿಗಳಿಂದ ಬಂದಿರುವ ವಲಸೆ ಕಾರ್ಮಿಕರು. ಹೆಚ್ಚಾಗಿ ನಾಗರಿಕ ಸೌಲಭ್ಯಗಳಿಲ್ಲದ ಕೊಳೆಗೇರಿಗಳಲ್ಲಿ ವಾಸಿಸುತ್ತಾರೆ. 10–12 ಗಂಟೆಗಳ ಕಾಲ ದುಡಿಯಬೇಕಾದ ಅವರ ಉದ್ಯೋಗಗಳಲ್ಲಿ ರಜಾದಿನಗಳು, ಕೆಲಸದ ಭದ್ರತೆ ಕೇಳದ ಸಂಗತಿಗಳು.

ಮಾರ್ಚ್ 2017ರಲ್ಲಿ ಎಎಪಿ ಸರಕಾರ 13,896ರೂ. ಕನಿಷ್ಟ ವೇತನ ನಿಗದಿ ಪಡಿಸಿತು. ಆದರೆ ಮಾಲಕರು ಇದು ಬಹಳ ಹೆಚ್ಚಾಯಿತು ಎಂದು ಕೋರ್ಟಿಗೆ ಹೋದರು. ಕೋರ್ಟ್ ಅದರ ವಿರುದ್ಧ ಇಂಜಂಕ್ಷನ್ ಕೊಡದಿದ್ದರೂ, ಕೇಜ್ರಿವಾಲ್ ಸರಕಾರ ತನ್ನ ಪ್ರಕಟಣೆಯ ಜಾರಿಯನ್ನು ತಡೆ ಹಿಡಿಯಿತು. ಕೋರ್ಟಿನಲ್ಲಿ ಮೇ 23ಕ್ಕೆ ವಿಚಾರಣೆಗಳು ಮುಗಿದಿವೆ. ಆದರೆ ತೀರ್ಪನ್ನು ಕಾದಿರಿಸಲಾಗಿದೆ. ರಾಜ್ಯ ಸರಕಾರ ಈಗಲೂ ತನ್ನ ಪ್ರಕಟಣೆಯ ಜಾರಿಯನ್ನೂ ತಡೆಹಿಡಿದಿದೆ.

ಈ ಹಿನ್ನೆಲೆಯಲ್ಲಿ ಈ ಯಶಸ್ವಿ ಮುಷ್ಕರ ನಡೆದಿದೆ.

“ಸರಕಾರೀ ಜಮೀನು, ಅದು ನಮ್ಮದೇ ಜಮೀನು” ಬಿಹಾರದ ಹಳ್ಳಿಯಲ್ಲಿ ಮಹಾದಲಿತರ ಘೋಷಣೆ



ಬಿಹಾರದ ಮಧುಬನಿ ಜಿಲ್ಲೆಯ ಮೊಗ್ಲಾಹ ಎಂಬ ಹಳ್ಳಿಯಲ್ಲಿ ಮುಸಹರ್ ಮಹಾದಲಿತ ಜಾತಿಯ ಕುಟುಂಬಗಳಿಗೆ ನ್ಯಾಯ ದೊರಕಿಸಲು ಸಿಪಿಐ(ಎಂ) ನೇತೃತ್ವದಲ್ಲಿ ಜೂನ್ 26ರಂದು ಒಂದು ರ್‍ಯಾಲಿ ನಡೆಯಿತು. ಇದರಲ್ಲಿ ನೂರಾರು ಮುಸಹರ್ ಕುಟುಂಬಗಳು ಭಾಗವಹಿಸಿದವು.

ಇವರಿಗೆ 1985–86ರಲ್ಲಿ ಮನೆಪಟ್ಟಾ ಮತ್ತು ವಿದ್ಯುತ್ ಸಂಪರ್ಕಗಳನ್ನು ಕೊಟ್ಟಿದ್ದರೂ, ಜೆಡಿ(ಯು)ನ ಇಬ್ಬರು ಭೂಮಾಲಕರು ಅದು ತಮ್ಮ ಜಮೀನೆಂದು ದಾವೆ ಹಾಕಿರುವುದರಿಂದ ಈ ಜುಲೈ 1ರಂದು ನಿತಿಶ್ ಸರಕಾರ ಅಲ್ಲಿದ್ದ ಮನೆಗಳನ್ನು ನೆಲಸಮ ಮಾಡಿತು. ಆದರೆ ಮುಸಹರ್ ಕುಟುಂಬಗಳು ತೆಪ್ಪಗೆ ಕೂರಲಿಲ್ಲ. ಮರುದಿನದಿಂದಲೇ ಪರ್ಯಾಯ ವಸತಿ ಕಲ್ಪಿಸಬೇಕು ಮತ್ತು ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ಕೆಂಬಾವುಟ ನೆಟ್ಟು ಧರಣಿ ನಡೆಸಿದ್ದಾರೆ.

ಜುಲೈ 26ರಂದು ಅವರ ಹೋರಾಟವನ್ನು ಬೆಂಬಲಿಸಿ ಈ ರ್‍ಯಾಲಿ ನಡೆಸಲಾಯಿತು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿ ಮತ್ತು ಬಿಹಾರ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಅವಧೇಶ್ ಕುಮಾರ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

“ನಾವು ನೆಲೆಸಿರುವ ಜಮೀನು ನಮ್ಮದೇ– ಸರಕಾರೀ ಜಮೀನಾದರೆ, ಅದು ನಮ್ಮದೇ ಜಮೀನು” ಎಂಬ ಘೋಷಣೆಗಳು ಈ ರ್‍ಯಾಲಿಯಲ್ಲಿ ಮೊಳಗಿದವು.

ಆಂಧ್ರಪ್ರದೇಶ: ವಿಶೇಷ ಸ್ಥಾನಮಾನ ಆಗ್ರಹಿಸಿ ಮಾನವ ಸರಪಳಿ

ಆಂಧ್ರಪ್ರದೇಶಕ್ಕೆ ‘ವಿಶೇಷ ವಿಧದ ಸ್ಥಾನಮಾನ’ (ಎಸ್‌ಸಿಎಸ್) ನೀಡಬೇಕೆಂಬ ಚಳುವಳಿ ವಿವಿಧ ರೂಪಗಳನ್ನು ಪಡೆಯುತ್ತಿದೆ. ಜೂನ್ 25ರಂದು ಯುವಜನ ವಿದ್ಯಾರ್ಥಿ ಜಂಟಿ ಕಾರ್ಯಾಚರಣೆ ಸಮಿತಿ ರಾಜ್ಯಾದ್ಯಂತ 1 ಕೋಟಿ ಜನರ ಮಾನವಸರಪಳಿ ಏರ್ಪಡಿಸಲು ಕರೆ ನೀಡಿತು ಇದರ ಭಾಗವಾಗಿ ವಿಜಯವಾಡದ ಇಂದಿರಾಗಾಂಧಿ ಸ್ಟೇಡಿಯಂನಲ್ಲಿ ಒಂದು ಬೃಹತ್ ಮಾನ ಸರಪಳಿ ರಚಿಸಲಾಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ.ಮಧು ಮತ್ತಿತರ ಮುಖಂಡರು ಹಾಗೂ ವಿದ್ಯಾರ್ಥಿ ಯುವಜನ ಮುಖಂಡರು ಇದರಲ್ಲಿ ಭಾಗವಹಿಸಿದರು. ರಾಜ್ಯ ಪೋಲಿಸರು ಅವರನ್ನೆಲ್ಲ ಬಂಧಿಸಿದರು.



ರಾಜ್ಯಗಳ ಸುತ್ತ



ನ್ಯಾಯ ಪಡೆಯಲು ನೆರವಾದ್ದಕ್ಕೆ ತಾಯಿಯ ಧನ್ಯವಾದ

67 ವರ್ಷದ ಪ್ರಭಾವತಿ ಅಮ್ಮ ಜೂನ್ 27ರಂದು ತಿರುವನಂತಪುರದಲ್ಲಿ ಕೇರಳದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ತನ್ನ ಮಗನ ಸಾವಿನ ಪ್ರಕರಣದಲ್ಲಿ ತನಗೆ ನ್ಯಾಯ ಪಡೆಯಲು, ಮೊದಲು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿ, ನಂತರ ಮುಖ್ಯಮಂತ್ರಿಯಾಗಿ ನೆರವು, ಬೆಂಬಲ ನೀಡಿದ್ದಕ್ಕೆ ಅವರಿಗೆ ಧನ್ಯವಾದ ಸಲ್ಲಿಸಿದರು.

2005ರಲ್ಲಿ ಆಕೆಯ ಮಗ, ಆಗ 26 ವರ್ಷದ ಉದಯಕುಮಾರ್‌ನನ್ನು ಕಳವಿನ ಆಪಾದನೆಯಲ್ಲಿ ಬಂಧಿಸಲಾಗಿತ್ತು. ಮರುದಿನ ಆತನ ಸಾವಿನ ಸುದ್ದಿ ಪ್ರಭಾವತಿ ಅಮ್ಮಳನ್ನು ಬರಸಿಡಿಲಿನಂತೆ ಬಡಿಯಿತು. ಆದರೂ ಧೃತಿಗೆಡದೆ ನ್ಯಾಯಕ್ಕಾಗಿ ತಾಯಿ ಆರಂಭಿಸಿದ ಹೋರಾಟ ಮತ್ತು ಅದಕ್ಕೆ ಸಿಕ್ಕಿದ ಬೆಂಬಲದಿಂದಾಗಿ ಪ್ರಕರಣ ವಿಶೇಷ ಸಿಬಿಐ ಕೊರ್ಟಿಗೆ ಹೋಯಿತು. ಆತನಿಂದ ತಪ್ಪೊಪ್ಪಿಗೆ ಪಡೆಯಲು ಪೋಲೀಸರು ನೀಡಿದ ಚಿತ್ರಹಿಂಸೆಯಿಂದಾಗಿ ಆತನ ಸಾವು ಉಂಟಾಗಿದೆ ಎಂಬ ತೀರ್ಪು 13ವರ್ಷಗಳ ನಂತರ ಈಗ ಬಂದಿದೆ. ಜೂನ್ 26ರಂದು ವಿಶೇಷ ಸಿಬಿಐ ನ್ಯಾಯಾಲಯ ‘ಇಬ್ಬರು ಪೋಲೀಸರಿಗೆ ಗಲ್ಲು ಶಿಕ್ಷೆ ವಿಧಿಸಿದೆ ಹಾಗೂ ಈಗ ನಿವೃತ್ತರಾಗಿರುವ ಒಬ್ಬ ಎಸ್‌ಪಿ ಹಾಗೂ ಒಬ್ಬ ಡಿವೈಎಸ್‌ಪಿಗೆ 3ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಕೆಂಪುಕೋಟೆಯ ನಂತರ ತಾಜ್‌ಮಹಲ್ ‘ಖಾಸಗೀಕರಣ’?

ತಾಜ್‌ಮಹಲ್‌ನರಕ್ಷಣೆಯಲ್ಲಿ ವಿಫಲವಾಗಿರುವದಕ್ಕೆ ಸುಪ್ರಿಂ ಕೋರ್ಟಿನಿಂದ ತೀವ್ರತರಾಟೆಗೆ ಒಳಗಾದ ಉತ್ತರಪ್ರದೇಶದ ಬಿಜೆಪಿ ಸರಕಾರ ಒಂದು ‘ಕಣ್ಣೋಟ ದಸ್ತಾವೇಜ’ನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ. ಅದರಲ್ಲಿ ರಕ್ಷಣೆಯ ಕೆಲವು ಕ್ರಮಗಳನ್ನು ನಮೂದಿಸುವುದರೊಂದಿಗೆ ಇದನ್ನೂ ಕೇಂದ್ರ ಸರಕಾರದ ‘ಒಂದು ಪರಂಪರೆಯನ್ನು ದತ್ತು ತೆಗೆದುಕೊಳ್ಳಿ’ ಸ್ಕೀಮಿನಡಿ ತಂದು ಯಾವುದಾದರೂ ಕಾರ್ಪೊರೇಟ್ ಇದನ್ನು ನೋಡಿಕೊಳ್ಳುವ, ಸವಚ್ಛತೆ ಕಾಪಾಡುವ ಕೆಲಸವನ್ನು ವಹಿಸಿಕೊಳ್ಳುವಂತೆ ಮಾಡಬಹುದು ಎಂದೂ ಸೂಚಿಸಿದೆಯಂತೆ.

ಜುಲೈ 26ರಂದು ಸುಪ್ರಿಂ ಕೊರ್ಟ್‌ಈ ‘ಕಣ್ಣೋಟ ದಸ್ತಾವೇಜ’ನ್ನು ಭಾರತ ಪುರಾತತ್ವ ಸರ್ವೆ(ಎಎಸ್‌ಐ) ಯೊಂದಿಗೆ ಸಮಾಲೋಚನೆ ಮಾಡದೆ ಸಲ್ಲಿಸಿದ್ದಕ್ಕಾಗಿ ಉತ್ತರಪ್ರದೇಶ ಸರಕಾರವನ್ನು ಮತ್ತೊಮ್ಮೆ ತರಾಟೆಗೆ ತೆದುಕೊಂಡಿದೆ. ಎಎಸ್‌ಐ ಈ ದಸ್ತಾವೇಜಿನ ಬಗ್ಗೆ ತನ್ನ ವರದಿಯನ್ನು ಸಲ್ಲಿಸಬೇಕು ಎಂದು ನಿರ್ದೇಶಿಸಿದೆ.



ನಾಗರಾಜ ನಂಜುಂಡಯ್ಯ

ಪಾಕಿಸ್ತಾನದಲ್ಲಿ ನಡೆದ 11ನೇಯ ಸಾರ್ವತ್ರಿಕ ಚುನಾವಣೆ ಇದಾಗಿತ್ತು. ಈ ಬಾರಿಯ ಚುನಾವಣೆಯಲ್ಲಿ ಧಾರ್ಮಿಕ ಮೂಲಭೂತವಾದಿ ಪಕ್ಷಗಳು ಪ್ರಭಾವ ಬೀರುವಲ್ಲಿ ವೈಫಲ್ಯ ವನ್ನು ಕಂಡಿರುವುದು ಒಂದು ಕಡೆ ಯಾದರೆ, ಮತ್ತೊಂದೆಡೆ ಭ್ರಷ್ಟಾಚಾರದ ಆರೋಪ ಹೊತ್ತ ಪಕ್ಷಗಳನ್ನು ಮತದಾರರು ತಿರಸ್ಕರಿಸಿರುವುದನ್ನು ನಾವು ಸಕಾರಾತ್ಮಕವಾಗಿ ಗಮನಿಸಬೇಕಾಗಿದೆ. ಪಾಕಿಸ್ತಾನದ ಮಿಲಿಟರಿ ಯಾರನ್ನು ಪ್ರಧಾನಿಯನ್ನಾಗಿ ಬೆಂಬಲಿಸುತ್ತದೆಯೋ ಅವರೇ ಬಹುತೇಕ ಚುನಾವಣೆಯಲ್ಲಿ ಗೆಲ್ಲುವುದು ಎಂಬ ರಾಜಕೀಯ ಪರಿಣಿತರ ಅಭಿಪ್ರಾಯವನ್ನು ಕಡೆಗಣಿಸಲು ಸಾಧ್ಯವಿಲ್ಲ. ಈ ಬಾರಿ ಸೈನ್ಯವು ಇಮ್ರಾನ್ ಖಾನ್ ರನ್ನು ಬೆಂಬಲಿಸಿತ್ತು ಎಂಬುದು ವಾಸ್ತವಿಕ. ಈ ಹಿನ್ನೆಲೆಯಲ್ಲಿ ಚುನಾವಣೆಯಲ್ಲಿ ಅತಿಕ್ರಮ ಮತ್ತು ರಿಗ್ಗಿಂಗ್ ಅತಿಯಾಗಿ ನಡೆದಿದೆ ಎಂಬ ವಿರೋಧ ಪಕ್ಷದವರ ಆರೋಪವನ್ನು ಸಹ ಸುಲಭವಾಗಿ ತಳ್ಳಿ ಹಾಕುವಂತಿಲ್ಲ.

ಪಾಕಿಸ್ತಾನ ಚುನಾವಣೆ : ಇಮ್ರಾನ್ ಖಾನ್ ಪ್ರಧಾನಿ ?

ಜುಲೈ 25 ರಂದು ನಡೆದ ನ್ಯಾಷನಲ್ ಅಸೆಂಬ್ಲಿ ಅಂದರೆ ಪಾಕಿಸ್ತಾನದ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಇಮ್ರಾನ್ ಖಾನ್ ನಾಯಕತ್ವದ ಪಾಕಿಸ್ತಾನ ಟೆಹ್ರೀಕ್ –ಇ–ಇನ್ಸಾಫ್ (ಪಿ.ಟಿ.ಐ) ಪಕ್ಷ ಅತಿ ದೊಡ್ಡ ಪಕ್ಷವಾಗಿ ಹೊಮ್ಮಿದ್ದು, ಅವರು ಸರಕಾರ ರಚಿಸಿ ಪ್ರಧಾನಿಯಾಗುವುದು ಬಹುತೇಕ ಖಚಿತವಾಗಿದೆ.

ಸುಮಾರು 10 ಕೋಟಿಗೂ ಮೀರಿದ ನೊಂದಾಯಿತ ಮತದಾರರು ಚುನಾವಣೆಯಲ್ಲಿ ಮತ ಚಲಾಯಿಸಿದ್ದಾರೆ ಎಂದು ವರದಿಗಳು ಹೇಳುತ್ತವೆ. ಮತದಾನದ ದಿನ ಹಿಂಸಾಚಾರದ ಘಟನೆಗಳು ಮತ್ತು ಮತದಾನದ ಹಗರಣಗಳ ಆಪಾದನೆಗಳನ್ನು ವಿರೋಧ ಪಕ್ಷಗಳು ಹೊರಿಸಿದ್ದಾರೆ. ಕ್ವೆಟ್ಟಾದಲ್ಲಿ ಆತ್ಮಹತ್ಯೆ ಬಾಂಬ್ ಸ್ಫೋಟ ಮತ್ತು ಮಾರಣಾಂತಿಕ ದಾಳಿಯಿಂದಾಗಿ, ವಿವಿಧ ಭಾಗಗಳಲ್ಲಿ ಭಾರೀ ಮಳೆಯಿಂದಾಗಿ 32 ನಾಗರಿಕರ ಸಾವು ಸಂಭವಿಸಿದೆ. ಚುನಾವಣಾ ಅಧಿಕಾರಿಗಳ ಪ್ರಕಾರ ಶೇಕಡ 51 ರಷ್ಟು ಮತದಾನವಾಗಿದೆ. ಇದು ಈ ಹಿಂದಿನ ಚುನಾವಣೆ ಗಿಂತ ಶೇಕಡ 2 ರಷ್ಟು ಕಡಿಮೆ. ಕಳೆದ ಚುನಾವಣೆಯಲ್ಲಿ ಪಾಕಿಸ್ತಾನದ ಮುಸ್ಲಿಂ ಲೀಗ್–ನವಾಜ್ ಪಕ್ಷ ಗೆಲುವು ಸಾಧಿಸಿತು. ನವಾಜ್ ಷರೀಫ್ ಪ್ರಧಾನಿಯಾಗಿದ್ದರು.

ಪಾಕಿಸ್ತಾನ ದಲ್ಲಿ 272 ಸ್ಥಾನಗಳಿಗೆ ನೇರ ಆಯ್ಕೆ ನಡೆಯಬೇಕಾದ ಚುನಾವಣೆಯ ವ್ಯವಸ್ಥೆ ಇದೆ. ಆದರೆ, ಖೈಬರ್ ಪಖ್ತುನ್ಖ್ವಾ ಮತ್ತು ಬಲೋಚಿಸ್ಥಾನದಲ್ಲಿ ನಡೆದ ಮಾರಣಾಂತಿಕ ದಾಳಿಯಿಂದಾಗಿ 270 ಸ್ಥಾನಗಳಿಗ ಮಾತ್ರ ಚುನಾವಣೆ ನಡೆದಿದ್ದು, (ಎರಡು ಸ್ಥಾನಗಳಿಗೆ ಚುನಾವಣೆ ನಡೆಸಲಾಗಿಲ್ಲ). ಅದರಲ್ಲಿ ಇಮ್ರಾನ್ ಪಕ್ಷವಾದ ಪಿಟಿಐ ಜುಲೈ 27 ಬೆಳಿಗ್ಗೆವರೆಗೂ ಬಂದ ಸುದ್ದಿಗಳ ಪ್ರಕಾರ 119 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿ ಬಹುತೇಕ ಗೆಲುವನ್ನು ಖಾತರಿ ಪಡಿಸಿಕೊಂಡಿದೆ. ಬಹು ದೊಡ್ಡ ಏಕ ಪಕ್ಷವಾಗಿ ಹೊರಹೊಮ್ಮಿದೆ. ಇದರೊಂದಿಗೆ ನಾಲ್ಕು ಪ್ರಾಂತೀಯ ಸಭೆಗಳಿಗೂ ಚುನಾವಣೆಗಳು ನಡೆದಿತ್ತು. ಪಾಕಿಸ್ತಾನದ ಸಂಸತ್ತಿನಲ್ಲಿ ಒಟ್ಟು 342 ಸ್ಥಾನಗಳಿವೆ. ಇದರಲ್ಲಿ ಸರಳ ಬಹುಮತಕ್ಕೆ ಬೇಕಾಗಿರುವುದು 172 ಸ್ಥಾನಗಳು, ಇದರಲ್ಲಿ ನೇರ ಆಯ್ಕೆಯ ಸ್ಥಾನಗಳು 272. ಆದರೆ ಉಳಿದ 70 ಸ್ಥಾನಗಳಲ್ಲಿ 60 ಸ್ಥಾನಗಳು ಮಹಿಳೆಯರಿಗಾಗಿ, ಉಳಿದ 10 ಸ್ಥಾನಗಳನ್ನು ಅಲ್ಪಸಂಖ್ಯಾತರಿಗೆ ಮೀಸಲಿಡಲಾಗಿದೆ. ಈ 70 ಸ್ಥಾನಗಳಲ್ಲಿ ಪಕ್ಷಗಳು ಪಡೆದ ಮತ ಪ್ರಮಾಣಕ್ಕೆ ಅನುಗುಣವಾಗಿ ಸ್ಥಾನಗಳನ್ನು ಹಂಚಿಕೆ ಮಾಡಲಾಗುತ್ತದೆ. ಕನಿಷ್ಟ ಪಕ್ಷ ಶೇಕಡ 5ಕ್ಕಿಂತ ಹೆಚ್ಚು ಮತ ಪಡೆದ ಪಕ್ಷಗಳನ್ನು ಮಾತ್ರ ಈ ಪದ್ಧತಿಯಲ್ಲಿ ಪರಿಗಣಿಸಲಾಗುತ್ತದೆ.

ವಿರೋಧ ಪಕ್ಷಗಳ ಬಲಾ ಬಲ

ಬೃಹತ್ ಪ್ರಮಾಣದಲ್ಲಿ ಮತಗಳ ರಿಗ್ಗಿಂಗ್ ನಡೆದಿದೆ ಎಂದು ಆರೋಪಿಸಲಾಗಿದೆ. ಒಟ್ಟಾರೆಯಾಗಿ 172 ಸ್ಥಾನಗಳನ್ನು ಸ್ವಂತ ಬಲದಿಂದ ಗೆದ್ದ ಪಕ್ಷಗಳು ಮಾತ್ರ ಸರ್ಕಾರ ರಚಿಸಲು ಸಾಧ್ಯ. ಆದರೆ ಪರಿಸ್ಥಿತಿ ಅತಂತ್ರ ಸಂಸತ್ತನ್ನು ನಿರ್ಮಿಸಿದೆ. ಪನಾಮಾ ಪೇಪರ್ಸ್ ಹಗರಣದಲ್ಲಿ ಭ್ರಷ್ಟಾಚಾರದ ಆರೋಪದ ಅಡಿಯಲ್ಲಿ ಜೈಲಿನಲ್ಲಿರುವ ಪದಚ್ಯುತ ಪ್ರಧಾನಿ ನವಾಜ್ ಷರೀಫ್ ಅವರ ಪಕ್ಷವಾದ ಪಾಕಿಸ್ತಾನ ಮುಸ್ಲಿಂ ಲೀಗ್ ನವಾಜ್ (ಪಿಎಂಎಲ್–ಎನ್) 58 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿ ಎರಡನೆಯ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಇದರಿಂದಾಗಿ ಷರೀಫ್ ಗೆ ಬಾರಿ ಮುಖಭಂಗವಾಗಿದೆ. ಬಿಲಾವಲ್ ಭುಟ್ಟೋ ಜರ್ದಾರಿ ರವರ ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಕೇವಲ 37 ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾಗಿದೆ.

ವಿವಾದಾತ್ಮಕ ಪಲಿತಾಂಶ

ಆದಾಗ್ಯೂ, ಪ್ರಮುಖ ವಿರೋಧ ಪಕ್ಷಗಳು ಈ ಚುನಾವಣೆ ವಿವಾದಾತ್ಮಕ ಚುನಾವಣೆ ಎಂದು, ಆರೋಪಗಳನ್ನು ಮಾಡಿದ್ದಾರೆ. ಪಿ.ಎಂ.ಎಲ್.–ಎನ್ ನ ಅಧ್ಯಕ್ಷ ರಾದ ಶಹಬಾಜ್ ಶರೀಫ್ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ ವ್ಯಾಪಕವಾಗಿ ಅಕ್ರಮಗಳು ನಡೆದಿವೆ. ಹಲವು ಕಡೆ ನಮ್ಮ ಏಜೆಂಟ್‌ರನ್ನು ಪೊಲೀಸ್ ರು ಹೊರದಬ್ಬಿದ್ದಾರೆ ಎಂದು ಉದಾಹರಣೆಗಳ ಮೂಲಕ ಅತಿಕ್ರಮಗಳ ಬಗ್ಗೆ ತಿಳಿಸಿದ್ದಾರೆ ಎನ್ನಲಾಗಿದೆ. ಈ ರೀತಿಯಾದ ಅತಿಕ್ರಮಗಳನ್ನು ಬಹಿರಂಗವಾಗಿಯೇ ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದಾರೆ. ರಿಗ್ಗಿಂಗಿಗೆ ಅವಕಾಶ ಕಲ್ಪಿಸಿ ಕೊಡಲಾಗಿದೆ. ಇದರಿಂದ ದೇಶಕ್ಕೆ ಸರಿಪಡಿಸಲಾಗದ ಹಾನಿ ಉಂಟಾಗುವ ಸಂಭವವಿದೆ ಎಂದು ಶರೀಫ್ ಟ್ವೀಟ್ ಅನ್ನು ಸಹ ಮಾಡಿದ್ದಾರೆ. ತಮ್ಮ ಪಕ್ಷದ ಚುನಾವಣಾ ಪ್ರತಿನಿಧಿಗಳನ್ನು ಮತಗಟ್ಟೆಗಳಿಂದ ಹೊರಹಾಕಿ ಭಾರೀ ಅಕ್ರಮಾಣ ಮಾಡಲಾಗಿದೆ ಎಂದು ಪಾಕಿಸ್ತಾನದ ಪೀಪಲ್ಸ್ ಪಕ್ಷದ ನಾಯಕ ಬಿಲಾವಲ್ ಭುಟ್ಟೋ ಜರ್ದಾರಿ ಸಹ ಆರೋಪ ಮಾಡಿ ಟ್ವೀಟ್ ಮಾಡಿದ್ದಾರೆ.



ಧಾರ್ಮಿಕ ಉಗ್ರಗಾಮಿ ಪಕ್ಷಗಳ ವೈಫಲ್ಯ

ಪಾಕಿಸ್ತಾನದಲ್ಲಿ ನಡೆದ 11ನೇಯ ಸಾರ್ವತ್ರಿಕ ಚುನಾವಣೆ ಇದಾಗಿತ್ತು. ಈ ಬಾರಿಯ ಚುನಾವಣೆಯಲ್ಲಿ ದಾರ್ಮಿಕ ಮೂಲಭೂತವಾದಿ ಪಕ್ಷಗಳು ಪ್ರಭಾವ ಬೀರುವಲ್ಲಿ ವೈಫಲ್ಯವನ್ನು ಕಂಡಿರುವುದು ಒಂದು ಕಡೆ ಯಾದರೆ, ಮತ್ತೊಂದೆಡೆ ಭ್ರಷ್ಟಾಚಾರದ ಆರೋಪ ಹೊತ್ತ ಪಕ್ಷಗಳನ್ನು ಮತದಾರರು ತಿರಸ್ಕರಿಸಿರುವುದನ್ನು ನಾವು ಸಕಾರಾತ್ಮಕವಾಗಿ ಗಮನಿಸಬೇಕಾಗಿದೆ. ಖಾದಿಮ್ ರಿಜ್ವಿ ನೇತೃತ್ವದ ತೆಹ್ರೆಕ್ ಲಬ್ಬಾಕ್ ಪಾಕಿಸ್ತಾನ್, ಮಿಲಿ ಮುಸ್ಲಿಂ ಲೀಗ್ ನ ಹಾಗೂ ಮುಂಬಯಿ ದಾಳಿಯ ಸಂಚುಕೋರನಾದ ಹಫೀಜ್ ಸಯೀದ್ ನಿಷೇಧಿತ ಜಮಾತ್ ಉಲ್ ದವಾಹ್, ಅಥವಾ 2000 ದ ದಶಕದ ಮಧ್ಯಭಾಗದಲ್ಲಿ ಖೈಬರ್ ಪಖ್ತುನ್ಖ್ವಾ ಮತ್ತು ಬಲೂಚಿಸ್ಥಾನದಲ್ಲಿ ಅಧಿಕಾರದಲ್ಲಿದ್ದ ಮುತಾಹಿದಾ ಮಜ್ಲಿಸ್ ಅಮಲ್ ಅವರುಗಳ ಬೆಂಬಲಿಗರು ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಇವರಾರಿಗೂ ಮತದಾರರು ಸೊಪ್ಪು ಹಾಕದಿರುವುದು ಸಕಾರತ್ಮಕ ಅಂಶಗಳು. ಫಲಿತಾಂಶಗಳ ಪ್ರಕಟಣೆಯಲ್ಲಿ ಹೊಸ ರೀತಿಯ ಸಂವಹನ ವ್ಯವಸ್ಥೆ ಯನ್ನು ಮೊದಲಬಾರಿಗೆ ಅನುಸರಿಸದ್ದರಿಂದ್ದ ಮತ್ತು ಅದರಲ್ಲಿ ತಾಂತ್ರಿಕ ತೊಂದರೆ ಉಂಟಾದ್ದರಿಂದ ಫಳಿತಾಂಶ ವಿಳಂಬವಾಗಿ ವಿವಾದಕ್ಕೆಡೆ ಮಾಡಿಕೊಟ್ಟಿದೆ ಎಂಬುದು ಚುನಾವಣಾ ಕಮಿಶನ್ ಸಮಜಾಯಿಷಿ.

ಇಮ್ರಾನ್ ಓರ್ವ ಕ್ರಿಕೆಟ್ ಪಟು ಅಷ್ಟೇನಾ ?

ಮಿಲಿಟರಿ ಸರ್ವಾಧಿಕಾರ ಆಡಳಿತದಲ್ಲಿಯೇ ದೀರ್ಘಕಾಲ ಕಳೆದಿರುವ ಪಾಕಿಸ್ತಾನ ದಲ್ಲಿ ಇಮ್ರಾನ್ ರವರು ಒಬ್ಬ ಕ್ರಿಕೆಟ್ ಪಟು ಅಷ್ಟೇ ಎಂದು ಬಿಂಬಿಸಲಾಗಿದೆ. ಆದರೆ, ನವ ಪಾಕಿಸ್ತಾನ ನಿರ್ಮಾಣದ ಹೆಸರಿನ ತನ್ನ ಚುನಾವಣಾ ಪ್ರಚಾರದಲ್ಲಿ ಯುವ ಮತದಾರರ ಮನಸ್ಸನ್ನು ಸೆಳೆಯುವಲ್ಲಿ ತಕ್ಷಣದಲ್ಲಿ ಯಸಸ್ಸು ಕಂಡಿರುವಂತೆ ಮೇಲ್ನೋಟಕ್ಕೆ ಕಾಣುತ್ತದೆ. ಆದರೆ ಚುನಾವಣಾ ಪ್ರಚಾರದಲ್ಲಿ ಅವರ ನಿಲುವುಗಳು ಸ್ಪಷ್ಟವಾಗಿಲ್ಲದ ಕಾರಣ ತಕ್ಷಣ ಏನನ್ನು ಹೇಳಲು ಸಾಧ್ಯವಿಲ್ಲವೆಂದಿದ್ದಾರೆ, ಪಾಕಿಸ್ತಾನದ ಮಜ್ದೂರ್ ಕಿಸಾನ್ ಪಾರ್ಟಿಯ ಟೈಮುರ್ ರೆಹಮಾನ್ರವರು.

ಟೈಮುರ್ ರವರು ತಮ್ಮ ಅಭಿಪ್ರಾಯ ವನ್ನು ಮುಂದುವರಿಸುತ್ತಾ, 'ಪಾಕಿಸ್ತಾನದ ರಾಜಕೀಯದಲ್ಲಿ ಬಲಪಂಥವನ್ನು ಪ್ರತಿನಿಧಿಸುವ ಇಮ್ರಾನ್ ರವರ ರಾಜಕೀಯ ನೀತಿಗಳನ್ನು ಎಡಪಂಥೀಯ ಮತ್ತು ಪ್ರಗತಿಪರ ಶಕ್ತಿಗಳು ವಿರೋಧಿಸುತ್ತವೆ, ಜೊತೆಗೆ ಇಮ್ರಾನ್ ರವರು ಮೊದಲಿನಿಂದಲೂ ಮಿಲಿಟರಿ ಸ್ಥಾಪನೆ ಮತ್ತು ಧಾರ್ಮಿಕ ಬಲಪಂಥೀಯ ಪಕ್ಷಗಳನ್ನೇ ಬೆಂಬಲಿಸಿಕೊಂಡು ಬರುತ್ತಿದ್ದಾರೆ ಮತ್ತು ಅವರ ಪಕ್ಷದ ಅಭ್ಯರ್ಥಿಗಳ ಪೈಕಿ ಊಳಿಗಮಾನ್ಯ ಮತ್ತು ಬಂಡವಾಳ ಶಾಹಿಗಳ ಬೆಂಬಲಿಗರೇ ಹೆಚ್ಚಾಗಿದ್ದಾರೆ ಎಂದು ಟೈಮುರ್ ಹೇಳಿದ್ದಾರೆ.

ಚುನಾವಣೆಯಲ್ಲಿ ಇಮ್ರಾನ್ ಖಾನ್ ಅವರ ಯಶಸ್ಸಿನ ಹಿಂದೆ ಹಲವು ಕಾರಣಗಳನ್ನು ತಮ್ಮ ಚುನಾವಣಾ ಫಲಿತಾಂಶಗಳ ನಂತರದ ವಿಶ್ಲೇಷಣೆಯಲ್ಲಿ ಟೈಮುರ್ ಮಾಡಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಭ್ರಷ್ಟಾಚಾರದ ಹಿನ್ನೆಲೆಯಲ್ಲಿ ಷರೀಫ್‌ರು ಜೈಲಿಗೆ ಹೋದ ನಂತರದಿಂದ ಮೊದಲುಗೊಂಡು, ಮಾದ್ಯಮ ಸಂಘಟನೆಗಳ ಪ್ರಚಾರ, ಸೆನ್ಸಾರ್ ಶಿಪ್ ನಿರೂಪಣೆ ಮತ್ತು ಎಲ್ಲಾ ಇನ್ನಿತರೆ ರಾಜಕಾರಣಿಗಳು ಹೇಗೆ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ ಎಂಬುದನ್ನು ಜನರು ನೋಡುತ್ತಿದ್ದರು. ಹಾಗೆಯೇ ಇದರ ಹಿನ್ನೆಲೆಯಲ್ಲಿ ಹೊಸ ರಾಜಕೀಯ ಮುಖವೊಂದನ್ನು ಹುಡುಕುತ್ತಿದ್ದು ಇಮ್ರಾನ್ ರವರಲ್ಲಿ ಅದನ್ನು ಆರಂಭದಿಂದಲೂ ಕಂಡಿದ್ದಾರೆ ಎಂದು ವಿವರಣೆ ನೀಡಿದ್ದಾರೆ.

ಇಮ್ರಾನ್ ಗೆಲುವಿಗೆ ಪಾಕಿಸ್ತಾನ ಸೈನ್ಯದ ಬೆಂಬಲವೇ ಪ್ರಮುಖ ಕಾರಣ

ಪಾಕಿಸ್ತಾನದ ಮಿಲಿಟರಿ ಯಾರನ್ನು ಪ್ರಧಾನಿಯನ್ನಾಗಿ ಬೆಂಬಲಿಸುತ್ತದೆಯೋ ಅವರೆ ಬಹುತೇಕ ಚುನಾವಣೆಯಲ್ಲಿ ಗೆಲ್ಲುವುದು ಎಂಬ ರಾಜಕೀಯ ಪರಿಣಿತರ ಅಭಿಪ್ರಾಯವನ್ನು ಕಡೆಗಣಿಸಲು ಸಾಧ್ಯವಿಲ್ಲ. ಈ ಬಾರಿ ಸೈನ್ಯವು ಇಮ್ರಾನ್ ಖಾನ್ ರನ್ನು ಬೆಂಬಲಿಸಿತ್ತು ಎಂಬುದು ವಾಸ್ತವಿಕ. ಈ ಹಿನ್ನೆಲೆಯಲ್ಲಿ ಚುನಾವಣೆಯಲ್ಲಿ ಅತಿಕ್ರಮ ಮತ್ತು ರಿಗ್ಗಿಂಗ್ ಅತಿಯಾಗಿ ನಡೆದಿದೆ ಎಂಬ ವಿರೋದ ಪಕ್ಷದವರ ಆರೋಪವನ್ನು ಸಹ ಸುಲಭವಾಗಿ ತಳ್ಳಿ ಹಾಕುವಂತಿಲ್ಲ. ಮತದಾನದ ಕೇಂದ್ರಗಳು ಮಿಲಿಟರಿಯ ದೊಡ್ಡ ಕ್ಯಾಂಪ್‌ಗಳಾಗಿ ಪರಿವರ್ತನೆಗೊಂಡಿದ್ದು ಸತ್ಯ. ಮತದಾನದ ಕೇಂದ್ರಗಳಲ್ಲಿ ಅಕ್ಷರಶಃ ಕಳೆದ ಕೆಲವು ತಿಂಗಳುಗಳಿಂದಲೇ ರಾಜಕೀಯ ಕೆಲಸ ಕಾರ್ಯಗಳಲ್ಲಿ ಮಿಲಿಟರಿ ತೊಡಗಿಸಿಕೊಂಡಿದ್ದು, ಜೊತೆಗೆ, ಮಿಲಿಟರಿ ನಿಸ್ಸಂಶಯವಾಗಿ ತಟಸ್ಥ ಪಾತ್ರವನ್ನು ನಿರ್ವಹಿಸಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದು ವ್ಯಾಖ್ಯಾನಿಸಲಾಗಿದೆ.

ಎಡಪಕ್ಷಗಳ ಅಭ್ಯರ್ಥಿಗಳ ಪ್ರಗತಿ

ಈ ಬಾರಿಯ ಚುನಾವಣೆಯಲ್ಲಿ ಎಡ ಪಕ್ಷಗಳ ಅಭ್ಯರ್ಥಿಗಳ ಸಂಖ್ಯೆಯಲ್ಲಿ ಪ್ರಗತಿಯಾಗಿದೆ. ಎಡ ಪಕ್ಷಗಳ ಒಟ್ಟಾರೆಯ ಕಾರ್ಯಕ್ಷಮತೆ ಹಿಂದಿನ ಚುನಾವಣೆಗಳಿಗಿಂತ ಹೆಚ್ಚು ಉತ್ತಮವಾಗಿತ್ತು. ಆದರೂ ಗುರಿ ತುಂಬಾ ದೂರದಲ್ಲಿದೆ ಎಂದು ಟೈಮುರ್ ಹೇಳಿದ್ದಾರೆ. ಈಗಾಗಲೇ, ಸುಮಾರು ಹತ್ತು ಪಕ್ಷಗಳ ಎಡ ಮತ್ತು ಪ್ರಜಾಪ್ರಭುತ್ವದ ಎಡ ಪಂಥೀಯ ವೇದಿಕೆ ಮುನ್ನೆಲೆಗೆ ಬಂದಿದೆ. ಮುಂದಿನ ದಿನಗಳಲ್ಲಿ ಈ ವೇದಿಕೆ ವಿಶಾಲವಾದ ತಳಹದಿಯಲ್ಲಿ, ಎಲ್ಲಾ ತಾತ್ವಿಕ ಅಂಶಗಳನ್ನು ಒಳಗೊಂಡು ತುಲನಾತ್ಮಕವಾಗಿ ತ್ವರಿತವಾಗಿ ಒಟ್ಟಗೆ ಬರುತ್ತವೆ ಎಂಬ ಆಶಾ ಭಾವನೆ ಯನ್ನು ಟೈಮುರ್ ವ್ಯಕ್ತಪಡಿಸಿದರು.

ಒಟ್ಟಾರೆಯಾಗಿ, ಇಮ್ರಾನ್ ರವರು ಪ್ರಧಾನಿಯಾಗಿ, ನಮ್ಮ ನರೇಂದ್ರ ಮೋದಿ ಸರ್ಕಾರ ದೊಂದಿಗೆ ಹೇಗೆ ಸಂಬಂಧವನ್ನು ಬಯಸುತ್ತಾರೆ ಎಂಬುದು ಮುಖ್ಯ ಈಗಾಗಲೇ ಫಲಿತಾಂಶ ಹೊರ ಬರುತ್ತಿದ್ದ ಹಾಗೆಯೇ, ಕಾಶ್ಮೀರ ಸಮಸ್ಯೆಯನ್ನು ಮಾತುಕತೆಗಳ ಮೂಲಕವೇ ಬಗೆಹರಿಸಿ ಕೊಳ್ಳಬೇಕೆಂದು ಹೇಳುತ್ತಲೇ, ಭಾರತ ಸರ್ಕಾರವು ತನ್ನ ನಿಲುವಿನಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕೆಂದಿದ್ದಾರೆ. ಆದರೆ ಮೋದಿ ಸರಕಾರ ಪಾಕಿಸ್ತಾನದ ಈ ಹೊಸ ರಾಜಕೀಯ ಬದಲಾವಣೆಗಳನ್ನು ಹೇಗೆ ಸ್ವೀಕರಿಸುತ್ತದೆ ಎಂಬುದು ಬಹಳ ಮುಖ್ಯ. ಹೊಸ ಪರಿಸ್ಥಿತಿ ಇದೀಗ ಆರಂಭವಾಗುತ್ತಿದೆ. ಕಾದು ನೋಡಬೇಕು. ●



JANASHAKTHI KANNADA VARA PATRIKE JULY 30-AUG 5, 2018 Price: Rs. 10/- Date of Publication: 27 JULY 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಕಲಬುರ್ಗಿಯಲ್ಲಿ ಮಾರ್ಕ್ಸ್ 200-ಕ್ಯಾಪಿಟಲ್ 150 ಆಚರಣೆ
'ಶ್ರಮ ಮತ್ತು ಎಲ್ಲಾ ಮಾನವೀಯ ಮೌಲ್ಯಗಳ ಅಪಮೌಲ್ಯ ಆಗುತ್ತಿದೆ': ಜಿ.ವಿ.ಎಸ್.

ವಸಂತರಾಜ್ ಎನ್.ಕೆ.

"ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳ ಶ್ರಮದ ಅಪಮೌಲ್ಯ ಮಾಡುತ್ತಿದೆ. ಎಲ್ಲಾ ಮಾನವೀಯ ಮೌಲ್ಯಗಳನ್ನೂ ಅಪಮೌಲ್ಯ ಮಾಡುತ್ತಿದೆ. ತೀವ್ರ ಬಡತನ ನಿರುದ್ಯೋಗ ಒಂದು ಕಡೆಗೆ, ಇನ್ನೊಂದು ಕಡೆ ಅಗಾಧ ಶ್ರೀಮಂತಿಕೆ ಮತ್ತು ಅಸಮಾನತೆ, ನಿರಂತರ ಬಿಕ್ಕಟ್ಟು, ಮಾರ್ಕ್ಸ್ 150 ವರ್ಷಗಳ ಹಿಂದೆ ಬಂಡವಾಳಶಾಹಿ ವ್ಯವಸ್ಥೆ ಬಗ್ಗೆ ಹೇಳಿದ ಎಲ್ಲವೂ ನಿಜವಾಗುತ್ತಿದೆ." ಹೀಗೆಂದವರು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ. ಅವರು ಕಲಬುರ್ಗಿಯಲ್ಲಿ ನವಕರ್ನಾಟಕ ಮತ್ತು ಕ್ರಿಯಾ ಪ್ರಕಾಶನ ಸಂಸ್ಥೆಗಳ 'ಮಾರ್ಕ್ಸ್200-ಕ್ಯಾಪಿಟಲ್150' ಯೋಜನೆಯಡಿ ಹಮ್ಮಿಕೊಂಡಿದ್ದ ಪುಸ್ತಕ ಬಿಡುಗಡೆ ಮತ್ತು ವಿಚಾರಸಂಕಿರಣದಲ್ಲಿ "ಫ್ರಾನ್ಸಿನ ಅಂತರ್ಯುದ್ಧ' ಬಿಡುಗಡೆ ಮಾಡಿ ಮಾತನಾಡುತ್ತಿದ್ದರು. ಈ ಕಾರ್ಯಕ್ರಮ ಕಲಬುರ್ಗಿಯ ಹೈದರಾಬಾದ್ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಸಭಾಂಗಣದಲ್ಲಿ ಜುಲೈ 22ರಂದು ನಡೆಯಿತು.

ಬಂಡವಾಳಶಾಹಿ ಬಿಕ್ಕಟ್ಟುಗಳ ಸಂದರ್ಭದಲ್ಲಿ ಹಿಂದೆ ಪ್ರಗತಿಪರ ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಕೈ ಮೇಲಾಗುತ್ತಿದ್ದರೆ, ಇಂದು ಜಗತ್ತಿನ ಎಲ್ಲೆಡೆ ಬಲಪಂಥೀಯ ಮೂಲಭೂತವಾದಿ ಶಕ್ತಿಗಳ ಬಲ ಹೆಚ್ಚಾಗುತ್ತಿದೆ. ಬಲಪಂಥೀಯ ಸಿದ್ಧಾಂತ ಭಾರತದ ಹಲವು ಆಯಾಮಗಳ ಬಹುತ್ವದ ಮತ್ತು ಭಾರತದ ಕಲ್ಪನೆಯನ್ನೇ ನಾಶ ಮಾಡಲು ಹೊರಟಿದೆ, ಎಂದು ಜಿ.ವಿ.ಶ್ರೀರಾಮರೆಡ್ಡಿ ಮುಂದುವರೆದು ಹೇಳಿದರು. ವೈಜ್ಞಾನಿಕ ತಳದಿಯ ಮೇಲೆ ನಿಂತಿರುವ ಮಾರ್ಕ್ಸ್‌ವಾದಿ ಸಿದ್ಧಾಂತ ಮಾತ್ರ, ಬಂಡವಾಳಶಾಹಿ ಸಿದ್ಧಾಂತಕ್ಕೆ ಸವಾಲು ಹಾಕಿ, ಇಂದಿನ ದೇಶದ ಮತ್ತು ಜಾಗತಿಕ ಸಮಸ್ಯೆಗಳಿಗೆ ಪರಿಹಾರ, ಪರ್ಯಾಯ ಒದಗಿಸಬಲ್ಲುದು. ಇದಕ್ಕಾಗಿ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಬಲಪಂಥೀಯ ಮೂಲಭೂತವಾದಿ ಶಕ್ತಿಗಳ ವಿರುದ್ಧ ಐಕ್ಯತೆಯಿಂದ ಸಂಘರ್ಷಕ್ಕಿಳಿಯಬೇಕು. ಸಂಘರ್ಷವಿಲ್ಲದೆ ಬದಲಾವಣೆ ಸಾಧ್ಯವಿಲ್ಲ. 2020ರ ಹೊತ್ತಿಗೆ ಭಾರತದ ಕಮ್ಯುನಿಸ್ಟ್ ಚಳುವಳಿಗೆ 100 ವರ್ಷ ತುಂಬಲಿದ್ದು ನಿರ್ಣಾಯಕ ಬದಲಾವಣೆ ಆಗದ್ದರ ಬಗ್ಗೆ ವಿಮರ್ಶೆ ನಡೆಸಿ ಅದರತ್ತ ತೀವ್ರವಾಗಿ ಶ್ರಮಿಸಬೇಕು ಎಂದು ಕರೆ ನೀಡಿದರು.

ಆ ಮೇಲೆ "ತತ್ವಶಾಸ್ತ್ರದ ದಾರಿದ್ರ್ಯ" ಎಂಬ ಮಾರ್ಕ್ಸ್ ಅವರ ಇನ್ನೊಂದು ಕೃತಿಯ ಅನುವಾದದ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಸಿಪಿಐ ಕೇಂದ್ರ ಮಂಡಳಿಯ ಸದಸ್ಯ ಪಿ.ವಿ. ಲೋಕೇಶ್ ಅವರು, 'ದಾಸ್ ಕ್ಯಾಪಿಟಲ್' ಜಗತ್ತಿನ ಅತ್ಯಂತ ಹೆಚ್ಚು ಭಾಷೆಗಳಿಗೆ ಅನುವಾದವಾಗಿದ್ದು, ಅತಿ ಹೆಚ್ಚು ಮಾರಾಟ ಕಂಡ ಈ ಪುಸ್ತಕದ ಕನ್ನಡ ಅನುವಾದವನ್ನು ಎರಡು ಪ್ರಗತಿಪರ ಪ್ರಕಾಶನ ಸಂಸ್ಥೆಗಳು ಜಂಟಿಯಾಗಿ ಪ್ರಕಟಿಸುತ್ತಿರುವುದು ಸ್ವಾಗತಾರ್ಹ ಎಂದರು. ರೈತ, ಕಾರ್ಮಿಕ ಮುಂತಾದ ರಂಗಗಳ ಐಕ್ಯ ಕಾರ್ಯಾಚರಣೆ ಸೈದ್ಧಾಂತಿಕ ರಂಗಕ್ಕೂ ವಿಸ್ತರಿಸಿದ್ದರ ಬಗ್ಗೆ ಹರ್ಷ ವ್ಯಕ್ತಪಡಿಸಿದರು. 150 ವರ್ಷಗಳ ನಂತರವೂ ಮಾರ್ಕ್ಸ್ ಗುರುತಿಸಿದ ವ್ಯಾಪಾರೀಕರಣ, ಧರ್ಮ ಜನತೆಯ ಅಫೀಮು ಎಂಬ ವಿದ್ಯಮಾನ ವ್ಯಾಪಕವಾಗಿ ಹರಡಿರುವುದನ್ನು ಉದಾಹರಣೆಗಳ ಸಹಿತ ವಿವರಿಸಿದರು. ಭಾರತದಲ್ಲಿ ಕ್ರಾಂತಿ ಯಾಕಾಗಿಲ್ಲ ಎಂಬುದರ ಬಗ್ಗೆ ಎಲ್ಲಾ ಎಡಶಕ್ತಿಗಳು ಆತ್ಮವಿಮರ್ಶೆ ಮಾಡಿ ಐಕ್ಯತೆಯಿಂದ ಹೋರಾಟ ಮುಂದುವರೆಸಲು ಕರೆ ನೀಡಿದರು.

ಲೇಖಕ ಚಿಂತಕ ಬಿ. ಪೀರಭಾಷಾ ಅವರು "ಫ್ರಾನ್ಸಿನ ಅಂತರ್ಯುದ್ಧ' ಕೃತಿಯ ಪರಿಚಯ ಮಾಡುತ್ತಾ ಜಗತ್ತಿನ ಮೊದಲ ಕಾರ್ಮಿಕರ ಪ್ರಭುತ್ವ ಕಟ್ಟಿದ 1871ರ ಪ್ಯಾರೀಸ್ ಕಮ್ಯೂನ್ ನ ವಿವರವಾದ ಪರಿಚಯ ಮಾಡಿಕೊಟ್ಟರು. ಕಮ್ಯೂನ್ 70 ದಿನ ಮಾತ್ರ ಬದುಕಿದ್ದರೂ ಆ ಮೇಲಿನ ಪ್ರಮುಖ ಸಮಾಜವಾದಿ ಕ್ರಾಂತಿಗಳಿಗೆ ಮಾದರಿಯಾಗಿ ಸ್ಫೂರ್ತಿ ನೀಡಿದ್ದರ ಬಗ್ಗೆ ವಿವರಿಸಿದರು. ಅದೇ ರೀತಿ ಕರ್ನಾಟಕದ ಶ್ರಮಜೀವಿಗಳ ಮೊದಲ ಕ್ರಾಂತಿಯಾದ ಕಲ್ಯಾಣ ಕ್ರಾಂತಿ ಕೆಲ ಸಮಯ ಮಾತ್ರ ಬಾಳಿದ್ದರೂ ಸಮಬಾಳಿನ ಚಳುವಳಿಗೆ ಇಂದಿಗೂ ದಾರಿದೀವಿಗೆಯಾಗಿರುವುದನ್ನು ಉದಾಹರಿಸಿದರು. ಈ ಎರಡು ಕ್ರಾಂತಿಗಳಿಗೆ 'ಬೆವರಿನ ಸಂಬಂಧ' ಇದೆಯೆಂದರು. ಪ್ಯಾರೀಸ್ ಕಮ್ಯೂನ್ ನ 70 ದಿನಗಳ ಪ್ರಜಾಪ್ರಭುತ್ವದ ಮಾದರಿ ಮತ್ತು ಇತರ ಅಮೋಘ ಸಾಧನೆಗಳ ಬಗ್ಗೆ ಅವರು ವಿವರಗಳನ್ನು ನೀಡಿದರು. ಖ್ಯಾತ ಪ್ರಗತಿಪರ ಚಿಂತಕ ಅನುವಾದಕ ಪ್ರೊ. ಆರ್.ಕೆ. ಹುಡಗಿ "ತತ್ವಶಾಸ್ತ್ರದ ದಾರಿದ್ರ್ಯ" ಕೃತಿಯ ಮತ್ತು ಮಾರ್ಕ್ಸ್‌ವಾದದ ಪ್ರಮುಖ ಅಂಶಗಳ ಪರಿಚಯ ಮಾಡಿಕೊಟ್ಟರು.

ಆ ನಂತರ "ಭಾರತದ ಕೃಷಿ ಬಿಕ್ಕಟ್ಟು – ಮಾರ್ಕ್ಸ್‌ವಾದಿ ದೃಷ್ಟಿಕೋಣ" ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ನಡೆಯಿತು. ಭಾರತೀದಾಸನ್ ವಿ.ವಿ.ಯ ವಿಶ್ರಾಂತ ಅರ್ಥಶಾಸ್ತ್ರ ಪ್ರಾಧ್ಯಾಪಕ ಪ್ರೊ. ವೆಂಕಟೇಶ ಆತ್ರೇಯ ಅವರು ಈ ಬಗ್ಗೆ ಪ್ರಬಂಧ ಮಂಡಿಸಿದರು. (ಅದರ ಸಾರಾಂಶ ಜತೆಗಿರುವ ಬಾಕ್ಸಿನಲ್ಲಿದೆ). ಆ ಮೇಲೆ ಈ ಬಗ್ಗೆ ಸಂವಾದ ನಡೆಯಿತು. ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಮಾರುತಿ ಮಾನ್ಪಡೆ ಅವರು ಅಧ್ಯಕ್ಷೀಯ ಮಾತುಗಳನ್ನಾಡಿದರು.

ಮೊದಲಿಗೆ ಸಿಪಿಐ(ಎಂ) ಕಲಬುರ್ಗಿ ಜಿಲ್ಲಾ ಕಾರ್ಯದರ್ಶಿ ಶರಣಬಸಪ್ಪ ಮಮಶೆಟ್ಟಿ ಅವರು ಸ್ವಾಗತಿಸಿದರು. ಕ್ರಿಯಾ ದ ವಸಂತರಾಜ್ ಎನ್. ಕೆ. 'ಮಾರ್ಕ್ಸ್200-ಕ್ಯಾಪಿಟಲ್150' ಯೋಜನೆಯ ಮತ್ತು ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸೂರ್ಯಕಾಂತ ಸೊನ್ನದ ವಂದನಾರ್ಪಣೆ ಮಾಡಿದರು. ಸಿಪಿಐ ಕಲಬುರ್ಗಿ ಜಿಲ್ಲಾ ಕಾರ್ಯದರ್ಶಿ ಭೀಮಾಶಂಖರ ಮಾಡ್ಯಾಳ ವೇದಿಕೆಯಲ್ಲಿ ಉಪಸ್ಥಿತರಿದ್ದರು. ●



"ಬಂಡವಾಳದ ಪುನರುತ್ಪಾದನೆಯನ್ನೂ ಮಾಡಲಾಗದ ಕೃಷಿ ಬಿಕ್ಕಟ್ಟು" : ಆತ್ರೇಯ



ಮಾರ್ಕ್ಸ್ ಮತ್ತು ಮಾರ್ಕ್ಸ್‌ವಾದ ಬಂಡವಾಳಶಾಹಿ ಬಿಕ್ಕಟ್ಟನ್ನು ಬಹಳ ನಿಖರವಾಗಿ ನಿರ್ವಚಿಸುತ್ತದೆ. ಹಾಕಿದ ಬಂಡವಾಳವನ್ನು ಪುನರುತ್ಪಾದನೆ ಸಹ ಮಾಡಲಾಗದ (ಅಂದರೆ ವಾಪಸು ಪಡೆಯಲಾಗದ) ಸ್ಥಿತಿಯನ್ನು ಬಿಕ್ಕಟ್ಟು ಎಂದು ಕರೆಯಲಾಗುತ್ತದೆ. ಕೃಷಿಯಲ್ಲಿ ಹಾಕಿದ ಬಂಡವಾಳವನ್ನು ವಾಪಸು ಸಹ (ಅದರ ಮೇಲೆ ಜೀವನಾವಶ್ಯಕ ಆದಾಯ ಗಳಿಸುವುದು ಒತ್ತಟ್ಟಿಗಿರಲಿ) ಪಡೆಯಲಾಗದ ಸ್ಥಿತಿಯನ್ನು, ಭಾರತದ ಕೃಷಿಯಲ್ಲಿ ತೊಡಗಿರುವ ಬಹುಸಂಖ್ಯಾತ ಕುಟುಂಬಗಳು ಇಂದು ತಲುಪಿವೆ ಎಂದು ಹಲವು ಅಧ್ಯಯನಗಳು ಗುರುತಿಸಿವೆ. ಆದ್ದರಿಂದ ಕೃಷಿ ಬಿಕ್ಕಟ್ಟು ಗ್ರಾಮೀಣ ಜನತೆಯ ಬಹುಭಾಗವನ್ನು ತೀವ್ರವಾಗಿ ತಟ್ಟುತ್ತಿದೆ, ಎಂದು ಪ್ರೊ. ವೆಂಕಟೇಶ ಆತ್ರೇಯ "ಭಾರತದ ಕೃಷಿ ಬಿಕ್ಕಟ್ಟು – ಮಾರ್ಕ್ಸ್‌ವಾದಿ ದೃಷ್ಟಿಕೋಣ" ಎಂಬ ವಿಷಯದ ಮೇಲೆ ಕಲಬುರ್ಗಿಯಲ್ಲಿ ಜುಲೈ 22ರಂದು 'ಮಾರ್ಕ್ಸ್200-ಕ್ಯಾಪಿಟಲ್150' ಆಚರಣೆಯ ಸಂದರ್ಭದಲ್ಲಿ ಮಾತನಾಡುತ್ತಾ ಅಭಿಪ್ರಾಯಪಟ್ಟರು.

ಕೃಷಿ ಬಿಕ್ಕಟ್ಟಿನ ತೀವ್ರತೆ ಮತ್ತು ವ್ಯಾಪಕತೆ 1991ರ ನಂತರ ವಿವಿಧ ಸರಕಾರಗಳು ಜಾರಿಗೆ ತಂದ ನವ-ಉದಾರವಾದಿ ಎಂದು ಕರೆಯಲಾಗಿರುವ ನೀತಿಗಳ ಫಲ ಎಂಬುದರ ಬಗ್ಗೆ ಅನುಮಾನವಿಲ್ಲ. ಆದರೆ ಸಾಮಾನ್ಯವಾಗಿ ಅಂದುಕೊಳ್ಳುವ ಹಾಗೆ ಲಕ್ಷಾಂತರ ರೈತ ಆತ್ಮಹತ್ಯೆಗಳು ಈ ಬಿಕ್ಕಟಿನ ಮುಖ್ಯ ಲಕ್ಷಣವಲ್ಲ. ಅದರ ಪರಿಣಾಮ ಮಾತ್ರ. ಆದರೆ ಈ ಬಿಕ್ಕಟ್ಟು ಒಟ್ಟಾರೆ ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ, ಉತ್ಪಾದಕತೆಗಳ ಬೆಳವಣಿಗೆಯ ದರ, ಉದ್ಯೋಗ ಸೃಷ್ಟಿ ಇವೆಲ್ಲದರ ಮೇಲೂ ತೀವ್ರ ದುಷ್ಪರಿಣಾಮ ಬೀರಿದೆ ಎಂಬುದು ನಿಜ. ಒಟ್ಟು ಕೃಷಿ ಉತ್ಪಾದನೆಯ ಬೆಳವಣಿಗೆಯ ವಾರ್ಷಿಕ ದರ 1950-65 ಅವಧಿಯಲ್ಲಿ ಶೇ. 3.3, 1965-75 ಅವಧಿಯಲ್ಲಿ ಶೇ. 3.2, 1975-85 ಅವಧಿಯಲ್ಲಿ ಶೇ. 2.6 ಇದ್ದಿದ್ದು, 1985-95 ಅವಧಿಯಲ್ಲಿ ಗರಿಷ್ಟ ಶೇ. 4.1 ಮುಟ್ಟಿ, ನವ-ಉದಾರವಾದಿ ಧೋರಣೆಗಳ ಫಲವಾಗಿ ಶೇ. 0.6ಕ್ಕೆ ಕುಸಿಯಿತು. ಆ ಮೇಲೆ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡಿದ್ದರೂ ಅದರಲ್ಲಿ ವಿಪರೀತ ಏರುಪೇರುಗಳಿದ್ದು ಬೆಳವಣಿಗೆ ಸುಸ್ಥಿರವಾಗಿಲ್ಲ. ಅದೇ ರೀತಿ ಕೃಷಿ ಬೆಳೆಗುಂಪುಗಳ ಉತ್ಪಾದನೆಯ ಹೆಚ್ಚಳದ ವಾರ್ಷಿಕ ದರ ಹತ್ತಿ ಬಿಟ್ಟರೆ ಎಲ್ಲಾ ಬೆಳೆಗುಂಪುಗಳಲ್ಲೂ, 1967-81 ಮತ್ತು 1981-91 ಅವಧಿಗಿಂತಲೂ, ಗಮನಾರ್ಹವಾಗಿ ಕಡಿಮೆಯಾಗಿದೆ. ಉದಾಹರಣೆಗೆ ಆಹಾರಧಾನ್ಯಗಳ ಒಟ್ಟು ಉತ್ಪಾದನೆಯ ಬೆಳವಣಿಗೆಯ ವಾರ್ಷಿಕ ದರ 1967-81 ಮತ್ತು 1981-91 ಅವಧಿಗಳಲ್ಲಿ ಶೇ. 2.29 ಮತ್ತು ಶೇ. 3.2 ಇದ್ದಿದ್ದು, 1991-2010 ಅವಧಿಯಲ್ಲಿ ಶೇ. 1.37ಕ್ಕೆ ಕುಸಿದಿದೆ. ಅದೇ ರೀತಿ ಪ್ರಮುಖ ಬೆಳೆಗುಂಪುಗಳ ಉತ್ಪಾದಕತೆ (ಪ್ರತಿ ಎಕರೆಗೆ ಉತ್ಪಾದನೆ)ಯ ಬೆಳವಣಿಗೆಯ ವಾರ್ಷಿಕ ದರದಲ್ಲಿ ಸಹ ಹತ್ತಿ ಬಿಟ್ಟರೆ ಎಲ್ಲಾ ಬೆಳೆಗುಂಪುಗಳಲ್ಲೂ 1981-91 ಅವಧಿಗಿಂತ ಗಮನಾರ್ಹವಾಗಿ ಕಡಿಮೆಯಾಗಿದೆ. ಕೆಲವು ಬೆಳೆಗುಂಪುಗಳಲ್ಲಿ (ಆಹಾರ ಧಾನ್ಯ,

ಪುಟ 11 ಕ್ಕೆ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**